ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ – ೧೨೦
ವಿಚಾರ ಸಾಹಿತ್ಯಮಾಲೆ – ೪೧
ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ
ಸಹಕಾರದೊಂದಿಗೆ

ಪ್ರಧಾನ ಸಂಪಾದಕರು
ಡಾ. ಪ್ರಧಾನ್ ಗುರುದತ್ತ

ಸಂಪಾದಕರು
ಡಾ. ಎ. ವಿ. ನರಸಿಂಹಮೂರ್ತಿ

ಅನಂತದ ಕಡೆಗೆ ಚಿಂತನೆ

(ಶ್ರೇಣಿ ೧)

ಅನಂತದ ಕಡೆಗೆ ಚಿಂತನೆ

(ಶ್ರೇಣಿ ೧)

ಆನೋ ಭದ್ರಾಃ ಕ್ರತವೋ ಯನ್ತು ವಿಶ್ವತಃ
(ಎಲ್ಲ ಸದ್ವಿಚಾರಗಳು ಎಲ್ಲೆಡೆಯಿಂದಲೂ ಬರಲಿ)
–ಋಗ್ವೇದ, I. ೮೯–೧

ಮೂಲ
ಯೋಗೇಶ್ವರ್
ಅನುವಾದ
ಶ್ರೀಮತಿ ಸೇವಂತಿ ಡಿ. ರೈ

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು
ಮತ್ತು
ಭಾರತೀಯ ವಿದ್ಯಾ ಭವನ, ಮೈಸೂರು

Ananthada Kadege Chintane (Sreni 1) **:** Kannada translation of *Tunes unto the Infinite* (Series I) by **Yogeswar ;** Kannada translation by **Smt. Sevanthi D. Rai;** Editor-in-Chief : **Dr. Pradhan Gurudatta**; Editor of the series : **Dr. A.V. Narasimha Murthy;** published under the joint auspices of **Kuvempu Bhasha Bharati Pradhikara**, Kalagrama, Jnana Bharathi, Behind Bangalore University Campus, Mallattahalli, Bangalore - 560 056, and **Bharathiya Vidya Bhavana,** Mysore; Published by **P. Narayana Swamy,** Registrar, Kuvempu Bhasha Bharathi Pradhikara : 2010; Pp. xxii + 53 ; Price: Rs. 10/-

ಮುದ್ರಣ : ೨೦೧೦
ಪುಟಗಳು : xxii + ೫೩
ಬೆಲೆ : ರೂ. ೧೦/–

ಪ್ರಕಾಶಕರು :
ಪಿ. ನಾರಾಯಣಸ್ವಾಮಿ
ರಿಜಿಸ್ಟ್ರಾರ್
ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು – ೫೬೦ ೦೫೬
ದೂ. : ೨೩೧೮೩೩೧೧, ೨೩೧೮೩೩೧೨

ಮುಖಪುಟ ವಿನ್ಯಾಸ : **ಮಯೂರ ಪ್ರಿಂಟ್ ಆಡ್ಸ್**

ಮುದ್ರಕರು :
ಮೆ॥ ಮಯೂರ ಪ್ರಿಂಟ್ ಆಡ್ಸ್
ನಂ. ೬೯, ಸುಭೇದಾರ್ ಛತ್ರಂ ರೋಡ್
ಬೆಂಗಳೂರು – ೫೬೦೦೨೦ ದೂ : ೨೩೩೪೨೭೨೪

ಬಿ.ಎಸ್. ಯಡಿಯೂರಪ್ಪ
ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು – ೫೬೦ ೦೦೧
ದಿನಾಂಕ : ೫–೮–೨೦೦೯
ಸಿಎಂ/ಪಿಎಸ್/೧೪೭/೦೯

ಮೊದಲ ಮಾತು

ಕನ್ನಡ ನಾಡಿನ ಹೆಮ್ಮೆಯ ಮಹಾಕವಿ ಶ್ರೀ ಕುವೆಂಪು ಅವರು ಕನ್ನಡದ ಕೀರ್ತಿಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಎತ್ತಿ ಹಿಡಿದ ಮಹಾಚೇತನ. ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸಂಸ್ಥಾಪಿಸಿರುವ **'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'** ರಾಷ್ಟ್ರೀಯ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಬೇಕೆಂಬುದು ಸರ್ಕಾರದ ಸದಾಶಯ. ಬೆಂಗಳೂರು **'ಜ್ಞಾನಭಾರತಿ'** ಆವರಣದಲ್ಲಿ ನಿರ್ಮಿಸಲಾಗಿರುವ ಬೃಹತ್ ಭವನದ ಸಮುಚ್ಚಯದಲ್ಲಿ ಶಿಕ್ಷಣ, ತರಬೇತಿ ಮತ್ತು ಪ್ರಕಟಣೆಗಳ ರೂಪದಲ್ಲಿ ಬಹು–ಆಯಾಮದ ಅದರ ಚಟುವಟಿಕೆಗಳು ಅರಳಿ ನಿಲ್ಲಲಿವೆ.

ಅದು ಆರಂಭಿಸಲಿರುವ ಭಾಷಾಂತರ ಮತ್ತು ತೌಲನಿಕ ಸಾಹಿತ್ಯ ಸಂಬಂಧವಾದ ವಿಶಿಷ್ಟ ಶಿಕ್ಷಣಗಳು ಆಡಳಿತ ಕ್ಷೇತ್ರ, ನ್ಯಾಯಾಂಗ ಕ್ಷೇತ್ರ ಮತ್ತು ಶಿಕ್ಷಣ ಕ್ಷೇತ್ರಗಳಿಗೆ ಪೂರಕವಾಗಿ, ಕನ್ನಡವನ್ನು ಸರ್ವತೋಮುಖವಾಗಿ ಬೆಳೆಸಲು ಸಹಾಯಕವಾಗಲಿವೆ.

ಭಾರತೀಯ ಭಾಷಾ–ಸಾಹಿತ್ಯಗಳ ಉತ್ತಮೋತ್ತಮ ಕೃತಿಗಳನ್ನು ಮಾತ್ರವಲ್ಲದೆ, ವಿಶ್ವಸಾಹಿತ್ಯದ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದಲ್ಲದೆ, ಕನ್ನಡದ ಶ್ರೇಷ್ಠ ಕೃತಿಗಳನ್ನು ಜಾಗತಿಕ ಸಾಹಿತ್ಯಕ್ಕೆ ಪರಿಚಯಿಸಿಕೊಡುವ ಕರ್ತವ್ಯದ ಜೊತೆಗೆ, ಜ್ಞಾನ–ವಿಜ್ಞಾನ ಮತ್ತು ತಂತ್ರಜ್ಞಾನದ ಮಹತ್ವದ ಕೃತಿಗಳನ್ನು ಕನ್ನಡಕ್ಕೆ ತರುವ ಮಹತ್ತರ ಕಾರ್ಯವನ್ನೂ ಅದು ಹಮ್ಮಿಕೊಳ್ಳಬೇಕಾದ ಅಗತ್ಯವಿದೆ.

ನಾಡಿನ ಶ್ರೇಷ್ಠ ವಿದ್ವಾಂಸರ ಸಲಹೆ–ಸೂಚನೆ–ಮಾರ್ಗದರ್ಶನಗಳ ಬೆಳಕಿನಲ್ಲಿ ಅದರ ಕೆಲಸ ಕಾರ್ಯಗಳು ಆದರ್ಶಪ್ರಾಯವಾಗಿ ಮೂಡಿಬರಲಿ ಹಾಗೂ ಇದೊಂದು ವಿಶಿಷ್ಟ ಸಂಸ್ಥೆಯಾಗಿ ದೇಶ–ವಿದೇಶಗಳ ಗಮನವನ್ನೂ ಸೆಳೆಯುವಂತಾಗಲಿ ಎಂದು ಹಾರೈಸುತ್ತೇನೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಚಟುವಟಿಕೆಗಳಲ್ಲಿ ಆಸಕ್ತರೆಲ್ಲರೂ ಪಾಲ್ಗೊಳ್ಳಬೇಕೆಂಬ, ಇದರ ಪ್ರಕಟಣೆಗಳನ್ನು ಜನಸಮುದಾಯ ಆದರ–ವಿಶ್ವಾಸಗಳಿಂದ ಸ್ವೀಕರಿಸುವರೆಂಬ ಆಶಯ ನಮ್ಮದಾಗಿದೆ.

ಭಾರತೀಯ ವಿದ್ಯಾಭವನದಂಥ ರಾಷ್ಟ್ರೀಯ ಮಹತ್ವದ ಸಂಸ್ಥೆಯ ಸಹಯೋಗದೊಂದಿಗೆ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ವಿದ್ಯಾಭವನದ ಗ್ರಂಥ ವಿಶ್ವವಿದ್ಯಾಲಯ ಮಾಲೆಯ ಪುಸ್ತಕಗಳನ್ನು ಹೊರತರುವ ಯೋಜನೆಯನ್ನು ಹಾಕಿಕೊಂಡಿರುವುದು ಸಂತೋಷದ ಬೆಳವಣಿಗೆಯೇ ಆಗಿದೆ. ಈ ಮಾಲೆಯ ಪುಸ್ತಕಗಳು ಕುವೆಂಪು ಭಾಷಾ ಭಾರತಿ ಮತ್ತು ಭಾರತೀಯ ವಿದ್ಯಾಭವನದ ಸಂಯುಕ್ತ ಪ್ರಕಟಣೆಗಳಾಗಿ ಹೊರಬರುತ್ತಿರುವುದೂ ಸಂತೋಷದ ಸಂಗತಿಯೇ ಆಗಿದೆ.

(ಬಿ.ಎಸ್.ಯಡಿಯೂರಪ್ಪ)

ಕರ್ನಾಟಕ ಸರ್ಕಾರ

ಗೋವಿಂದ ಎಂ. ಕಾರಜೋಳ
ಕನ್ನಡ ಮತ್ತು ಸಂಸ್ಕೃತಿ, ಸಣ್ಣ ನೀರಾವರಿ ಹಾಗೂ
ಜವಳಿ ಸಚಿವರು

ವಿಧಾನ ಸೌಧ
ಬೆಂಗಳೂರು – ೦೧

ಶುಭಾಕಾಂಕ್ಷೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರೀಯ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಈಗಾಗಲೇ ಖ್ಯಾತಿಯನ್ನು ಗಳಿಸಿದೆ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಹತ್ವದ ಸಾಹಿತ್ಯಿಕ, ಐತಿಹಾಸಿಕ, ವೈಜ್ಞಾನಿಕ ಮತ್ತು ಇತರ ಗ್ರಂಥಗಳನ್ನು ಪ್ರಕಟಿಸುವ ಮೂಲಕ ಮತ್ತು ರಾಷ್ಟ್ರೀಯ ವಿಚಾರಸಂಕಿರಣಗಳನ್ನು ಏರ್ಪಡಿಸುವ ಮೂಲಕ ಅಂತರರಾಷ್ಟ್ರೀಯ ಮಟ್ಟದ ಸಂಸ್ಥೆಯಾಗಿ ಬೆಳೆಯುವ ದಿಕ್ಕಿನಲ್ಲಿ ಮಹತ್ವದ ಹೆಜ್ಜೆಗಳನ್ನು ಇಡುತ್ತಿರುವುದು ನನಗೆ ತುಂಬ ಸಂತೋಷವನ್ನು ತಂದುಕೊಟ್ಟಿದೆ. ಈ ಮೂಲಕ ಕನ್ನಡ ನಾಡಿನ ಜನತೆಗೆ ಈಗಾಗಲೇ ಮಹತ್ವದ ಕೃತಿಗಳು ಕನ್ನಡದಲ್ಲಿ ದೊರೆಯುವಂತಾಗಿಸುವುದು ಮಾತ್ರವಲ್ಲದೆ, ಕನ್ನಡದ ಶ್ರೇಷ್ಠ ಕೃತಿಗಳ ಪರಿಚಯ ಇತರ ಭಾಷಾ ಬಾಂಧವರಿಗೂ ಆಗುವಂತೆ ಮಾಡುವ ದಿಕ್ಕಿನಲ್ಲಿ ಈ ಸಂಸ್ಥೆ ಕಾರ್ಯೋನ್ಮುಖವಾಗಬೇಕಾಗಿದೆ. ಈ ಕಾರ್ಯದಲ್ಲಿ ನಾಡಿನ ಖ್ಯಾತ ಲೇಖಕರು, ವಿದ್ವಾಂಸರು, ವಿಮರ್ಶಕರು ಸಹಕರಿಸುತ್ತಿರುವುದು ವಿಶೇಷ ಸಂಗತಿಯೇ ಆಗಿದೆ. ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಆಶ್ರಯದಲ್ಲಿ ಮುಂದಿನ ದಿನಗಳಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳು ಪ್ರಾರಂಭವಾಗಲಿರುವುದು ಸಂತೋಷದ ಸಂಗತಿ. ನಮ್ಮ ತರುಣ ಜನಾಂಗವನ್ನು ಈ ಸಾಹಿತ್ಯಿಕ–ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಿದ್ಧಗೊಳಿಸುವ ಕಾರ್ಯ ಇದರ ಮೂಲಕ ನಡೆಯುತ್ತದೆ ಎಂದು ನಂಬಿದ್ದೇನೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಕ್ರಮಗಳಲ್ಲಿ ನಾಡಿನ ಜನತೆ ಸಕ್ರಿಯವಾಗಿ ಭಾಗವಹಿಸಲಿ ಎಂದು ಹಾರೈಸುತ್ತೇನೆ.

ಗೋವಿಂದ ಎಂ. ಕಾರಜೋಳ

ಕರ್ನಾಟಕ ಸರ್ಕಾರ

ರಮೇಶ್ ಬಿ.ಝುಳಕಿ, ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ
ವಾರ್ತಾ ಇಲಾಖೆ

ವಿಕಾಸ ಸೌಧ
ಬೆಂಗಳೂರು – ೦೧

ಹಾರೈಕೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಂದ ನಮ್ಮ ನಾಡಿನ ಜನಸಮುದಾಯದ ಗಮನವನ್ನು ಸೆಳೆಯುವ ದಿಕ್ಕಿನಲ್ಲಿ ಮುನ್ನಡೆಯುತ್ತಿರುವುದು ತುಂಬ ಸಂತೋಷದ ಸಂಗತಿಯೇ ಆಗಿದೆ. ಪ್ರಾಧಿಕಾರದ ಒಂದು ಭಾಗವೇ ಆಗಿ ಕಲ್ಪಿಸಿಕೊಳ್ಳಲಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯ ಕಾರ್ಯಚಟುವಟಿಕೆಗಳ ಅಂಗವಾಗಿ ಹೊರತರಲಾಗಿದ್ದ ಸುಮಾರು ೬೦ ಗ್ರಂಥಗಳ ಜೊತೆಗೆ, ಪ್ರಾಧಿಕಾರ ಮತ್ತಷ್ಟು ಮಹತ್ವಪೂರ್ಣ ಗ್ರಂಥಗಳನ್ನು ಹೊರತರುತ್ತಿದ್ದು, ಸದ್ಯದಲ್ಲಿಯೇ ಈ ಸಂಖ್ಯೆ ನೂರರ ಗಡಿಯನ್ನು ದಾಟಲಿದೆ. 'ಭಾರತೀಯ ವಿದ್ಯಾಭವನ'ದಂಥ ರಾಷ್ಟ್ರೀಯ ಸಂಸ್ಥೆಯೊಂದಿಗೆ ಸಂಯುಕ್ತ ಕಾರ್ಯಕ್ರಮವನ್ನು ಏರ್ಪಡಿಸಿಕೊಂಡು ಪ್ರಾಧಿಕಾರ ಮುನ್ನಡೆಯಲಿರುವುದು ಪ್ರಾಧಿಕಾರದ ಚಟುವಟಿಕೆಗಳಿಗೆ ಹೊಸ ಆಯಾಮವನ್ನೇ ನೀಡಲಿದೆ ಎಂದು ನಂಬಿದ್ದೇನೆ. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ೧೪ ಸಂಪುಟಗಳ ಕನ್ನಡ ಅನುವಾದದ ಪರಿಷ್ಕರಣ, ೧೫ ರಿಂದ ಮುಂದಿನ ಸಂಪುಟಗಳ ಅನುವಾದ ಕಾರ್ಯ, ಪಂಡಿತ್ ದೀನ್‌ದಯಾಳ್ ಉಪಾಧ್ಯಾಯ ಅವರ ಸಮಗ್ರ ಕೃತಿಗಳ ಕನ್ನಡ ಅನುವಾದದ ಪ್ರಕಟಣೆ. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕನ್ನಡ ಲೇಖಕರ ಸಂಚಯಗಳ ಹಿಂದೀ ಮತ್ತು ಇಂಗ್ಲಿಷ್ ಆವೃತ್ತಿಗಳ ಪ್ರಕಟಣೆ – ಇವೇ ಮೊದಲಾದ ಮಹತ್ವದ ಕಾರ್ಯಕ್ರಮಗಳನ್ನು ಈ ಪ್ರಾಧಿಕಾರ ಹಮ್ಮಿಕೊಂಡಿರುವುದು ಸ್ತುತ್ಯರ್ಹವಾದ ಸಂಗತಿಯೇ ಆಗಿದೆ. 'ಕಾವೇರಿ ನ್ಯಾಯಾಧಿಕರಣ'ದ ತೀರ್ಪಿನ ಕನ್ನಡ ಆವೃತ್ತಿಯೂ ಸದ್ಯದಲ್ಲಿಯೇ ಹೊರಬರಲಿದೆ. ವೈಜ್ಞಾನಿಕ, ತಾಂತ್ರಿಕ ಮತ್ತು ವೈದ್ಯಕೀಯ ಸಾಹಿತ್ಯ ಪ್ರಕಟಣೆಯತ್ತಲೂ ಪ್ರಾಧಿಕಾರ ಗಮನಹರಿಸಿದೆ. ಪ್ರಾಧಿಕಾರದ ಮುನ್ನಡೆಗೆ ಕರ್ನಾಟಕ ಸರ್ಕಾರದ ಎಲ್ಲ ಬಗೆಯ ನೆರವೂ ಲಭಿಸಲಿದೆ.

ಈ ಎಲ್ಲ ಚಟುವಟಿಕೆಗಳು ಕನ್ನಡಿಗರ ಆದರ, ಮೆಚ್ಚಿಕೆ, ಸಂತೋಷಗಳಿಗೆ ಪಾತ್ರವಾಗುತ್ತದೆಂದು ನಂಬಿದ್ದೇನೆ.

(ರಮೇಶ್ ಬಿ.ಝುಳಕಿ)

ಕರ್ನಾಟಕ ಸರ್ಕಾರ

ಮನು ಬಳಿಗಾರ್
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು – ೫೬೦ ೦೦೨

ದಿನಾಂಕ : ೦೭.೦೮.೨೦೦೯

ಪ್ರಾಸ್ತಾವಿಕ ನುಡಿ

ಕುವೆಂಪು ಭಾಷಾ ಭಾರತಿ ಅಂಗವಾಗಿ ಕರ್ನಾಟಕ ಸರ್ಕಾರ ೨೦೦೫ರಲ್ಲಿ ಸ್ಥಾಪಿಸಿದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕೇವಲ ಮೂರು ವರ್ಷಗಳಲ್ಲಿ ಮಾಡಿರುವ ವೈವಿಧ್ಯಮಯವಾದ ಕಾರ್ಯವನ್ನು ನಾನು ಗಮನಿಸಿದ್ದೇನೆ. ಕುವೆಂಪು ಭಾಷಾ ಭಾರತಿಯ ಕಟ್ಟಡ ಸಮುಚ್ಚಯದ ನಿರ್ಮಾಣ ಕಾರ್ಯ ಪೂರ್ಣಗೊಂಡಿದ್ದು, ಸನ್ಮಾನ್ಯ ಮುಖ್ಯಮಂತ್ರಿಗಳು ಅದರ ಉದ್ಘಾಟನ ಕಾರ್ಯಕ್ರಮವನ್ನು ನೆರವೇರಿಸಿದ್ದಾರೆ. ವೈವಿಧ್ಯಮಯವಾದ ಮತ್ತು ವ್ಯಾಪಕವಾದ ಕಾರ್ಯಯೋಜನೆಗಳನ್ನು, ಧ್ಯೇಯೋದ್ದೇಶಗಳನ್ನು ಹೊಂದಿರುವ ಕುವೆಂಪು ಭಾಷಾ ಭಾರತಿ ಕುವೆಂಪು ಅವರ ಹೆಸರಿನಲ್ಲಿಯೇ ಸ್ಥಾಪಿತವಾಗಿದ್ದರೂ ಕುವೆಂಪು ಸಾಹಿತ್ಯದ ಪ್ರಚಾರ ಪ್ರಸಾರಗಳಿಗೆ ಮಾತ್ರವೇ ಸೀಮಿತವಾಗಿರುವುದಿಲ್ಲ. ಕುವೆಂಪು ಮಾಡಿರುವ ಅತ್ಯುಚ್ಚ ಸಾಹಿತ್ಯಿಕ ಸಾಧನೆಯ ಪ್ರತೀಕವಾಗಿ ಈ ಸಂಸ್ಥೆಗೆ ಆ ಹೆಸರನ್ನು ಕೊಡಲಾಗಿದೆ. ಕನ್ನಡ ಭಾಷಾ ಸಾಹಿತ್ಯಗಳ ಹಿರಿಯ ಸಾಧನೆಯನ್ನು ಕನ್ನಡೇತರರಿಗೆ, ದೇಶ–ವಿದೇಶಗಳ ಸಾಹಿತ್ಯಿಕ ಸಾಧನೆಯನ್ನು ಕನ್ನಡಿಗರಿಗೆ ಪರಿಚಯಿಸಿಕೊಡುವುದಲ್ಲದೆ, ಸಾಹಿತ್ಯ, ಜ್ಞಾನ–ವಿಜ್ಞಾನ–ತಂತ್ರಜ್ಞಾನಗಳ ವಿವಿಧ ಕ್ಷೇತ್ರಗಳಲ್ಲಿನ ಸಾಧನೆಗೆ ಕನ್ನಡವನ್ನು ಅಣಿಗೊಳಿಸುವ ಧ್ಯೇಯವನ್ನೂ ಇದು ಇರಿಸಿಕೊಂಡಿದೆ. ಹೀಗೆ ಇದು ಸರ್ವಭಾಷೆಗಳ ಸಾಮರಸ್ಯದ ಪ್ರತೀಕವಾದ ಸಾಹಿತ್ಯಿಕ ಸಂಸ್ಥೆಯಾಗಿ ಕೆಲಸ ಮಾಡಲಿದೆ. ಭಾಷಾಂತರ ಶಿಕ್ಷಣ, ವಿದೇಶ ಭಾಷೆಗಳ ಶಿಕ್ಷಣ, ತೌಲನಿಕ ಸಾಹಿತ್ಯಾಧ್ಯಯನ, ತರಬೇತಿ ಕಾರ್ಯಕ್ರಮಗಳು, ಪ್ರಕಟಣೆಗಳು – ಹೀಗೆ ಬಹುಮುಖವಾದ ಕಾರ್ಯಚಟುವಟಿಕೆಗಳಿಂದ ಕುವೆಂಪು ಭಾಷಾ ಭಾರತಿ ನಾಡಿನ ಹೆಮ್ಮೆಯ ಸಂಸ್ಥೆಯಾಗಿ ಬೆಳೆದು ಬರಬೇಕೆಂಬ ಆಶಯವನ್ನು ಇರಿಸಿಕೊಳ್ಳಲಾಗಿದೆ. ಕುವೆಂಪು ಭಾಷಾ ಭಾರತಿಯ ಅಂಗವಾಗಿ ಈ ಹಿಂದೆ ಸ್ಥಾಪಿತವಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕುವೆಂಪು ಭಾಷಾ ಭಾರತಿಯಲ್ಲಿ ಈಗ ವಿಲೀನಗೊಂಡಿದ್ದು, ಹೆಚ್ಚಿನ ವೈವಿಧ್ಯ ಮತ್ತು ವ್ಯಾಪ್ತಿಯ ಕಾರ್ಯಕ್ರಮಗಳಲ್ಲಿ ಅದು ತನ್ನನ್ನು ತೊಡಗಿಸಿಕೊಳ್ಳಲಿದೆ. ಈ ಅಕಾಡೆಮಿಯ ಮೂರು ವರ್ಷಗಳ ಅಲ್ಪಾವಧಿಯಲ್ಲಿ ಅಭಿನಂದನೀಯವಾದ ಕಾರ್ಯವನ್ನು ಮಾಡಿದ ಹಿರಿಯ ಬಹುಭಾಷಾ ವಿದ್ವಾಂಸರಾದ ಡಾ. ಪ್ರಧಾನ್ ಗುರುದತ್ತ ಅವರನ್ನು ಕುವೆಂಪು ಭಾಷಾ ಭಾರತಿಯ ಪ್ರಥಮಾಧ್ಯಕ್ಷರಾಗಿ ಕರ್ನಾಟಕ ಸರ್ಕಾರ ನೇಮಕ ಮಾಡಿದ್ದು,

ಅವರು ಈ ಸಂಸ್ಥೆಯ ಧ್ಯೇಯೋದ್ದೇಶಗಳನ್ನು ಈಡೇರಿಸಲು ಸಂಕಲ್ಪಬದ್ಧರಾಗಿದ್ದಾರೆ ಎಂದು ನಾನು ಭಾವಿಸಿದ್ದೇನೆ.

ಕುವೆಂಪು ಭಾಷಾ ಭಾರತಿ ತನ್ನ ವಿಶಿಷ್ಟ ಕಾರ್ಯಚಟುವಟಿಕೆಗಳಿಂದ ಕನ್ನಡಿಗರ ಮೆಚ್ಚಿನ ಸಾಹಿತ್ಯಿಕ – ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ. ಸಂಸ್ಥೆಯ ಉದ್ಘಾಟನೆಯ ಹೊತ್ತಿಗೆ ಅದರ ಅನೇಕ ಪ್ರಕಟಣೆಗಳು ಹೊರತರುತ್ತಿರುವುದು ಅದರ ಕಾರ್ಯಚಟುವಟಿಕೆಗಳ ಪ್ರತೀಕವಾಗಿದೆ. ಈ ಸಂಸ್ಥೆ ಇತೋಪ್ಯತಿಶಯವಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

ಭಾರತೀಯ ಸಂಸ್ಕೃತಿ, ಇತಿಹಾಸ ಸಾಹಿತ್ಯ ಕ್ಷೇತ್ರಗಳಿಗೆ ತನ್ನ ಪ್ರಕಟಣೆಗಳ ಮೂಲಕ ಹಾಗೂ ಶೈಕ್ಷಣಿಕ ಕಾರ್ಯಗಳ ಮುಖೇನ ಸ್ಮರಣೀಯ ಸೇವೆಯನ್ನು ಸಲ್ಲಿಸುವ ಮೂಲಕ ಭಾರತೀಯ ವಿದ್ಯಾ ಭವನ ನಾಡಿನ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಒಂದಾಗಿ ಪರಿಣಮಿಸಿದೆ. 'ಹಿಸ್ಟರಿ ಅಂಡ್ ಕಲ್ಚರ್ ಆಫ್ ದಿ ಇಂಡಿಯನ್ ಪೀಪಲ್' ಮಾಲೆಯ ಸಂಪುಟಗಳ ಮೂಲಕ ಭಾರತೀಯ ಇತಿಹಾಸ ಮತ್ತು ಸಂಸ್ಕೃತಿಗಳ ನೈಜ ಚಿತ್ರಣವನ್ನು ಮುಂದಿರಿಸಿದ ಹಿರಿಮೆಯೂ ಅದರದಾಗಿದೆ. ಜನಸಾಮಾನ್ಯರನ್ನು ದೃಷ್ಟಿಯಲ್ಲಿರಿಸಿಕೊಂಡು ರಚಿಸಲಾದ ಅದರ 'ಬುಕ್ ಯೂನಿವರ್ಸಿಟಿ' ಮಾಲೆಯ ಪುಸ್ತಕಗಳ ಕನ್ನಡ ಆವೃತ್ತಿ ಭಾರತೀಯ ವಿದ್ಯಾ ಭವನ ಮತ್ತು ಕುವೆಂಪು ಭಾಷಾ ಭಾರತಿಯ ಸಂಯುಕ್ತ ಪ್ರಕಟಣೆಗಳಾಗಿ ಹೊರಬರುತ್ತಿರುವುದು ವೈಯಕ್ತಿಕವಾಗಿಯೂ ನನಗೆ ಸಂತೋಷ ಸಮಾಧಾನಗಳನ್ನು ತಂದಿದೆ. ಈ ಪುಸ್ತಕಗಳನ್ನು ಕನ್ನಡ ಜನತೆ ಎಂದಿನಂತೆ ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

(ಮನು ಬಳಿಗಾರ್)

ಪೀಠಿಕೆ

ಶ್ರೀ ಕುವೆಂಪು ಅವರು ಕನ್ನಡ ನಾಡಿನ ಹೆಮ್ಮೆಯ ರಾಷ್ಟ್ರಕವಿ. ಕನ್ನಡದ ಇನ್ನೊಬ್ಬ ವರಕವಿಗಳಾದ ಬೇಂದ್ರೆಯವರಿಂದಲೇ ಯುಗದ ಕವಿ, ಜಗದ ಕವಿ ಎಂದು ಕೀರ್ತಿತರಾಗಿದ್ದಂಥವರು. ಕನ್ನಡದ ಹಿರಿಮೆಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸ್ತರಗಳಲ್ಲಿ ಎತ್ತಿ ಹಿಡಿದ ಮಹಾಚೇತನವೂ ಅವರಾಗಿದ್ದರು. ಸಾಹಿತ್ಯದ ಅನೇಕ ಪ್ರಕಾರಗಳಿಗೆ ಮಹತ್ವಪೂರ್ಣ ಕೊಡುಗೆಗಳನ್ನು ನೀಡಿರುವ ಹಿರಿಮೆಯೂ ಅವರದಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯಿಂದ ಹಿಡಿದು ಜ್ಞಾನಪೀಠ ಪ್ರಶಸ್ತಿಯವರೆಗೆ ರಾಷ್ಟ್ರಮಟ್ಟದ ಬಹುತೇಕ ಗೌರವ ಪ್ರಶಸ್ತಿಗಳೆಲ್ಲ ಅವರದಾಗಿವೆ. ರಾಷ್ಟ್ರಮಟ್ಟದ ಈ ಗೌರವ ಪ್ರಶಸ್ತಿಗಳೆಲ್ಲ ಕನ್ನಡದಲ್ಲಿ ಮೊದಲ ಬಾರಿಗೆ ಅವರನ್ನು ಅರಸಿಬಂದವು. ದೇಶ–ವಿದೇಶಗಳ ವಿಶ್ವವಿದ್ಯಾನಿಲಯಗಳ ಹಾಗೂ ಪ್ರತಿಷ್ಠಿತ ಸಾಹಿತ್ಯಿಕ ಸಂಸ್ಥೆಗಳ ಗೌರವಾದರಗಳಿಗೂ ಅವರು ಪಾತ್ರರಾಗಿದ್ದರು. ಶ್ರೀ ಕುವೆಂಪು ಅವರ ಶೈಕ್ಷಣಿಕ–ಸಾಹಿತ್ಯಿಕ ಹಿರಿಮೆ ಸಾಧನೆಗಳನ್ನು ಗುರುತಿಸಿ, ಅವರ ಹೆಸರಿನಲ್ಲಿ ಅಧ್ಯಯನ ಸಂಸ್ಥೆಗಳನ್ನು ಮಾತ್ರವಲ್ಲದೆ, ವಿಶ್ವವಿದ್ಯಾನಿಲಯವೊಂದನ್ನೂ ಸ್ಥಾಪಿಸಲಾಗಿದೆ. ಶ್ರೀ ಕುವೆಂಪು ಅವರ ಮಹಾಕಾವ್ಯವಾದ 'ಶ್ರೀ ರಾಮಾಯಣ ದರ್ಶನಂ' ಸೇರಿದಂತೆ ಅವರ ಸಾಹಿತ್ಯದ ಬಹ್ವಂಶ ಇಂಗ್ಲಿಷ್‌ನಂಥ ವಿದೇಶಿ ಭಾಷೆಗೆ ಮಾತ್ರವಲ್ಲದೆ ಹಿಂದಿಯಂಥ ಇತರ ಭಾರತೀಯ ಭಾಷೆಗಳಿಗೂ ಅನುವಾದಗೊಂಡಿದೆ ಎಂಬುದು ಗಮನಾರ್ಹವಾದ ಸಂಗತಿಯಾಗಿದೆ. ಶ್ರೀ ಕುವೆಂಪು ಅವರ ಈ ಹೈಮಾಚಲೋಪಮ ಸಾಧನೆಗೆ ಯೋಗ್ಯವಾದ ರಾಷ್ಟ್ರೀಯ ಮಹತ್ವದ ಸಾಹಿತ್ಯಿಕ–ಸಾಂಸ್ಕೃತಿಕ ಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂಬುದು ಮತ್ತು ಅದು ಭಾರತೀಯ ಸಾಹಿತ್ಯಿಕ ಸಾಂಸ್ಕೃತಿಕ ಲೋಕದ ಹೆಮ್ಮೆಯ ಪ್ರತೀಕವಾದ ಸಂಸ್ಥೆಯಾಗಬೇಕೆಂಬುದು ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ. ಈ ಯೋಜನೆಯ ಮೂಲ ರೂವಾರಿ ಪ್ರೊ. ದೇ. ಜವರೇಗೌಡ ಅವರು, 'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಆರಂಭಿಸಲಾಗಿದ್ದ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಈಗ ವಿಧ್ಯುಕ್ತವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'ದಲ್ಲಿ ವಿಲೀನಗೊಳಿಸಲಾಗಿದ್ದು, ಅದರ ಎಲ್ಲ ಕಾರ್ಯಚಟುವಟಿಕೆಗಳೂ ಇನ್ನಷ್ಟು ವ್ಯಾಪ್ತಿ–ವೈವಿಧ್ಯಗಳೊಂದಿಗೆ ಮುಂದುವರಿಯಲಿವೆ. 'ಕುವೆಂಪು ಭಾಷಾ ಭಾರತಿ' ಕುವೆಂಪು ಸಾಹಿತ್ಯದ ಪ್ರಚಾರ–ಪ್ರಸಾರಗಳಿಗೆ ಮಾತ್ರವೇ ಮೀಸಲಾದ ಸಂಸ್ಥೆಯಾಗಿರದೆ, ಕನ್ನಡ ಸಾಹಿತ್ಯದ ಹಿರಿಮೆ–ಗರಿಮೆಗಳನ್ನು ರಾಷ್ಟ್ರೀಯ–ಅಂತರರಾಷ್ಟ್ರೀಯ ಮಟ್ಟದಲ್ಲಿ ಮೆರೆಸುವ, ಭಾರತೀಯ ಸಾಹಿತ್ಯದ ಮತ್ತು ವಿಶ್ವಸಾಹಿತ್ಯದ ಉತ್ಕೃಷ್ಟ ಕೃತಿಗಳಿಂದ ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸುವ ಮಹದಾಶಯವನ್ನು ಹೊಂದಿದೆ.

ಬೆಂಗಳೂರು ವಿಶ್ವವಿದ್ಯಾನಿಲಯದ ಜ್ಞಾನಭಾರತಿ ಆವರಣದಲ್ಲಿ ಎರಡು ಎಕರೆಗಳಷ್ಟು ವಿಶಾಲವಾದ ಸ್ಥಳದಲ್ಲಿ 'ಕುವೆಂಪು ಭಾಷಾ ಭಾರತಿ'ಯ ಕಟ್ಟಡದ

ಶಿಲಾನ್ಯಾಸ ಕಾರ್ಯಕ್ರಮ ದಿನಾಂಕ: ೦೧–೦೯–೨೦೦೫ರಂದು ಅಂದಿನ ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎನ್. ಧರ್ಮಸಿಂಗ್ ಅವರಿಂದ ನೆರವೇರಿತು. 'ವಿಶ್ವಚೇತನ' ಮತ್ತು 'ಕಾಜಾಣ' ಎಂದು ಹೆಸರಿಸಲಾಗಿರುವ ಎರಡು ಬೃಹತ್ ಕಟ್ಟಡಗಳ ಸಮುಚ್ಚವನ್ನು ಒಳಗೊಂಡಿರುವ ಕುವೆಂಪು ಭಾಷಾ ಭಾರತಿಯ ಕಟ್ಟಡದ ನಿರ್ಮಾಣಕ್ಕೆ ಸುಮಾರು ಎರಡೂವರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದ್ದು, ೨೦೦೯ರಲ್ಲಿ ಇದರ ಕಾಮಗಾರಿ ಪೂರ್ಣಗೊಂಡಿದೆ. ಇದೇ ದಿನಾಂಕ: ೧೯–೦೮–೨೦೦೯ರ ಬೆಳಗ್ಗೆ ೧೧–೦೦ ಗಂಟೆಗೆ ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪ ಅವರು ಈ ಕಟ್ಟಡ–ಸಮುಚ್ಚಯದ ಉದ್ಘಾಟನ ಸಮಾರಂಭವನ್ನು ಹಾಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆಗಳ ಮೊದಲ ಕಂತಿನ ಹತ್ತು ಪುಸ್ತಕಗಳ ಬಿಡುಗಡೆ ಕಾರ್ಯಕ್ರಮವನ್ನು ನೆರವೇರಿಸಿದ್ದಾರೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಚಟುವಟಿಕೆಗಳ ಸ್ವರೂಪ ಮೂರು ಮುಖದ್ದಾಗಿರುತ್ತದೆ :

(ಅ) ಶೈಕ್ಷಣಿಕ ಚಟುವಟಿಕೆಗಳು ಮತ್ತು ತರಬೇತಿ ಕಾರ್ಯಗಳು
(ಆ) ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು
(ಇ) ಪ್ರಕಟಣೆಗಳು

(ಅ) ಶೈಕ್ಷಣಿಕ ಚಟುವಟಿಕೆಗಳು ಮತ್ತು ತರಬೇತಿ ಕಾರ್ಯಗಳು :

(i) "ಕನ್ನಡ ಸಾಹಿತ್ಯ ಹಿರಿಮೆ–ಗರಿಮೆಗಳಲ್ಲಿ ಯಾವ ಭಾರತೀಯ ಸಾಹಿತ್ಯಕ್ಕೂ ಕಡಿಮೆಯಾಗಿಲ್ಲ. ಅದರ ಮಹತ್ವವನ್ನು ಎತ್ತಿತೋರಿಸುವ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗಿದೆ ಅಷ್ಟೇ" ಎಂಬುದಾಗಿ ಕುವೆಂಪು ಅವರು ಉದ್ಘೋಷಿಸಿದ್ದರು. ಈ ಹಿನ್ನೆಲೆಯಲ್ಲಿ ಶೈಕ್ಷಣಿಕ ಚಟುವಟಿಕೆಗಳ ಅಂಗವಾಗಿ ಅನುವಾದ, ತೌಲನಿಕ ಸಾಹಿತ್ಯ, ವಿದೇಶಿ ಭಾಷೆಗಳ ಶಿಕ್ಷಣಕ್ಕೆ ಸಂಬಂಧಿಸಿದಂತೆ, ಈ ಕೆಳಕಂಡ ಶಿಕ್ಷಣ ಕ್ರಮಗಳನ್ನು ಆರಂಭಿಸಬೇಕೆಂದು ಯೋಜಿಸಲಾಗಿದೆ :

(೧) ಭಾಷಾಂತರ ಡಿಪ್ಲೊಮಾ ಶಿಕ್ಷಣ – ಮೊದಲ ಹಂತದಲ್ಲಿ ಇಂಗ್ಲಿಷ್, ಹಿಂದೀ, ಕನ್ನಡ, ತೆಲುಗು, ತಮಿಳು, ಮಲಯಾಳಂ, ಬಂಗಾಳಿ, ಮರಾಠಿ ಭಾಷೆಗಳಲ್ಲಿ ವಿಶೇಷ ತರಬೇತಿಗೆ ಒತ್ತುಕೊಟ್ಟು ಈ ಶಿಕ್ಷಣವನ್ನು ಪ್ರಾರಂಭಿಸಲಾಗುತ್ತದೆ.
(೨) ಭಾಷಾಂತರದಲ್ಲಿ ಎಂ.ಫಿಲ್ ಶಿಕ್ಷಣ : ವಿಶೇಷ ವಿಷಯಕ್ಕೆ ಒತ್ತುಕೊಟ್ಟು
(೩) ಪತ್ರಿಕೋದ್ಯಮ ಮತ್ತು ಭಾಷಾಂತರ
(೪) ಕಾನೂನುಶಾಸ್ತ್ರ, ಆಡಳಿತ ಭಾಷೆ ಮತ್ತು ಭಾಷಾಂತರ
(೫) ವಿಜ್ಞಾನ ಮತ್ತು ಮಾನವಿಕಶಾಸ್ತ್ರ ಕೃತಿಗಳು ಮತ್ತು ಭಾಷಾಂತರ ; ಮತ್ತು
(೬) ತೌಲನಿಕ ಸಾಹಿತ್ಯ
(೭) ವಿದೇಶೀ ಭಾಷೆಗಳ ಶಿಕ್ಷಣ (ಸರ್ಟಿಫಿಕೇಟ್ ಮತ್ತು ಡಿಪ್ಲೊಮಾ)

(ii) ಕನ್ನಡ ಸಾಹಿತ್ಯವನ್ನು ವಿಶ್ವಸಾಹಿತ್ಯದ ಮಟ್ಟದಲ್ಲಿ ಪ್ರಚುರಪಡಿಸಬೇಕಾದರೆ – ಜಾಗತಿಕ ಪ್ರಾಚುರ್ಯದ ವಿದೇಶಿ ಭಾಷೆಗಳಿಗೆ ಕನ್ನಡದ ಶ್ರೇಷ್ಠ ಕೃತಿಗಳನ್ನು

ಕೊಂಡೊಯ್ಯುವ ಮಹತ್ವದ ಕಾರ್ಯವನ್ನು ಕೈಗೊಳ್ಳಬೇಕಾಗುತ್ತದೆ. ಹೀಗಾಗಿ ಮೊದಲ ಹಂತದಲ್ಲಿ ಸ್ಪ್ಯಾನಿಷ್, ಜಪಾನಿ, ಫ್ರೆಂಚ್, ರಷ್ಯನ್, ಜರ್ಮನ್, ಚೀಣೀ, ಆಫ್ರಿಕನ್ ಭಾಷೆಗಳು – ಈ ಎಲ್ಲ ಶಿಕ್ಷಣಗಳಿಗೆ ಸಂಬಂಧಿಸಿದಂತೆ, ತಜ್ಞರೊಂದಿಗೆ ಸಮಾಲೋಚಿಸಿ ಕಾರ್ಯಕ್ರಮಗಳನ್ನು ರೂಪಿಸುವುದು, ಶಿಕ್ಷಣಕ್ಕೆ ಮತ್ತು ತರಬೇತಿಗೆ ವ್ಯವಸ್ಥೆಯನ್ನು ಕಲ್ಪಿಸುವುದು ಮೊದಲಾದ ಕಾರ್ಯಗಳನ್ನು ಸಮರೋಪಾದಿಯಲ್ಲಿ ಕೈಗೊಳ್ಳಲಾಗುತ್ತದೆ. ವಿದೇಶಿ ದೂತಾವಾಸಗಳ ನೆರವಿನೊಂದಿಗೆ ಈ ಶಿಕ್ಷಣ ಕ್ರಮಗಳನ್ನು ಯೋಜಿಸಲಾಗುತ್ತದೆ.

ವಿವಿಧ ಭಾಷೆಗಳಲ್ಲಿ ಪರಿಣತಿಯನ್ನು ಪಡೆದಿರುವಂಥ ತರುಣ ಪ್ರತಿಭೆಗಳನ್ನು ಗುರುತಿಸಿ, ಅವರಿಗೆ ತರಬೇತಿ ನೀಡಿ ಪ್ರಕಟಣಾವಕಾಶಗಳನ್ನು ಕಲ್ಪಿಸಿಕೊಡಲು ಅನುಕೂಲವಾಗುವಂತೆ ವಿಚಾರಗೋಷ್ಠಿಗಳು, ವಿಚಾರಸಂಕಿರಣಗಳು, ಕಾರ್ಯಶಿಬಿರಗಳು ಮುಂತಾದ ವೈವಿಧ್ಯಮಯ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

ಶ್ರೀ ಕುವೆಂಪು ಅವರು ಸಾಹಿತ್ಯ ಮತ್ತು ವಿಜ್ಞಾನ–ತಂತ್ರಜ್ಞಾನಗಳನ್ನು ಮಾನವ ಸಂಸ್ಕೃತಿಯ ಕಣ್ಣುಗಳೆಂದೇ ಭಾವಿಸಿದ್ದವರು. ಹೀಗಾಗಿ, ಜ್ಞಾನದ ಇತರ ಕ್ಷೇತ್ರಗಳತ್ತಲೂ ಕುವೆಂಪು ಭಾಷಾಭಾರತಿ ಕೈಚಾಚಲಿದೆ. ಈ ದೃಷ್ಟಿಯಲ್ಲಿ ಕನ್ನಡವನ್ನು ಸರ್ವಾಂಗ ಸಮೃದ್ಧವಾಗಿ ಬೆಳೆಸುವ ಅವರ ಆಶಯ ಕಾರ್ಯರೂಪಕ್ಕೆ ಬರಬಹುದಾಗಿದೆ.

ಕೇಂದ್ರ ಸರ್ಕಾರದ ರಾಷ್ಟ್ರೀಯ ಅನುವಾದ ಮಿಶನ್ ಯೋಜನೆ ಕಾರ್ಯರೂಪಕ್ಕೆ ಬರಲಿರುವ ಹಿನ್ನೆಲೆಯಲ್ಲಿ, ಇಂಥ ಶಿಕ್ಷಣಗಳನ್ನು ಪ್ರಾರಂಭಿಸುವುದಕ್ಕೆ ಹೆಚ್ಚಿನ ಅರ್ಥ ಮತ್ತು ಔಚಿತ್ಯ ದೊರೆಯುವಂತಾಗುತ್ತದೆ.

(ಆ) ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು :

ಕೇಂದ್ರ ಸಾಹಿತ್ಯ ಅಕಾಡೆಮಿ ರವೀಂದ್ರನಾಥ ಠಾಗೂರ್ ಅವರ ಪ್ರಾತಿನಿಧಿಕ ಸಂಕಲನಗಳನ್ನೊಳಗೊಂಡ 'ರವೀಂದ್ರ ಸಂಚಯ'ವನ್ನು ಹೊರತಂದಿರುವ ರೀತಿಯಲ್ಲಿಯೇ 'ಕುವೆಂಪು ಸಂಚಯ' ಮತ್ತು 'ಪು.ತಿ.ನ ಸಂಚಯ'ಗಳನ್ನು ಇಂಗ್ಲಿಷ್ ಮತ್ತು ಹಿಂದೀ ಭಾಷೆಗಳಲ್ಲಿ ಹೊರತರಲಾಗುತ್ತದೆ. ಮುಂಬರುವ ದಿನಗಳಲ್ಲಿ ಜಿ. ಎಸ್. ಶಿವರುದ್ರಪ್ಪ ಮೊದಲಾದ ಕನ್ನಡದ ಮಹತ್ವದ ಕವಿಗಳ ಸಂಕಲನಗಳನ್ನು ಇಂಗ್ಲಿಷ್ ಮತ್ತು ಹಿಂದೀ ಭಾಷೆಗಳಲ್ಲಿ ತರುವ ಯೋಜನೆಗಳನ್ನು ಹಾಕಿಕೊಳ್ಳಲಾಗುತ್ತದೆ. ಇದೇ ರೀತಿಯಲ್ಲಿ ಭಾರತೀಯ ಜ್ಞಾನಪೀಠ ಮತ್ತು ಇತರ ರಾಷ್ಟ್ರಮಟ್ಟದ ಪ್ರಶಸ್ತಿಗಳನ್ನು ಗಳಿಸಿರುವ ಶ್ರೇಷ್ಠ ಸಾಹಿತಿಗಳ ಪ್ರಾತಿನಿಧಿಕ ರಚನೆಗಳನ್ನು ಒಳಗೊಂಡ ಸಂಚಯ ಕೃತಿಗಳನ್ನು ಹೊರತರಲೂ ಕ್ರಮಕೈಗೊಳ್ಳಲಾಗುತ್ತದೆ. ಉದಾ: ಮೈಥಿಲಿ ಶರಣಗುಪ್ತ ಸಂಚಯ, ಜಯಶಂಕರ ಪ್ರಸಾದ್ ಸಂಚಯ (ಹಿಂದೀ), ವಿಶ್ವನಾಥ ಸಂಚಯ (ತೆಲುಗು), ಆಶಾಪೂರ್ಣಾದೇವಿ ಸಂಚಯ (ಬಂಗಾಳಿ), ಶಿವಶಂಕರ ಪಿಳ್ಳೈ ಮತ್ತು ಎಂ. ಟಿ. ವಾಸುದೇವ ನಾಯರ್ ಸಂಚಯ (ಮಲಯಾಳಂ) ಇತ್ಯಾದಿ.

ಕನ್ನಡ ಸಾಹಿತ್ಯವನ್ನು ರಾಷ್ಟ್ರೀಯ ಮತ್ತು ಜಾಗತಿಕ ಸ್ತರಗಳಲ್ಲಿ ಪ್ರಚುರಪಡಿಸಲು ವಿಚಾರಗೋಷ್ಠಿಗಳನ್ನು ಸಮಾರಂಭಗಳನ್ನು ಏರ್ಪಡಿಸುವಂತೆಯೇ, ಇತರ ಭಾರತೀಯ ಭಾಷಾಸಾಹಿತ್ಯ ಮತ್ತು ವಿಶ್ವಸಾಹಿತ್ಯಕ್ಕೆ ಸಂಬಂಧಪಟ್ಟಂತಹ ಇದೇ ಬಗೆಯ ಅರ್ಥಪೂರ್ಣ ಕಾರ್ಯಕ್ರಮಗಳನ್ನೂ ರೂಪಿಸಲಾಗುತ್ತದೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರೀಯ ಧ್ಯೇಯೋದ್ದೇಶಗಳಿಗೆ

ಪೂರಕವೂ–ಪ್ರೇರಕವೂ ಆಗುವಂತೆ, ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ರೂಪಿಸುತ್ತದೆ. ಅಂತೆಯೇ, ರಾಷ್ಟ್ರಮಟ್ಟದ ಸಾಹಿತ್ಯಿಕ ಸಂಘ–ಸಂಸ್ಥೆಗಳಾಗಿರುವ ಕೇಂದ್ರ ಸಾಹಿತ್ಯ ಅಕಾಡೆಮಿ, ನ್ಯಾಷನಲ್ ಬುಕ್ ಟ್ರಸ್ಟ್, ಬಿರ್ಲಾ ಪ್ರತಿಷ್ಠಾನ ಮೊದಲಾದವುಗಳಲ್ಲಿನ ಕಾರ್ಯಕ್ರಮಗಳ ಪುನರಾವರ್ತನೆಯಾಗದಂತೆ ವಿಶಿಷ್ಟ ರೀತಿಯಲ್ಲಿ ಕುವೆಂಪು ಭಾಷಾಭಾರತಿ ಕಾರ್ಯಯೋಜನೆಗಳನ್ನು ರೂಪಿಸಲಾಗುತ್ತದೆ.

ರಾಷ್ಟ್ರೀಯ ಪ್ರಶಸ್ತಿ : ರಾಷ್ಟ್ರಮಟ್ಟದಲ್ಲಿ ಕುವೆಂಪು ಅವರ ಹೆಸರಿನಲ್ಲಿ ರಾಷ್ಟ್ರಮಟ್ಟದ ಪ್ರಶಸ್ತಿಯೊಂದನ್ನು ಸ್ಥಾಪಿಸಿ, ನಾಡಿನ ಶ್ರೇಷ್ಠ ಸಾಹಿತಿಗಳನ್ನು ಗುರುತಿಸಿ ಸನ್ಮಾನಿಸಲು ಹಾಗೂ ಅಂತಹವರ ಪ್ರಮುಖ ಕೃತಿಗಳನ್ನು ಕನ್ನಡದಲ್ಲಿ ಹೊರತರಲು ಯೋಜನೆಗಳನ್ನು ರೂಪಿಸಲಾಗುತ್ತದೆ.

ತರುಣ ಪ್ರತಿಭೆಗಳಿಗೆ ಪ್ರೋತ್ಸಾಹ : ತರುಣ ಪ್ರತಿಭೆಗಳನ್ನು ಗುರುತಿಸಿ, ವಿವಿಧ ಭಾರತೀಯ ಭಾಷೆಗಳಲ್ಲಿ ವಿಶೇಷ ತರಬೇತಿ ಲಭ್ಯವಾಗುವಂತೆ ಮಾಡಿ, ಮುಂದೆ ಸಾಹಿತ್ಯಿಕ ಕೊಳು–ಕೊಡೆ ಕಾರ್ಯದಲ್ಲಿ ಅವರು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಲು ವಿವಿಧ ರಾಜ್ಯಸರ್ಕಾರಗಳ ನೆರವಿನೊಂದಿಗೆ ಶಿಷ್ಯವೇತನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಬೇಕೆಂದು ಯೋಜಿಸಲಾಗಿದೆ.

(ಇ) ಪ್ರಕಟಣೆಗಳು :

'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಸ್ಥಾಪಿಸಲಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕಳೆದ ವರ್ಷವಷ್ಟೇ ೫೬ ಪುಸ್ತಕಗಳನ್ನು ಹೊರತಂದಿದ್ದು, ಕಳೆದ ೮ ತಿಂಗಳ ಅವಧಿಯಲ್ಲಿ ಸುಮಾರು ೧೦.೦೦ ಲಕ್ಷ ರೂಗಳನ್ನು ಮಾರಾಟದ ಮೂಲಕವೇ ಗಳಿಸಿಕೊಂಡಿದೆ. ಮುಂದೆ ಹಮ್ಮಿಕೊಳ್ಳಲಿರುವ ಹಾಗೂ ಮುನ್ನಡೆಯುತ್ತಿರುವ ಮಹತ್ವದ ಯೋಜನೆಗಳಲ್ಲಿ ಜೆ. ಡಿ. ಬರ್ನಾಲ್ ಅವರ 'ಸೈನ್ಸ್ ಇನ್ ಹಿಸ್ಟರಿ' ಗ್ರಂಥದ ನಾಲ್ಕು ಸಂಪುಟಗಳು, ವಿಲ್ ಡ್ಯೂರಾಂಟ್ ಅವರ 'ಸ್ಟೋರಿ ಆಫ್ ಸಿವಿಲಿಜೇಷನ್'ನ ಎಂಟು ಸಂಪುಟಗಳು (೪ರಿಂದ ೧೧), ವಿಜ್ಞಾನ–ತಂತ್ರಜ್ಞಾನಗಳಿಗೆ ಸಂಬಂಧಿಸಿದ ಸುಮಾರು ೧೦೦ ಗ್ರಂಥಗಳು, ಸೋಮದೇವನ 'ಕಥಾಸರಿತ್ಸಾಗರ'ದ ಐದು ಸಂಪುಟಗಳು (೬ರಿಂದ ೧೦) – ಇವನ್ನು ಮುಖ್ಯವಾಗಿ ಹೆಸರಿಸಬಹುದಾಗಿದೆ. 'ಭಾರತೀಯ ವಿಜ್ಞಾನ ಸಂಸ್ಥೆ'ಯಂಥ ಅಂತರರಾಷ್ಟ್ರೀಯ ಖ್ಯಾತಿಯ ಸಂಶೋಧನ ಸಂಸ್ಥೆಯ ಸಹಕಾರದೊಂದಿಗೆ ಇಂಗ್ಲಿಷ್ ಮತ್ತು ಜಾಪನೀಸ್ ಭಾಷೆಗಳಲ್ಲಿ ಮಾತ್ರ ಲಭ್ಯವಿರುವ 'ಶಾಕ್ ವೇವ್ಸ್'ನಂಥ ಗ್ರಂಥವೂ ಕನ್ನಡದಲ್ಲಿ ಹೊರಬರಲಿದೆ. ಭಾರತೀಯ ವಿದ್ಯಾಭವನದ ಗ್ರಂಥ ವಿಶ್ವವಿದ್ಯಾನಿಲಯ ಮಾಲಿಕೆಯ ಮೊದಲಕಂತಿನಲ್ಲಿ ಈ ಮಾಲಿಕೆಯ ೨೫ ಪುಸ್ತಕಗಳು ಸಂಯುಕ್ತ ಪ್ರಕಟಣೆಗಳಾಗಿ ಬರಲಿವೆ. 'ಅಂತರರಾಷ್ಟ್ರೀಯ ಕನಕದಾಸ ಮಿಷನ್' ಸಂಸ್ಥೆಯ ನೆರವಿನೊಂದಿಗೆ ಕನಕದಾಸರ ಸಾಹಿತ್ಯದ ಅನುವಾದ ಕಾರ್ಯವೂ ಆರಂಭಗೊಳ್ಳಲಿದೆ. ಹೀಗಾಗಿ, ಕನ್ನಡ ಪ್ರಕಾಶನದ ಕ್ಷೇತ್ರದಲ್ಲಿಯೂ, ಮಹತ್ವದ ಹೆಜ್ಜೆ ಗುರುತುಗಳನ್ನು ಕುವೆಂಪು ಭಾಷಾ ಭಾರತಿ ಮೂಡಿಸುತ್ತ ಮುನ್ನಡೆಯಲಿದೆ.

ಖಾಸಗಿ ಪ್ರಕಾಶಕರ ಸಹಭಾಗಿತ್ವ : ಖಾಸಗಿ ಪ್ರಕಾಶಕರ ಸಹಾಯ–ಸಹಕಾರಗಳೊಂದಿಗೆ ಕನ್ನಡ ಸಾಹಿತ್ಯವನ್ನು ರಾಷ್ಟ್ರೀಯ ಮಟ್ಟದಲ್ಲಿ ಪ್ರಚುರಗೊಳಿಸುವ

ಸಲುವಾಗಿ ರಾಜ್ಯ ಸರ್ಕಾರ ವಿಶೇಷ ಯೋಜನೆಯೊಂದಕ್ಕೆ ಅನುಮತಿ ನೀಡಿದೆ. ಅದರ ಮೇರೆಗೆ ಕನ್ನಡ ಸಾಹಿತ್ಯ ಕೃತಿಗಳನ್ನು ಇತರ ಭಾರತೀಯ ಮತ್ತು ವಿದೇಶೀ ಭಾಷೆಗಳಲ್ಲಿ ಹೊರತರುವ ಪ್ರತಿಷ್ಠಿತ ಪ್ರಕಾಶನ ಸಂಸ್ಥೆಗಳಿಗೆ ಪ್ರಕಟಣೆಯ ಮೂಲಧನವನ್ನು ಮುಂಗಡವಾಗಿ ನೀಡಿ, ಮೂರು ವರ್ಷಗಳಲ್ಲಿ ಅವರು ಈ ಮುಂಗಡ ಹಣವನ್ನು ಹಿಂದಿರುಗಿಸುವಂತೆ ಈ ಕಾರ್ಯಕ್ರಮ ರೂಪಿಸಲಾಗಿದೆ. ಇತರ ಕ್ಷೇತ್ರಗಳಿಗೆ ಸರ್ಕಾರಗಳು ಅನೇಕ ರೀತಿಯಲ್ಲಿ ನೆರವಾಗುತ್ತಿದ್ದರೂ, ಪ್ರಕಟಣ ಕ್ಷೇತ್ರಕ್ಕೆ ಈ ಬಗೆಯ ನೆರವು ಇಲ್ಲದಿದ್ದರಿಂದ ಇದೊಂದು ಬಗೆಯ ವಿನೂತನ ಯೋಜನೆ ಆಗಿದೆ ಎಂದೂ, ಇಂಥ ಯೋಜನೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದಾಗಿಯೂ ಅನೇಕ ಪ್ರಕಾಶನ ಸಂಸ್ಥೆಗಳು ಈಗಾಗಲೇ ಮುಂದೆ ಬಂದಿವೆ. ಈ ದಿಕ್ಕಿನಲ್ಲಿ ವ್ಯವಸ್ಥಿತ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ. ಹೀಗೆ ಪ್ರಕಟಣೆಯ ಕಾರ್ಯ ಕೈಗೊಳ್ಳುವ ಮೂಲಕ ಕನ್ನಡೇತರ ಭಾಷಾ–ಸಾಹಿತ್ಯ ವಲಯಗಳಲ್ಲಿ ಕನ್ನಡದ ಮೇರು ಕೃತಿಗಳು ಪರಿಚಯಗೊಳ್ಳಲೂ, ಜನಪ್ರಿಯವಾಗಲೂ ಸಹಾಯವಾಗುತ್ತದೆಂದು ನಂಬಲಾಗಿದೆ.

ಕರ್ನಾಟಕ ಸರ್ಕಾರದ ಉದಾರ ನೆರವಿನಿಂದ ಇಂಥ ಮಹತ್ವದ ಮತ್ತು ಬಹು ಆಯಾಮದ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳುವ ಮೂಲಕ ಭಾರತೀಯ ಮತ್ತು ವಿದೇಶಿ ಭಾಷೆಗಳ ನಡುವೆ ಒಂದು ಸಾಂಸ್ಕೃತಿಕ ಸೇತುವೆಯಾಗಿ, ಮಿನಿ ವಿಶ್ವವಿದ್ಯಾನಿಲಯವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ' ಕಾರ್ಯ ನಿರ್ವಹಿಸಲಿದೆ. ನಾಡಿನ ಗಣ್ಯ ವಿದ್ವಾಂಸರ ಸಹಾಯ–ಸಹಕಾರಗಳನ್ನು ಪಡೆದುಕೊಂಡು ಈ ಕಾರ್ಯ ನಿರ್ವಹಿಸಲಾಗುತ್ತದೆ. ಹೀಗಾಗಿ, ಕುವೆಂಪು ಭಾಷಾ ಭಾರತಿ ಕನ್ನಡ ನಾಡಿನ ಇತಿಹಾಸದಲ್ಲಿ ಮಾತ್ರವಲ್ಲದೆ, ಭಾರತೀಯ ಸಾಹಿತ್ಯಿಕ–ಸಾಂಸ್ಕೃತಿಕ ಕ್ಷೇತ್ರದಲ್ಲಿ ಒಂದು ಮಹತ್ವದ ಸಂಸ್ಥೆಯಾಗಿ ರೂಪುಗೊಳ್ಳಲಿದೆಯೆಂದೂ, ಕನ್ನಡ ನಾಡಿನ ವಿದ್ವತ್‌ವಲಯಕ್ಕೆ, ಸಾಹಿತ್ಯ ಪ್ರೇಮಿಗಳಿಗೆ, ಕುವೆಂಪು ಅವರ ಅಭಿಮಾನಿಗಳಿಗೆ ಇದು ಸಂತಸದ ಸಂಗತಿ ಆಗಲಿದೆ ಎಂದೂ ನಂಬಿದ್ದೇವೆ.

ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರ ಡಾ. ಎ. ವಿ. ನರಸಿಂಹ ಮೂರ್ತಿ ಅವರ ದಕ್ಷ ಮಾರ್ಗದರ್ಶನದಲ್ಲಿ ಮಹತ್ವದ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಮೂಲಕ ಕನ್ನಡ ನಾಡಿನ ವಿದ್ವತ್ ಸಮುದಾಯದ ಹಾಗೂ ಸಾಹಿತ್ಯ ಸಂಸ್ಕೃತಿ ಇತಿಹಾಸ ಪ್ರಿಯರ ಮೆಚ್ಚುಗೆಯನ್ನು ಸೂರೆಗೊಂಡಿದೆ. ಕನ್ನಡ ಸಾಹಿತ್ಯ ಲೋಕದ ಹಿರಿಯ ಚೇತನಗಳನ್ನು ಪರಿಚಯಿಸಿಕೊಡುವ ಅದರ ಮಾಲಿಕೆ ಪ್ರಾದೇಶಿಕ ಭಾಷಾ ಸಂಸ್ಕೃತಿ–ಸಾಹಿತ್ಯಗಳ ಬಗೆಗಿನ ಅದರ ಬದ್ಧತೆಗೂ ಸಾಕ್ಷಿಯಾಗಿದೆ. 'ಭವನ್ಸ್ ಬುಕ್ ಯೂನಿವರ್ಸಿಟಿ' ಮಾಲೆಯಲ್ಲಿ ಶ್ರೀಸಾಮಾನ್ಯರಿಗೆ ಮಾತ್ರವಲ್ಲದೆ, ಸಾಹಿತ್ಯ ಸಂಸ್ಕೃತಿ ಇತಿಹಾಸಗಳ ಬಗ್ಗೆ ಆಸಕ್ತರಾಗಿರುವ ಎಲ್ಲರಿಗೂ ಬೋಧಪ್ರದವಾಗಿರುವಂಥ ಕಿರುಹೊತ್ತಿಗೆಗಳನ್ನು ಹೊರತರಲಾಗಿದೆ. ಆಕಾರದಲ್ಲಿ ಕಿರಿದಾದರೂ ಮಹತ್ವದಲ್ಲಿ ಏನೂ ಕಡಿಮೆ ಇಲ್ಲದ ಈ ಪುಸ್ತಕಗಳನ್ನು ಕನ್ನಡದಲ್ಲೂ ಹೊರತರುವ ಯೋಜನೆಯಲ್ಲಿ ಭಾಗಿಯಾಗುವುದು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಹೆಮ್ಮೆಯ ವಿಷಯವಾಗಿದೆ. ಭಾಗೀದಾರಿಕೆಯ ಈ ಸಲಹೆಗೆ ವ್ಯಾವಹಾರಿಕವೂ, ಕಾರ್ಯಾತ್ಮಕವೂ ಆದ ರೂಪವನ್ನು ನೀಡುವಲ್ಲಿ ಪ್ರಧಾನ ಪಾತ್ರವಹಿಸಿರುವ ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ ಅಧ್ಯಕ್ಷರಾಗಿರುವ

ಡಾ. ಎ.ವಿ. ನರಸಿಂಹಮೂರ್ತಿ ಅವರಿಗೂ, ಕನ್ನಡ ಪ್ರಕಾಶನ ಕಾರ್ಯಕಾರಿ ಮಂಡಳಿಯ ಅಧ್ಯಕ್ಷರಾಗಿರುವ ಶ್ರೀ ಎನ್. ರಾಮಾನುಜ ಅವರಿಗೂ ವಿದ್ಯಾ ಭವನದ ಬೆಂಗಳೂರು ಶಾಖೆಯ ಕಾರ್ಯಕಾರಿ ನಿರ್ದೇಶಕರಾಗಿರುವ ಪದ್ಮಶ್ರೀ ಡಾ. ಮತ್ತೂರು ಕೃಷ್ಣಮೂರ್ತಿ ಅವರಿಗೂ, ಕಾರ್ಯಕ್ರಮ ಮತ್ತು ಯೋಜನೆಗಳ ನಿರ್ದೇಶಕರಾಗಿರುವ ಶ್ರೀ ಎಚ್.ಎನ್. ಸುರೇಶ್ ಅವರಿಗೂ ಭಾರತೀಯ ವಿದ್ಯಾ ಭವನದ ಕೇಂದ್ರ ಕಛೇರಿಯ ಪದಾಧಿಕಾರಿಗಳಿಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತದೆ.

ಅರುವತ್ತರ ದಶಕದಲ್ಲಿ ಈ ಮಾಲೆಯನ್ನು ಆರಂಭಿಸಿದಾಗ ಇದನ್ನು 'ಒಂದು ರೂಪಾಯಿ ಮಾಲೆ' ಎಂದೇ ಕರೆಯಲಾಗಿತ್ತು. ಈಗಲೂ ಜನಸಾಮಾನ್ಯರಿಗೆ ಸುಲಭ ದರದಲ್ಲಿ ಈ ಪುಸ್ತಕಗಳನ್ನು ತಲುಪಿಸುವ ಉದ್ದೇಶದಿಂದ ಈ ಮಾಲೆಯ ಎಲ್ಲ ಪುಸ್ತಕಗಳಿಗೂ ಹತ್ತು ರೂ.ಗಳ ಸಾಂಕೇತಿಕ ದರವನ್ನೇ ಗೊತ್ತು ಪಡಿಸಲಾಗಿದೆ. ಪ್ರಕಟಣೆಯ ವೆಚ್ಚದ ಒಂದು ಭಾಗವನ್ನು ವಿದ್ಯಾ ಭವನ ಭರಿಸಿರುವುದು ಇದಕ್ಕೆ ಕಾರಣವಾಗಿದೆ. ಈ ಸೌಹಾರ್ದತೆಗಾಗಿಯೂ ನಾವು ವಿದ್ಯಾಭವನದ ಎಲ್ಲ ಪದಾಧಿಕಾರಿಗಳಿಗೆ ವಂದನೆಗಳನ್ನು ಸಲ್ಲಿಸಬಯಸುತ್ತೇವೆ.

ಈ ಮಾಲೆಯ ೨೫ ಪುಸ್ತಕಗಳು ಒಮ್ಮೆಗೇ ಹೊರ ಬರುತ್ತಿರುವುದಕ್ಕೆ ಬೆಂಗಳೂರು ಕೇಂದ್ರದ ತ್ರಿಮೂರ್ತಿಗಳ ಸಹಾಯ ಸಹಕಾರ ಮತ್ತು ಮಾರ್ಗದರ್ಶನಗಳು ಮಾತ್ರವಲ್ಲದೆ ಡಾ. ಎ. ವಿ. ನರಸಿಂಹಮೂರ್ತಿಯವರ ದಕ್ಷ ಸಂಪಾದಕತ್ವ ಮತ್ತು ಕಾರ್ಯಪಟುತ್ವಗಳು ಕಾರಣವಾಗಿವೆ. ಇದು ನಮಗೆ ಸಂತೋಷವನ್ನೂ ಹೆಮ್ಮೆಯನ್ನೂ ತಂದುಕೊಟ್ಟಿದೆ. ಇವನ್ನು ಸುಂದರವಾಗಿ ಹೊರತರುವಲಿಯೂ ಅವರಿಂದ ನಮಗೆ ಸಲಹೆ ಸೂಚನೆಗಳು ದೊರೆತಿವೆ. ಈ ಎಲ್ಲ ಕೃಪೆಗಾಗಿ ನಾನು ಆ ಎಲ್ಲ ಮಹನೀಯರಿಗೂ ಕೃತಜ್ಞತಾಪೂರಕವಾದ ವಂದನೆಗಳನ್ನು ಸಲ್ಲಿಸಬಯಸುತ್ತೇನೆ.

ಈ ಪುಸ್ತಿಕೆಯ ಕನ್ನಡ ಆವೃತ್ತಿಯನ್ನು ಸಿದ್ಧಪಡಿಸಿ ಕೊಟ್ಟಿರುವ ಶ್ರೀಮತಿ ಸೇವಂತಿ ಡಿ.ರೈ ಅವರಿಗೂ, ಕರಡುಗಳ ಪರಿಶೀಲನೆಯಲ್ಲಿ ಸಹಕರಿಸಿರುವ ಶ್ರೀಮತಿ ಬಿ. ಸುಧಾ ಅವರಿಗೂ ನಮ್ಮ ವಂದನೆಗಳು.

ಪ್ರಾಧಿಕಾರದ ಕೆಲಸ–ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಪ್ರಾಧಿಕಾರದ ರಿಜಿಸ್ಟ್ರಾರ್ ಪಿ. ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿ ವರ್ಗದವರಿಗೂ, ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ॥ ಮಯೂರ ಪ್ರಿಂಟ್ ಆಡ್ಸ್‌ನ ಶ್ರೀ ಬಿ. ಎಲ್. ಶ್ರೀನಿವಾಸ ಮತ್ತು ಅವರ ಸಿಬ್ಬಂದಿ ವರ್ಗದವರಿಗೂ ನಮ್ಮ ವಂದನೆಗಳು.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಬೆಂಗಳೂರು – ೫೬

ಪ್ರಧಾನ್ ಗುರುದತ್ತ
ಅಧ್ಯಕ್ಷ

ಅರಿಕೆ

ಭಾರತೀಯ ವಿದ್ಯಾಭವನದ ಸ್ಥಾಪಕರಾದ ಕುಲಪತಿ ಡಾ. ಕೆ. ಎಂ. ಮುನ್ಷಿಯವರು ಜನಸಾಮಾನ್ಯರಲ್ಲಿ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳನ್ನು ಪರಿಚಯಿಸುವ ದೃಷ್ಟಿಯಿಂದ ಭವನ್ಸ್ ಬುಕ್ ಯೂನಿವರ್ಸಿಟಿ ಹಾಗೂ ಅದರಲ್ಲೇ ಸೇರಿಕೊಂಡಿರುವಂತೆ ಒಂದು ರೂಪಾಯಿ ಪುಸ್ತಕ ಮಾಲಿಕೆಯನ್ನು ಆರಂಭಿಸಿದರು. ಇವು ಜನಪ್ರಿಯವಾಗಿ ಅನೇಕ ಶ್ರೇಷ್ಠ ಲೇಖಕರ ಕೃತಿಗಳು ಈ ಮಾಲಿಕೆಯಲ್ಲಿ ಪ್ರಕಟಗೊಂಡಿವೆ. ಅನೇಕ ಈ ಪುಸ್ತಕಗಳು ನಾಲ್ಕಾರು ಮುದ್ರಣಗಳನ್ನು ಕಂಡಿವೆ.

ಇಂತಹ ಶ್ರೇಷ್ಠ ಪುಸ್ತಕಗಳು ಕನ್ನಡ ಭಾಷೆಯಲ್ಲಿ ಲಭ್ಯವಿಲ್ಲದುದನ್ನು ಗಮನಿಸಿದ ಭಾರತೀಯ ವಿದ್ಯಾಭವನ ಇದಕ್ಕಾಗಿ ಒಂದು ಯೋಜನೆಯನ್ನು ಹಾಕಿಕೊಂಡಿದೆ. ಇದರಲ್ಲಿ ಡಾ. ಮತ್ತೂರು ಕೃಷ್ಣಮೂರ್ತಿಗಳ ಪಾತ್ರ ಹಿರಿದಾದುದು; ಅವರು ಅನೇಕ ಸೂಚನೆ, ಸಲಹೆಗಳನ್ನು ನೀಡಿದ್ದಾರೆ. ಇದರಿಂದಾಗಿ ಶ್ರೇಷ್ಠ ಲೇಖಕರ ಚಿಂತನೆಗಳು ಕನ್ನಡ ಜನಗಳಿಗೆ ದೊರಕುವ ಹಾಗೂ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳ ಪರಿಚಯ ಕರ್ನಾಟಕದ ಓದುಗರಿಗೆ ಆಗುವಂತೆಯೂ ಆಯಿತು. ಭಾರತೀಯ ವಿದ್ಯಾಭವನದ ಮುಂಬಯಿ ಪ್ರಧಾನ ಕೇಂದ್ರದ ಎಕ್ಸಿಕ್ಯುಟಿವ್ ಸೆಕ್ರೆಟರಿ ಹಾಗೂ ಡೈರೆಕ್ಟರ್ ಜನರಲ್ ಆಗಿರುವ ಶ್ರೀ ಎಚ್. ಎನ್. ದಸ್ತೂರ್ ಅವರು ಈ ಯೋಜನೆಗೆ ಅನುಮತಿ ನೀಡಿ ಸಹಕರಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಬೆಂಗಳೂರು ಮತ್ತು ಮೈಸೂರಿನ ಭಾರತೀಯ ವಿದ್ಯಾಭವನಗಳ ಎಲ್ಲ ಪದಾಧಿಕಾರಿಗಳೂ ಈ ಯೋಜನೆಯಲ್ಲಿ ಆಸಕ್ತಿವಹಿಸಿದ್ದಾರೆ. ಕರ್ನಾಟಕದ ಖ್ಯಾತ ಲೇಖಕರು ಈ ಕನ್ನಡ ಕೈಂಕರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸಿ, ಭಾಷಾಂತರಗಳನ್ನು ಮಾಡಿಕೊಟ್ಟಿದ್ದಾರೆ.

ಖ್ಯಾತ ಕನ್ನಡ ವಿದ್ವಾಂಸರೂ, ಕುವೆಂಪು ಕನ್ನಡ ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಡಾ. ಪ್ರಧಾನ್ ಗುರುದತ್ತ ಅವರು ಈ ಪುಸ್ತಕಗಳ ಪ್ರಕಟಣೆಯ ಭಾರವನ್ನು ವಹಿಸಿಕೊಂಡು ನಮಗೆ ಉಪಕರಿಸಿದ್ದಾರೆ. ಇಷ್ಟು ಶೀಘ್ರದಲ್ಲಿ ಈ ಪುಸ್ತಕಗಳು ಪ್ರಕಟವಾಗುತ್ತಿರುವುದಕ್ಕೆ ಅವರ ಆಸಕ್ತಿ ಮತ್ತು ಕಾರ್ಯಶೀಲತೆಯೇ ಮುಖ್ಯ ಕಾರಣ. ಅವರಿಗೆ ಭಾರತೀಯ ವಿದ್ಯಾಭವನದ ಪರವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

ಪ್ರಸ್ತುತ, 'ಅನಂತದ ಕಡೆಗೆ ಚಿಂತನೆ' ಎಂಬ ಪುಸ್ತಕ ಖ್ಯಾತ ಲೇಖಕಿ ಶ್ರೀಮತಿ ಸೇವಂತಿ ಡಿ.ರೈ ಅವರ ಸಮರ್ಥ ಅನುವಾದ. ಅವರಿಗೆ ನಮ್ಮ ಕೃತಜ್ಞತೆಗಳು. ಈ ಪುಸ್ತಕವನ್ನು ಕನ್ನಡಿಗರು ಆದರದಿಂದ ಬರಮಾಡಿಕೊಳ್ಳುತ್ತಾರೆಂದು ನಾವು ಆಶಿಸುತ್ತೇವೆ.

ಎನ್. ರಾಮಾನುಜ
ಅಧ್ಯಕ್ಷರು
ಭಾರತೀಯ ವಿದ್ಯಾಭವನ, ಕರ್ನಾಟಕ

ಎ. ವಿ. ನರಸಿಂಹಮೂರ್ತಿ
ಅಧ್ಯಕ್ಷರು, ವಿದ್ಯಾಭವನ, ಮೈಸೂರು
ಪ್ರಧಾನ ಸಂಪಾದಕ

ಮೂಲ ಸಂಪಾದಕರ ಪ್ರಸ್ತಾವನೆ

ಭವನ್ಸ್ ಬುಕ್ ಯೂನಿವರ್ಸಿಟಿ ಮಾಲಿಕೆಯ ಪುಸ್ತಕಗಳು ವಿಶೇಷ ಸಾಫಲ್ಯವನ್ನು ಕಂಡಿವೆ. ಈ ಹನ್ನೊಂದು ವರ್ಷಗಳಲ್ಲಿ ಸುಮಾರು ಒಂದೂಕಾಲು ಮಿಲಿಯನ್ ಪುಸ್ತಕಗಳು ಮಾರಾಟಗೊಂಡಿವೆ. ಆದರೂ ಭವನವು ಆಗಾಗ್ಗೆ ಪ್ರಕಾಶನಗೊಳಿಸುತ್ತಿರುವ ಕಡಿಮೆ ಬೆಲೆಯ ಕೆಲವು ಬಿಡಿ ಪುಸ್ತಕಗಳಿಗೆ ವಿಶೇಷ ಬೇಡಿಕೆ ಇದೆ. ಇದನ್ನು ಪೂರೈಸುವ ದೃಷ್ಟಿಯಿಂದ ಹೊಸ ಒಂದು ರೂಪಾಯಿ ಪುಸ್ತಕಗಳನ್ನು ಹಾಗೂ ಭವನ್ಸ್ ಬುಕ್ ಯೂನಿವರ್ಸಿಟಿ ಮಾಲಿಕೆಯ ಪುಸ್ತಕಗಳನ್ನೂ ಒಟ್ಟೊಟ್ಟಿಗೆ ಪ್ರಕಟಿಸಲು ತೀರ್ಮಾನಿಸಿದೆ.

ಈ ಹೊಸ ಒಂದು ರೂಪಾಯಿ ಮಾಲಿಕೆಯ ಪುಸ್ತಕಗಳು, ಇತರ ಮಾಲಿಕೆಯ ಪುಸ್ತಕಗಳಂತೆ ಸಾಫಲ್ಯವನ್ನು ಪಡೆದು ಭಾರತೀಯ ಸಂಸ್ಕೃತಿಯ ಮೌಲ್ಯದಲ್ಲಿ ಆಸಕ್ತಿ ಇರುವವರಿಗೆ ಇಷ್ಟವಾಗಿ, ಹೆಚ್ಚಿನ ಓದುಗರನ್ನು ತಲಪುತ್ತದೆ ಎಂದು ನಾನು ಭಾವಿಸಿದ್ದೇನೆ.

ಭಾರತೀಯ ವಿದ್ಯಾಭವನ
ಚೌಪಾಟಿ ರೋಡ್, ಬೊಂಬಾಯಿ–೭ **ಕೆ. ಎಂ. ಮುನ್ಷಿ**
ವಿಜಯದಶಮಿ, ಸೆಪ್ಟೆಂಬರ್ ೨೮, ೧೯೬೩

ಮೂಲ ಲೇಖಕರ ಪೀಠಿಕೆ

ನನ್ನ ಚಿಂತನೆಗಳನ್ನು ಈ ಸಾಹಿತ್ಯರೂಪದಲ್ಲಿ ಪ್ರಕಟಿಸಲು ನನಗೆ ತುಂಬ ಸಂತೋಷವಾಗುತ್ತಿದೆ. ಇಲ್ಲಿ ಪ್ರಸ್ತುತಪಡಿಸಲಾಗಿರುವ ಸಣ್ಣ ಸಣ್ಣ ಚಿಂತನೆಗಳು ಎರಡು ದಶಕಗಳ ಹಿಂದೆ ಬರೆಯಲ್ಪಟ್ಟವು. ಆದರೂ ಅವು ತಮ್ಮ ಹುರಿದುಂಬಿಸುವ ಹಾಗೂ ಸ್ಫೂರ್ತಿ ನೀಡುವ ಗುಣಗಳನ್ನು ಇಂದಿಗೂ ಕಳೆದುಕೊಂಡಿಲ್ಲ. ಆದುದರಿಂದ ಇವು ಪ್ರಕಟಗೊಳ್ಳುತ್ತಿರುವುದು ಹರ್ಷದ ಸಂಗತಿ

ದೇವರು ಅಥವಾ ಪರಮಾತ್ಮ ಅನಂತ ಮತ್ತು ಸರ್ವವ್ಯಾಪಿ. ಅವನು ಎಲ್ಲ ಮಾನವಶರೀರದಲ್ಲೂ ಆತ್ಮನಾಗಿ ವಾಸಿಸುತ್ತಾನೆ. ಅವನನ್ನು ಕಾಣಬೇಕೆಂದು ನಾನು ಮಾಡಿದ ಸಾಧನೆಗಳಿಂದ ಹಾಗೂ ಅವನ ಕೃಪೆಯಿಂದ ನನ್ನ ಒಳ ಅರಿವಿನ ಸಾಗರದಲ್ಲಿ ಕೆಲವು ಅಲೆಗಳು ಕಂಡುಬಂದವು. ಅವುಗಳನ್ನು ಶಬ್ದಮಾಧ್ಯಮದ ಮೂಲಕ ಬರೆದಿರುವುದೇ ಈ ಪುಸ್ತಕದ ಹೂರ್ಣ. ಆದುದರಿಂದ ಈ ಪುಸ್ತಕಕ್ಕೆ ನಾನು ನೀಡಿರುವ ಶೀರ್ಷಿಕೆ 'ಅನಂತದ ಕಡೆಗಿನ ಚಿಂತನೆ' ಉಚಿತವಾದುದೆಂದು ಭಾವಿಸಿದ್ದೇನೆ.

ಇಲ್ಲಿರುವ ಕೆಲವು ಪದ್ಯಗಳು ದೇವರನ್ನು ಕುರಿತು ಬರೆದಿದ್ದಾದರೆ ಮತ್ತೆ ಕೆಲವು ದೇವರ ಮಾತುಗಳೇ ಆಗಿವೆ. ಇದರಿಂದ ಓದುಗರಿಗೆ ಹಾಗೂ ಲೇಖಕನಿಗೆ ಮಾರ್ಗದರ್ಶನವಾಗಲಿ ಎನ್ನುವುದೇ ಉದ್ದೇಶ.

ಇದು ಅವಸರದಲ್ಲಿ ಓದುವ ಪುಸ್ತಕವಲ್ಲ; ಇದನ್ನು ನಿಧಾನವಾಗಿ ಹಾಗೂ ಧಾವಂತವಿಲ್ಲದೆ ಅರಗಿಸಿಕೊಳ್ಳಬೇಕು; ಆಗ ಮಾತ್ರ ಓದುಗನಿಗೆ ತಾನು ಸಾಧನೆ ಮಾಡಬಹುದಾದ ಪರಿಕರಗಳು ದೊರಕಬಲ್ಲವು.

ವಿಶ್ವವು ಸಂತೋಷ ಮತ್ತು ಶಾಂತಿಯಿಂದ ಬಾಳಬೇಕಾದರೆ ಮಾನವನ ಜೀವನವನ್ನು ಪರಮೋದಾತ್ತವನ್ನಾಗಿ ಮಾಡಿ, ಆತ್ಮವನ್ನು ಬೆಳಗಬೇಕು. ಹಾಗೆ ಮಾಡಿದರೆ ಸಮಾಜದಲ್ಲಿ ಕ್ರಾಂತಿಕಾರ ಬದಲಾವಣೆಗಳು ಉಂಟಾಗಿ ಮಾನವನ ಹೊಸ ಆಕಾಂಕ್ಷೆಗಳಿಗೆ ಅವಕಾಶವಾಗುತ್ತವೆ. ನಮ್ಮ ಮನಸ್ಸನ್ನು ಪರಮೋದಾತ್ತ ಹಂತಕ್ಕೆ ಕೊಂಡೊಯ್ದರೆ, ನಮ್ಮ ಅನೇಕ ರೀತಿಯ ದುಃಖಗಳು ಕಡಿಮೆಯಾಗುತ್ತವೆ; ಅಂತಹ ಉದಾತ್ತ ತತ್ವಗಳು ಈ ಪುಸ್ತಕದಲ್ಲಿ ಸೇರಿರುವುದರಿಂದ, ಆ ಸಾಧನೆಗೆ ಸಹಾಯವಾಗಬಹುದು.

ಈ ಪುಸ್ತಕದಲ್ಲಿ ನನ್ನ ಜೀವನ ಹಾಗೂ ಅನುಭವಗಳೇ ಹೆಪ್ಪುಗಟ್ಟಿವೆ. ಯಾರಾದರೂ ಕೆಲವು ಯಾತ್ರಿಕರಿಗಾದರೂ ಇದು ಸ್ಫೂರ್ತಿ ನೀಡಿ, ಅವರ ಮಾರ್ಗಕ್ಕೆ ದೀಪ ನೀಡಿ, ಅವರ ಆತ್ಮವನ್ನು ಬೆಳಗಿದರೆ ನನ್ನ ಶ್ರಮ ಸಾರ್ಥಕವೆಂದು ನಾನು ಭಾವಿಸುತ್ತೇನೆ.

ಬೊಂಬಾಯಿ **ಯೋಗೇಶ್ವರ್**
ಶ್ರೀರಾಮನವಮಿ, ೧೯೬೬

ಪರಿವಿಡಿ

ಅನಂತದ ಕಡೆಗೆ ಚಿಂತನೆ

(ಶ್ರೇಣಿ ೧)

೧. ನನ್ನ ಕವಿತೆ

ಅಗೋ ನೋಡು ! ಶರದೃತುವಿನ ಸುಂದರ ನಿರ್ಮಲ ಆಕಾಶ. ಅದರಂತೆಯೇ ಇದೆ, ನಿಷ್ಕಪಟ ಸರಳ ಸ್ವಚ್ಛ ಉದಾರ ನನ್ನ ಕವನ. ಸವಿಯಾದ ಮಕರಂದ ಮತ್ತು ಸೌಮ್ಯವಾದ ಕಂಪು ಇರುವ ಮನಮೋಹಕ ಕಮಲದಂತೆ ಆಕೆ ಮನಮೋಹಕ ನವಚೇತನಕ್ಕೆ ನವಜೀವನಕ್ಕೆ ನವ ಅರಿವಿಗೆ ಅವಳ ಕರೆ.

ಈ ಹುಚ್ಚು ಗಾಳಿ ರುದ್ರಭಯಂಕರ ಚಂಡಮಾರುತ ಭಯ ಹುಟ್ಟಿಸುವ ಮಿಂಚಿನ ಬೆಳಕು ಮತ್ತು ಗುಡುಗಿನ ಗರ್ಜನೆ ಆಕೆಯನ್ನು ತಲ್ಲಣಗೊಳಿಸದು, ಆಕೆಯ ಮೌನದ ಮಧುರ ಶ್ರುತಿಯಲ್ಲಿ ಆಕೆ ನಿತ್ಯ ನವನವೀನ, ನಿತ್ಯ ಯೌವನೆ ಮತ್ತು ಸುಕೋಮಲೆ, ಸುಲಲಿತೆ.

ತೂಕ ಮತ್ತು ಅಳತೆಯ ಚಕ್ರವ್ಯೂಹದಿಂದ ತನ್ನನ್ನು ಮುಕ್ತಗೊಳಿಸಿಕೊಂಡ ಆಕೆ ಸಿಂಗರಿಸಿಕೊಳ್ಳುವುದನ್ನು ತ್ಯಜಿಸಿದ್ದಾಳೆ. ಸ್ವರ್ಗೀಯ ಮಾಧುರ್ಯದಿಂದ ಎಲ್ಲರನ್ನು ಮುದಗೊಳಿಸುವ ಆಕೆ ಲಯಬದ್ಧವಾಗಿ ಹರಿಯುವ ನದಿಯಂತೆ ನಿನ್ನ ದಿವ್ಯ ಚರಣದಲ್ಲಿ ತನ್ನನ್ನು ಸಮರ್ಪಿಸಿಕೊಂಡಿದ್ದಾಳೆ.

ಆಕೆ ಯಾವ ರೂಪದಲ್ಲೇ ಇರಲಿ, ನಿನ್ನ ಪವಿತ್ರ ಚರಣದ ಒಂದು ಹೂವಿನ ಹಾರ ಆಕೆ. ನಿನ್ನ ಪಾದ ಕಮಲಕ್ಕೆ ಸಮರ್ಪಿತವಾದ ದೈವ ಪುಷ್ಪಗಳಿಂದ ಮಾಡಿದ ಸೊಗಸಾದ ಹೂಮಾಲೆ ಆಕೆ.

* * * *

೨. ವೀಣೆ

ದೇವ ದೇವನೆ! ಮಧುರ ನಾದ ನೀಡುವ ನನ್ನ ಒಲವಿನ ವೀಣೆಯ ತಂತಿಗಳಿಗೆ ನಿನ್ನ ದಿವ್ಯ ಕೈಗಳ ಸ್ಪರ್ಶ ಇರಲಿ. ಪರಮಾವಧಿಯ ಶ್ರುತಿ ಮೇಳವಿಸಿ ನಿನ್ನಲ್ಲಿ ಒಂದಾಗಲು, ನಿನ್ನ ಸೂಕ್ಷ್ಮ ಬೆರಳುಗಳು ವೀಣೆಯ ತಂತಿಗಳನ್ನು ಮೀಟಿ ಝೇಂಕಾರ ಮಾಡುತ್ತಿರಲಿ.

ನಿನ್ನ ಔದಾರ್ಯದ ವಕ್ಷಸ್ಥಳದಲ್ಲಿ ಅದನ್ನು ಆಲಂಗಿಸು. ನಿನ್ನ ಪಾದವನ್ನು ಅಲಂಕರಿಸಿರುವ ಮುದಗೊಳಿಸುವ ಬಾಷ್ಪಪುಷ್ಪಗಳ ಸುವಾಸನೆಯಿಂದ ಅದರ ಸೊಬಗು ಹೆಚ್ಚಲಿ. ನಿನ್ನ ಸುಮಧುರ ಸಂಗೀತದ ಸೊಗಸಿನಿಂದ ಅದು ತುಂಬಿರಲಿ.

ನಿನ್ನ ಅನುಗ್ರಹದಿಂದ ಮಂಜುಳನಾದವನ್ನು ನೀಡಿ ಕಂಪಿಸುತ್ತಿರುವ ಈ ವೀಣೆಯನ್ನು ಸ್ವೀಕರಿಸು.

ನೀನಲ್ಲದೆ ಮತ್ತ್ಯಾರೂ ಅದನ್ನು ಸ್ಪರ್ಶಿಸದಿರಲಿ. ನಿನ್ನ ಹೃದಯದಲ್ಲಿ ಅಲ್ಲದೆ ಮತ್ತೆಲ್ಲೂ ನೆಲೆಸುವ ಬಯಕೆ ಬಾರದಿರಲಿ. ಅದು ನಿನ್ನ ಸ್ವತ್ತು, ನಿನ್ನ ಆತ್ಮ, ನಿನ್ನ ಪ್ರೀತಿ ಆಗಿರಲಿ ಎಂಬ ವರವನ್ನು, ಓ ನನ್ನ ಜೀವನದ ಒಡೆಯ! ಕರುಣಿಸು.

ಮಧುರನಾದ ಹೊಮ್ಮಿಸುವ ನನ್ನ ಒಲವಿನ ವೀಣೆಯ ತಂತಿಗಳಿಗೆ ನಿನ್ನ ಪವಿತ್ರ ಕೈಗಳ ಸ್ಪರ್ಶ ಇರಲಿ. ಮತ್ತು ನಿನ್ನ ನವಿರಾದ ಬೆರಳುಗಳು ತಂತಿಯನ್ನು ಮೀಟುತ್ತಿದ್ದು ಮಧುರವಾದ ಶ್ರುತಿ ನಿನ್ನೊಡನೆ ಮೇಳವಿಸಲಿ, ಓ ನನ್ನ ದೇವರೇ!

ಇನ್ನೊಬ್ಬನ ಹೃದಯದ ಬಡಿತವೇ ವೀಣಾನಾದವಾಗಿ, ಅದು ಜಡವಾದ ಆತ್ಮನನ್ನು ಹೊಡೆದೆಬ್ಬಿಸಿ ಸ್ಫೂರ್ತಿ ತುಂಬಿ, ಆನಂದ ಬಾಷ್ಪದಲ್ಲಿ ಕಾಮನಬಿಲ್ಲು ಮೂಡಿಸುವವರೆಗೆ, ನಿರಾಶ್ರಿತರಿಗೆ ಆಶ್ರಯ ಸಿಗುವವರೆಗೆ, ನಿರಾಶೆಯಲ್ಲಿರುವವನನ್ನು ಸಚೇತನಗೊಳಿಸಿ ಆತನಲ್ಲಿ ಆಶೆಯನ್ನು ತುಂಬುವವರೆಗೆ, ನಿನ್ನ ಕೃಪೆಯಿಂದ ನನ್ನಲ್ಲಿರುವ ಸಂಗೀತಗಾರನು ವೀಣೆ ನುಡಿಸುತ್ತಿರಲಿ.

ಓ ನನ್ನ ಅಮರ ಸಂಗೀತಗಾರನೆ! ನಿನ್ನನ್ನು ಅರಿಯುವುದು ನಿನ್ನಲ್ಲೇ ಮನಸ್ಸನ್ನು ನಿಲ್ಲಿಸುವುದು ಮುಖ್ಯ. ಅದನ್ನು ಮೀರಿ ನೋಡುವುದು, ಕೇಳುವುದು ಏನೂ ಇಲ್ಲ.

* * * *

೩. ನಾನು ಮರೆಯಲಾರೆ

ಓ ದೇವರೆ! ಈ ಪ್ರಪಂಚದ ಅಸಂಖ್ಯಾತ ಚಟುವಟಿಕೆಗಳಿಂದ ಮುಳುಗಿ ಹೋಗಿರುವ ನಾನು, ನಿನ್ನನ್ನು ಮರೆಯದೆ ಸದಾ ನಿನ್ನ ಮಧುರ ನೆನಪಿನಲ್ಲಿರಲಿ.

ಮಾನವರಲ್ಲಿ ಹಲವಾರು ದುಃಖಿತ ಜನರು ವಿಷಣ್ಣವದನರಾಗಿ ದುಃಖತಪ್ತ ಕಣ್ಣುಗಳಿಂದ ಕಣ್ಣೀರಧಾರೆ ಹರಿಸುತ್ತಾ ಕಾಯುತ್ತಿರುವಾಗ, ಇನ್ನು ಕೆಲವರ ಹೃದಯ ಬಡಿತಗಳು ಅತಿಯಾದ ದುಃಖದಿಂದ ಮೌನವಾಗಿ ಮಿಡಿಯುತ್ತಿರುವುದು. ಇಂತಹ ದುಃಖಿತರ ಕಷ್ಟಗಳಲ್ಲಿ ಭಾಗಿಯಾಗಿ ಅವರನ್ನು ನಿನ್ನೆಡೆಗೆ ಕರೆದೊಯ್ಯುವ ತೃಪ್ತಿಯನ್ನು ನನಗೆ ಕೊಡು ದೇವರೇ.

ಕೆಳಕ್ಕುರುಳಿದವರು ಪುನಃ ಶಕ್ತಿ ಪಡೆದು ಎದ್ದೇಳುವರು. ನಿನ್ನ ಮಾತಿಲ್ಲದ, ಸದ್ದಿಲ್ಲದ ಸಾಂತ್ವನದ ಸ್ಪರ್ಶದಿಂದ, ಮುಗ್ಗರಿಸುವವರೂ ಮುಂದಕ್ಕೆ ಹೆಜ್ಜೆ ಹಾಕುವರು. ಆದರೂ ಅನೇಕರು ಜೀವನ ಎಂಬ ತೊಡಕಾದ ಚಕ್ರವ್ಯೂಹದಲ್ಲಿ ದಾರಿ ಕಾಣದೆ ಅಲೆದಾಡುತ್ತ ತಮ್ಮ ಗುರಿಯನ್ನು ಹುಡುಕುತ್ತಿರುವರು. ಆದರೂ ದೇವರ ದೇವನೇ, ದಯೆತೋರು. ನಿನ್ನ ಕೃಪೆಗಾಗಿ ಹಾತೊರೆಯುತ್ತಿದ್ದೇನೆ. ನೀನು ನನ್ನ ಮೇಲೆ ತೋರಿಸುವ ಸ್ವಲ್ಪ ದಯೆಯಿಂದ ನಾನು ಅವರನ್ನೇ ಮುನ್ನಡೆಸಿ, ಅನಂತದೆಡೆಗೆ ಸಾಗುವ ಅವರ ಉದ್ದೇಶಕ್ಕೆ ದಾರಿ ತೋರಿಸುವೆ.

ನಿಜವಾಗಿಯೂ ನಿನ್ನ ಸ್ಪರ್ಶದಿಂದಾಗಿ ಸೊರಗಿದ ಹೂಗಳು ಜೀವ ತುಂಬಿ ಪ್ರಕಾಶಿಸುತ್ತಾ ಅರಳುವುದು. ಮತ್ತೆ ನೋಡು ಯಾರದೋ ಜೀವಾತ್ಮ ಮುಗುಳ್ನಗುತ್ತಾ ಜೀವ ತಳೆಯುವುದು. ಕಣ್ಣೀರು ಕೂಡ ಯಾರದೋ ಜೀವನದ ಸಂಪತ್ತು ಆಗುವುದು. ಧೃತಿಗೆಟ್ಟ ಹೃದಯಕ್ಕೆ ನೋವು ಕೂಡ ಸಾಂತ್ವನ ನೀಡುವುದು.

ನಿನ್ನ ಈ ಎಲ್ಲ ಅನುಗ್ರಹ ಸ್ಪಷ್ಟವಾಗಿ ಕಂಡುಬಂದರೂ, ಭಗವಂತನೇ ನನಗೆ ಶಕ್ತಿಯನ್ನು ಕೊಡು. ನನ್ನ ಸುಖದಲ್ಲಾಗಲಿ, ದುಃಖದಲ್ಲಾಗಲಿ, ಕಷ್ಟ ಕಾರ್ಪಣ್ಯಗಳೇ ಬರಲಿ ಯಾವ ಒತ್ತಡವೇ ಇರಲಿ, ಮೋಡವಿರಲಿ, ಮಳೆ ಇರಲಿ ನಾನು ನಿನ್ನನ್ನು ಮರೆಯಲಾರೆ.

ಈ ಜಗತ್ತಿನ ಪರಿಪರಿಯ ಅಗಣಿತ ಕೆಲಸ ಕಾರ್ಯಗಳ ಮಧ್ಯದಲ್ಲಿ ಮುಳುಗಿರುವ ನಾನು, ಓ ನನ್ನ ದೇವರೆ! ನಾನು ನಿನ್ನ ಮನಮೋಹಕ ಸ್ಮರಣೆಯನ್ನು ಮರೆಯಲಾರೆ.

* * * *

೪. ಒಂದು ಪ್ರಾರ್ಥನೆ

ನನ್ನ ಕಣ್ಣಲ್ಲಿ ನಿನ್ನನ್ನು ನೋಡದ ದಿನವೇ ನನ್ನ ಕಣ್ಣುಗಳು ನಾಶವಾಗಲಿ. ನನ್ನ ಹೃದಯ ನಿನ್ನ ಬಿಟ್ಟು ಬೇರೆ ಯಾವುದಕ್ಕಾದರೂ ಎಡೆಮಾಡಿಕೊಟ್ಟಲ್ಲಿ, ಆ ಕ್ಷಣವೇ ಅದು ಒಡೆದು ಹೋಗಲಿ.

ನಿನ್ನ ಸುಮಧುರ ಸಂಗೀತವನ್ನು ಆಲಿಸುವುದನ್ನು ನಿಲ್ಲಿಸಿದ ತಕ್ಷಣವೇ ನನ್ನ ಕಿವಿಗಳು ಕಿವುಡಾಗಲಿ ನನ್ನೊಡೆಯ. ಈ ನನ್ನ ದೇಹ ಯಾವಾಗ ನಿನ್ನ ಪವಿತ್ರ ಮೂರ್ತಿ ಇರುವ ದೇಗುಲದಂತೆ ಕೆಲಸ ಮಾಡುವುದನ್ನೇ ಹಾಗೂ ನಿನ್ನ ಸೇವೆ ಮತ್ತು ಉಪಾಸನೆಯನ್ನು ತ್ಯಜಿಸುವುದೋ ಆಗಲೇ ನಾಶವಾಗಲಿ.

ನಿನ್ನನ್ನು ಕಾಣದ ಕಣ್ಣುಗಳು ಕುರುಡಾಗುವುದೇ ಒಳ್ಳೆಯದು. ನಿನ್ನ ನಾಮ ಸಂಕೀರ್ತನೆಯ ಮಾಧುರ್ಯವನ್ನು ಕೇಳಲಾಗದ ಕಿವಿಗಳು ಕಿವುಡಾಗುವುದೇ ಒಳ್ಳೆಯದು. ನಿನಗೆ ಸ್ಥಳಾವಕಾಶ ಕೊಡದಾದ ನನ್ನ ಹೃದಯ ನುಚ್ಚು ನೂರಾಗಿ ಒಡೆದು ಹೋಗಲಿ. ನಿನ್ನ ಆಜ್ಞೆಯನ್ನು ಪಾಲಿಸದ ಈ ದೇಹ ಸುಟ್ಟು ಬೂದಿಯಾಗಲಿ, ಓ ನನ್ನ ದೇವರೆ!

ನನ್ನ ಪ್ರತಿ ಉಚ್ಛ್ವಾಸದಲ್ಲೂ ನಿನ್ನ ಪವಿತ್ರ ದೈವಿಕ ಪ್ರೀತಿಯ ಸುಗಂಧವನ್ನು ಆಸ್ವಾದಿಸುತ್ತ ನಿನ್ನ ಸುಶ್ರಾವ್ಯ ಸಂಗೀತದಲ್ಲೇ ತಲ್ಲೀನವಾಗಿ ನಿನ್ನಲ್ಲೇ ಒಂದಾಗಿ, ಎಂದಿಗೂ ನಿನ್ನಿಂದ ಬೇರ್ಪಡದಂತೆ ನನಗೆ ವರವನ್ನು ಕರುಣಿಸು. ಓ ನನ್ನ ಪ್ರೀತಿಯ ದೇವರೆ!

* * * *

೫. ಕವಿಯ ಅಪೇಕ್ಷೆ

ಓ ನನ್ನ ಗುರುವರ್ಯ! ಕವಿ ಶ್ರೇಷ್ಠನೆ! ಕವನಗಳ ಸುಂದರ ಹೊಳೆಯು, ನನ್ನ ಸ್ನೇಹಮಯ ಹೃದಯದ ಒಳನುಗ್ಗಿ ಪದಗಳಾಗಿ ಪ್ರಕಟವಾಗಲಿ. ನನ್ನ ಹೃದಯದಲ್ಲಿ ಅರಳಲಿ, ಓ ನನ್ನ ಗುರುವರ್ಯ ಕವಿಶ್ರೇಷ್ಠನೆ.

ಸೌಂದರ್ಯದ ಕಾರಂಜಿಯು, ನನ್ನ ಹೃದಯದ ಆಳದಿಂದ ಚಿಮ್ಮಿ ಲಯ ತಾಳಬದ್ಧ ಛಂದೋಗತಿಯಲ್ಲಿ ಉಪಮೆಗಳಾಗಿ ಥಳ ಥಳಿಸಲಿ. ಓ ನನ್ನ ಕವಿಶ್ರೇಷ್ಠನೆ, ಅದು ನನ್ನ ಹೃದಯದಲ್ಲಿ ಮಿನುಗುತ್ತಿರಲಿ.

ಸತ್ಯದ ಬೆಳಕು ನನ್ನ ಆತ್ಮವನ್ನು ಬೆಳಗಲಿ ಮತ್ತು ನನ್ನ ಅಂತರಾತ್ಮವನ್ನು ಕವಿದ ಕತ್ತಲೆಯನ್ನು ತೊಲಗಿಸಿ, ಹಾಡಾಗಿ ಕಂಪಿಸಲಿ ಓ ನನ್ನ ಒಡೆಯನೆ, ಸತ್ಯದ ಬೆಳಕು ನನ್ನ ಆತ್ಮವನ್ನು ಬೆಳಗಲಿ.

ಕಣ್ಣಿನಿಂದ ಆಗಬಹುದಾದ ಮೋಹ, ಭ್ರಾಂತಿಯನ್ನು ತೊಲಗಿಸಲು ಸಂತ ಸೂರ್‌ದಾಸನು ತನ್ನ ನೇತ್ರದ್ವಯಗಳನ್ನು ಕುರುಡಾಗಿಸಿದನು. ಅನಂತರ (ಆ ಸ್ಥಿತಿಯಲ್ಲಿರುವಾಗ) ನೀನು ಆತನಿಗೆ ದರ್ಶನ ಕೊಟ್ಟು, ಆತನ ಹೃದಯ ಉಜ್ವಲ ಸಂಗೀತದಿಂದ ತುಂಬಿ, ಆತನ ಕಂಠ ಸುಮಧುರವಾಗುವಂತೆ ಮಾಡಿದೆ. ಅದೇ ರೀತಿ ಭಗವಂತ ನನ್ನ ಕಣ್ಣುಗಳನ್ನು ಮುಟ್ಟದ ಭೋಗ, ಮೋಹ ಮೊದಲಾದ ಅಜ್ಞಾನದ ಪರದೆಯನ್ನು ತೆಗೆದು ನಿನ್ನ ಮೇಲಿನ ಪ್ರೀತಿ, ಭಕ್ತಿಗಳು ತುಂಬಿರುವ ಭಾವಗೀತೆಗಳಾಗಿ ನೀನಿರುವ ನನ್ನ ಹೃದಯ ಸಿಂಹಾಸನದಿಂದ ಹೊರಹೊಮ್ಮಲಿ.

ನನ್ನ ಕಿನ್ನರಿ ವೀಣೆಯ ತಂತಿಗಳು ನಿನ್ನ ಸ್ವರ್ಗೀಯ ಸಂಗೀತವನ್ನು ನುಡಿಸಲು ಶ್ರುತಿಗೊಂಡಿರಲಿ; ಮತ್ತು ಇಡೀ ವಿಶ್ವವೇ ನಿನ್ನ ಸುಮಧುರ ಮಂಜುಳ ಗಾನದಿಂದ ತುಂಬಲಿ. ನಾನು ನಿನ್ನ ದಿವ್ಯರಾಗವನ್ನು ಕೇಳುತ್ತ ನಿನ್ನ ಅದ್ಭುತ ದರ್ಶನವನ್ನು ಕಣ್ಣಲ್ಲಿ ಹಿಡಿದಿಟ್ಟುಕೊಳ್ಳುವೆ. ಆಗಲೇ ನನ್ನ ಆತ್ಮಕ್ಕೆ ಅತ್ಯಾನಂದ, ಪರಮಸುಖ ಮತ್ತು ನಿನ್ನ ನಾಮಸ್ಮರಣೆ ಹೆಚ್ಚಿನ ಹರ್ಷ ಭಾವಾವೇಶದಿಂದ ಅತ್ಯಾನಂದದಿಂದ ಪ್ರತಿಧ್ವನಿಸುವುದು.

* * * *

೬. ಭಗವಂತನ ದ್ವೈತ ಸ್ಥಿತಿ

ದೇವ ನೀನು ಬಹಳ ಅಂದಚಂದದ ಭೂಷಣಗಳಿಂದ, ತೊಡುಗೆಗಳಿಂದ, ವರ್ಣರಂಜಿತ ಮನೋಹರವಾದ ಉಡುಗೆಗಳಿಂದ ಅಲಂಕರಿಸಲ್ಪಟ್ಟು ದೇಗುಲ ದೊಳಗಿರುವೆ. ಆದರೆ ಹೊರಗೆ ದೇಗುಲದ ಮಹಾದ್ವಾರದ ಬಳಿ ಎಲ್ಲವನ್ನು ಕಳಕೊಂಡು ಹರಿದ ಕೊಳಕಾದ ಚಿಂದಿ ಬಟ್ಟೆಯನ್ನು ಸೊಂಟಕ್ಕೆ ಕಟ್ಟಿಕೊಂಡು ನಿಂತಿರುವೆ.

ಮಂದಿರದೊಳಗೆ ಬಹಳ ಸೊಗಸಾದ, ಭವ್ಯವಾದ ಕಣ್ಣು ಕೋರೈಸುವ ಚಿನ್ನಾಭರಣಗಳ ನಡುವೆ ನೀನಿರುವೆ. ಹೊರಗೆ ಪಡಸಾಲೆಯಲ್ಲಿ ಯಾತ್ರಿಕನು ನೀಡುವ ತಾಮ್ರದ ನಾಣ್ಯಕ್ಕೆ ಕೈಚಾಚುವೆ.

ಗುಡಿಯೊಳಗೆ ರಸವತ್ತಾದ ಸ್ವಾದಿಷ್ಟ ಭೋಜನ ಬಡಿಸಿದ್ದರೆ, ನಿನ್ನ ಭಕ್ತರು ನಿನ್ನ ಪ್ರತಿಮೆಯನ್ನು ಸುತ್ತುವರಿದು ನಿನ್ನ ಅಡಿದಾವರೆಗೆ ಹೂಗಳನ್ನು ಅರ್ಪಿಸುತ್ತ, ನಿನ್ನ ಕೀರ್ತನೆಗಳನ್ನು ಹಾಡುತ್ತಾ ಪವಿತ್ರ ಗಂಗಾಜಲದಿಂದ ನಿನ್ನನ್ನು ತೊಳೆಯುತ್ತಿದ್ದರೆ ಕಡುಬಡತನ ಮತ್ತು ಹಸಿವಿನಿಂದ ಅಸ್ಥಿಪಂಜರದಂತೆ ಕಾಣುವ ನೀನು ಗುಡಿಯ ಹೊರಗೆ ಬಾಗಿಲಲ್ಲಿ ನಿಂತಿರುವೆ. ನಿನ್ನ ಒಂದು ಕೈಯಲ್ಲಿ ಭಿಕ್ಷಾಪಾತ್ರೆ ಇನ್ನೊಂದರಲ್ಲಿ ಭಿಕ್ಷೆಗಾಗಿ ಚಾಚಿರುವ ಕೈ ಇದನ್ನು ನೋಡಿ ದೇಗುಲ ದಿಂದ ಸಾಲಾಗಿ ಹೊರ ಬರುತ್ತಿರುವ ಭಕ್ತಾದಿಗಳು ತಿರಸ್ಕಾರದಿಂದ ಧಿಕ್ಕರಿಸಿ ಹೋಗುವರು.

ದೇಗುಲದೊಳಗೆ ಭಕ್ತಾದಿಗಳು ನಿನ್ನನ್ನು ಸ್ತುತಿಸಿ ಹಾಡುವರು. ಯುವತಿಯರು ಹರ್ಷೋಲ್ಲಾಸದಿಂದ ಕುಣಿಯುವರು. ಹೊರಗೆ ಬಾಗಿಲಲ್ಲಿ ನಿನ್ನನ್ನು ದೂಷಿಸುವರು. ನಿನ್ನ ಮೇಲೆ ಬೈಗುಳ ಸುರಿಮಳೆ ಸುರಿಸುವರು. ಹಸಿವು ಬಡತನವು ನಿನ್ನನ್ನು ಸುತ್ತಿಕೊಂಡಿರುವುದು.

ದೇವಾಲಯದೊಳಗೆ ನಿನ್ನ ರೂಪ ಮನಸ್ಸನ್ನು ಮೋಹಗೊಳಿಸುವುದಾದರೂ, ಎಲ್ಲರಿಗೂ ಒಂದೇ ರೀತಿಯಾಗಿ ಕಾಣಸಿಗದು. ಹೊರಗೆ ಬಾಗಿಲಲ್ಲಿ ಹೃದಯದ ಅತ್ಯಂತ ಆಂತರ್ಯದ ಏಕಾಂತದಲ್ಲಿ ಆಗುವ ಇಂದ್ರಿಯಾತೀತ ಅನುಭವವು ಆತ್ಮಸಾಕ್ಷಿಯನ್ನು ತಟ್ಟಿ ಚೈತನ್ಯವನ್ನು ಸುತ್ತುವರಿಯುವುದು.

ಭಗವಂತ! ತಿಳಿದುಕೊಳ್ಳಲಾಗದ, ಗಹನವಾದುದು ಎಂದರೆ ನಿನ್ನ ದ್ವಿಮುಖತೆ. ಆದರೂ ನಾನು ದಾರಿದ್ರ್ಯ ಮತ್ತು ಸುಲಿಗೆ (ಅಭಾವ ಮತ್ತು ಕಷ್ಟ) ಕಡುಬಡತನ ಮತ್ತು ಹಸಿವು, ತಿರಸ್ಕಾರ ಮತ್ತು ಅವಮಾನಗಳಿಂದ ಕೂಡಿದ್ದು, ಕೈಚಾಚಿ ಭಿಕ್ಷಾಪಾತ್ರೆ ಹಿಡಿದುಕೊಂಡು ದೇಗುಲದ ಬಾಗಿಲಲ್ಲಿ ನಿಂತಿರುವ ನಿನಗೆ ವಂದಿಸಿ ದೇಗುಲದ ಬಾಗಿಲಲ್ಲಿ ತಲೆಬಾಗಿ ನಿನ್ನನ್ನು ಪೂಜಿಸುತ್ತೇನೆ.

* * * *

೭. ಏಕಾಂತದಲ್ಲಿರುವ ಸಂತನಿಗೆ

ನಿರ್ಜನವಾದ ಪರ್ವತದ ಗುಹೆಯಲ್ಲಿ ವಾಸ ಮಾಡಿಕೊಂಡಿದ್ದು, ಜೀವನವನ್ನು ಮೌನವ್ರತದಲ್ಲಿ ಕಳೆದು ನಿರಂತರವಾಗಿ ಆಧ್ಯಾತ್ಮಿಕ ಅಭ್ಯಾಸ ಮಾಡಿಕೊಂಡಿದ್ದರೂ ನಿಮ್ಮ ಹೃದಯದಲ್ಲಿ ಪ್ರೀತಿ ಎಂಬ ಹೂ ಅರಳದಿದ್ದರೆ ಏನು ಫಲ? ನಿನ್ನ ಹೃದಯದಲ್ಲಿ ಪ್ರೀತಿ ಎಂಬ ಹೂ ಅರಳದಿದ್ದರೆ ಪರ್ವತವನ್ನೇ ಅಲುಗಿಸುವ ಶಕ್ತಿಯನ್ನು ನೀವು ಹೊಂದಿದ್ದರೂ, ನಿನ್ನನ್ನು ದಾಟಿ ಮತ್ತೇನು ಉಳಿಯದು.

ನೀನು ಎಲ್ಲದರ ಮೇಲೂ ಪ್ರಭುತ್ವ ಸಾಧಿಸಿದ್ದೀಯೆ. ಜ್ಞಾನದಲ್ಲೂ ಶ್ರೇಷ್ಠತೆ ಇದೆ. ಆದರೆ ಪ್ರೀತಿಯನ್ನು ಗಳಿಸಿಲ್ಲ. ಕಲ್ಲಿನಂತೆ ನಿರ್ಜೀವ ಜಡ. ಬಹಳ ಆಳವಾದ ಧ್ಯಾನದಲ್ಲಿ ಮುಳುಗಿರಲು ಬಯಸುತ್ತೀ. ಎಂದೂ ನಿಮ್ಮ ಹೃದಯ ವೀಣೆಯನ್ನು ಮಾನವನ ಅನುಕಂಪದ ಮಧುರ ಗಾನಕ್ಕೆ ಶ್ರುತಿ ಮಾಡಲಿಲ್ಲ. ಹೀಗಿರುವಾಗ ನಿಮ್ಮ ಯೋಗದಿಂದೇನು ಪ್ರಯೋಜನ?

ಬಡವರ ರೋದನವನ್ನು ನಿಲ್ಲಿಸಿ ಗೋಳಾಡುವವರನ್ನು ಚೀರಾಡುವವರನ್ನು ಸಂತೈಸಿ, ಹಸಿದವರಿಗೆ ಉಣಬಡಿಸಿ, ದಾಸ್ಯದಲ್ಲಿರುವವರನ್ನು ಬಂಧಮುಕ್ತರನ್ನಾಗಿಸಿ, ದಿಕ್ಕಿಲ್ಲದ ಅನಾಥರನ್ನು ಕಾಪಾಡಿ, ನಿಶ್ಶಕ್ತರಿಗೆ ಆಶ್ರಯವನ್ನೀಡಿ, ಈ ಮೂಲಕ ತ್ಯಾಗ ಮಾಡಿ.

ಓ ನನ್ನ ಪ್ರೀತಿಯೆ! ಅಕ್ಕರೆಯ ಸಂಯಮಿಯೇ! ಕಮಲದಂತಿರುವ ಭಗವಂತನ ಮುಖವನ್ನು ನೋಡಿದ ನೀನೇ ಧನ್ಯ. ಆದರೆ ಆತನ ಉದಾತ್ತ, ಭವ್ಯ, ಉದಾರ ವಿಶ್ವರೂಪವನ್ನು ಅರ್ಥಮಾಡಿಕೊಳ್ಳುವಲ್ಲಿ ಸೋತಿರುವೆ.

ಹೀಗಿರುವಾಗ ನಿನ್ನ ಯೋಗದ ಪ್ರಾಮುಖ್ಯತೆ ಎಷ್ಟರ ಮಟ್ಟಿಗೆ ಇರಬಹುದು ಎಂಬುದನ್ನು ನೀನೇ ಹೇಳು.

* * * *

೮. ಪ್ರೀತಿಯ ಘನತೆ

ನಿನಗೆ ಸತ್ಯದ ಅರಿವಾಗಿದೆ ಎಂದು ನೀನು ಹೆಗ್ಗಳಿಕೆಯಿಂದ ಹೇಳಿಕೊಂಡರೂ ಅದು ನಿನ್ನ ಗ್ರಹಣಶಕ್ತಿಯನ್ನು ಮೀರಿದುದು ಹಾಗೂ ನಿಜವಾದ ಜ್ಞಾನೋದಯವಲ್ಲ. ನೀನು ತುಂಬ ತಿಳಿದುಕೊಂಡಿರುವವನು, ಪರಮ ಜ್ಞಾನಿ ಎಂದು ಭಾವಿಸಿರುವೆ. ಅದು ಸರಿಯಲ್ಲ. ನಿನಗೆ ಸರಿಯಾದ ಜ್ಞಾನವೇ ಇಲ್ಲ. ಅಗಮ್ಯವಾಗಿ, ಗಹನವಾಗಿ ಅಥವಾ ಗೂಢವಾಗಿರುವುದರಲ್ಲೇ ಇದೆ ಸತ್ಯದ ಭವ್ಯತೆ, ಗಾಂಭೀರ್ಯ. ಪ್ರೀತಿಯ ಬಟ್ಟಲು ನಿನ್ನ ತುಟಿಗೆ ಅಂಟಿದಂತೆಯೇ ಇದೆ ಎಂಬ ಗುಂಗಿನಲ್ಲಿರುವೆ ಎಂದು? ನೀನು ಘೋಷಿಸಿಕೊಂಡಿದ್ದರೆ ನೀನು ಹಾಗಲ್ಲ ಎಂದು ನಿನಗೆ ತಿಳಿದಿರಲಿ. ಪರಿಶುದ್ಧ ಪ್ರೀತಿಯ ಶಕ್ತಿಯಿಂದ ನೀನು ಧನ್ಯನಾಗಿರುವೆ ಎಂದು ಭಾವಿಸಿದ್ದರೆ, ನೀನು ಪೂರ್ಣವಾಗಿ ಪರಿಶುದ್ಧ ಪ್ರೀತಿಯಿಂದ ಆಶೀರ್ವದಿಸಲ್ಪಟ್ಟಿಲ್ಲ ಎಂದು ನಾನು ಹೇಳುವುದನ್ನು ನೀನು ತಿಳಿದುಕೋ. ನನ್ನ ಆರಾಧ್ಯ ದೇವತೆ! ಹೇಗೆ ನಾನು ಪ್ರೀತಿಯ ಘನತೆಯನ್ನು (ಅಹಂಭಾವಿಗಳು) ಅರಿಯಲಿ? ಎಷ್ಟು ಜನ ನಿನ್ನ ತಳಸಿಗದ ವಿಶಾಲಸಾಗರದಲ್ಲಿ ನಿನ್ನನ್ನು ಹುಡುಕಿ ಕೊನೆಗೆ ನಿನ್ನಲ್ಲಿ ಐಕ್ಯವಾದರು ಎಂದು ಯಾರೂ ಅರಿಯರು. ನನ್ನ ಪ್ರೀತಿ ಪರಿಶುದ್ಧವಾಗಿ, ಉದಾತ್ತವಾಗಿದ್ದರೂ, ಕ್ಷುಲ್ಲಕ ಅಹಂಭಾವ ಕುರಿತು ಏನು ಹೇಳಲಿ? ಇದು ಚಂದ್ರನಲ್ಲೇ ಅಡಕವಾದ ಬೆಳದಿಂಗಳಂತೆ. ಪೂರ್ವ ದಿಗಂತದ ಹೃದಯದಲ್ಲಿ ಅರಳಿದ ಹೂವಿನಿಂದ ಶೃಂಗರಿಸಿಕೊಂಡ ಮುಂಬೆಳಕಿನಂತೆ ಇದೆ ಈ ಪ್ರೀತಿಯ ಭವ್ಯತೆ. ಅಮೃತದ ರುಚಿಯಂತಿರುವ ತುಟಿಗಳಲ್ಲೇ ಮೈಮರೆತು ಮುಗ್ಧಗೊಂಡ ಕೊಳಲಂತೆ ಆಕೆಯ ತನ್ಮಯತೆ. ಆತನ ಕೀರ್ತಿಯನ್ನು ಹೇಗೆ ಆಕೆ ಹಾಡಿ ಆತನ ಭವ್ಯತೆಯನ್ನು ಸಾಕ್ಷಾತ್ಕರಿಸಲು ಸಾಧ್ಯ?

ಇದು ತೀರ ಉಚಿತವೇ ಆಗಿದೆ. ಏಕೆಂದರೆ ಸಾಕ್ಷಾತ್ಕಾರ ಆದವರಿಗೆ ಅವರ ನಾಲಿಗೆ ಕೆಲಸ ಮಾಡದು ಮತ್ತು ಯಾರೂ ದೈವಿಕ ಪ್ರೀತಿಯ ಅಮೃತವನ್ನು ಸವಿದಿರುವರೋ ಅವರಿಗೆ ಇಂದ್ರಿಯಗಳ ಜ್ಞಾನ ಇರದು. ಅವರು ಆತನ ಭವ್ಯತೆಯ ಉದಾಹರಣೆಯಾಗಿರುವರು.

ನನ್ನ ಸನಿಹಕ್ಕೆ ಬಂದ ಬಳಿಕವೂ ನಿನಗೆ ಪ್ರೀತಿಯ ಭವ್ಯತೆಯನ್ನು ತಿಳಿಯಲು ಹೆಚ್ಚಿನ ಆಸೆ ಇದ್ದರೆ, ನನ್ನ ಪ್ರೀತಿಯಲ್ಲಿ ಏನೋ ಕೊರತೆ ಇದೆ, ನೀನು ತಿಳಿ. ನನ್ನ ಪ್ರೀತಿಯ ಜಿಜ್ಞಾಸು! ನಿನ್ನ ಪ್ರೀತಿಯೆಡಗಿನ ಸೆಳೆತ ಅಥವಾ ಒಲವಿನ ತೀಕ್ಷ್ಣತೆ ದುರ್ಬಲವಾಗಿದೆ.

* * * *

೯. ಪ್ರೀತಿ ಮತ್ತು ಮುಕ್ತಿ

ಪ್ರೀತಿಯ ಪವಿತ್ರ ಬಂಧನಕ್ಕೆ ಸಿಗದ ಮುಕ್ತಿಯನ್ನಾಗಲೀ, ಶಾಂತಿಯನ್ನಾಗಲೀ ನಾನು ಬಯಸುವುದಿಲ್ಲ.

ಓ ನನ್ನೊಲುಮೆಯ ವಿರಕ್ತ ಸನ್ಯಾಸಿಯೇ! ವಜ್ರಾಯುಧಕ್ಕಿಂತಲೂ ಕಠಿಣವಾದ ಹೃದಯ, ಭಾವನೆಗಳೇ ಇಲ್ಲದೆ, ಯಾವ ಬಯಕೆ ಸಂವೇದನೆಗಳಿಗೆ ಸ್ಪಂದಿಸದೆ ಇರುವ ಕಲ್ಲಿನಂತೆ ಇದ್ದು, ಅಲ್ಲೇ ಪಕ್ಕದಲ್ಲೇ ಇರುವ ಮಮತೆಯ ಸಾಗರದಿಂದ ಅದರ ತೀರವು ತೋಯದಿರುವಂತಹ ಹೃದಯದಿಂದ ಪಡೆಯುವ ಅಲೌಕಿಕ ಶಕ್ತಿಯಲ್ಲಿ ನನಗೆ ಇಷ್ಟವಿಲ್ಲ.

ಪ್ರೀತಿಯನ್ನು ಕಡೆಗಣಿಸಿ ಪಡೆಯುವ ಮುಕ್ತಿ ಮತ್ತು ಶಾಂತಿ ಸಮಾಧಾನವನ್ನು ನಾನು ಆಶಿಸುವುದಿಲ್ಲ.

ನಾನು ಮುಕ್ತಿಯ ರುಚಿಯನ್ನು ಸ್ವಾದಿಸಿದ್ದೇನೆ. ಅಲ್ಲದೆ ಸುವಾಸನೆಯ ಪುಷ್ಪಗಳ, ಸುಂದರವಾದ ಲತಾಕುಂಜಗಳ ಮತ್ತು ಪಕ್ಷಿಗಳ ಇಂಪಾದ ಹಾಡುಗಳನ್ನು ಕೇಳುವುದರ ಮೂಲಕ ಶಾಂತಿಯನ್ನು ಅನುಭವಿಸಿದ್ದೇನೆ. ನನ್ನ ಮುಕ್ತಿ ಇರುವುದು ಪ್ರೀತಿಯಲ್ಲಿ... ಬಿಡುಗಡೆ ಇಲ್ಲದ ಪ್ರೀತಿ ನನಗೆ ಬೇಡ. ಅಂತಹ ಪ್ರೀತಿ ಇದ್ದರೂ ಅದಕ್ಕೆ ಬೆಲೆ ಇಲ್ಲ. ಅದು ನನ್ನನ್ನು ಆಕರ್ಷಿಸದು.

* * * *

೧೦. ನಿನಗೆ ವಂದಿಸದೆ ಇರಲಾರೆ

ಪ್ರತಿ ಅಣುರೇಣುಗಳಲ್ಲೂ ಈ ಭೂಮಿಯ ಪ್ರತಿ ಒಂದು ವಿಧಿವಿಧಾನ, ಸ್ವರೂಪದಲ್ಲೂ ಸ್ಪಷ್ಟವಾಗಿ ಕಂಡುಬರುವ ನಿನಗೆ ನಾನು ವಂದಿಸದೆ ಇರಲಾರೆ.

ನನ್ನನ್ನು ಒಬ್ಬ ಹೊಗಳಬಹುದು ಅಥವಾ ತೆಗಳಬಹುದು. ಆದರೆ ಆತನಲ್ಲೂ ನೀನು ನೆಲೆಸಿರುವೆ ಎಂದು ತಿಳಿದಿರುವ ನಾನು ನಿನಗೆ ವಂದಿಸದೆ ಇರಲಾರೆ. ನನ್ನ ಅಕ್ಕರೆಯವನೆ! ಈ ಭೂಮಿಯ ಪ್ರತಿ ಅಣುಗಳಲ್ಲೂ ಆಕಾರಗಳಲ್ಲೂ ಕಂಡುಬರುವ ನಿನಗೆ ನಾನು ಸಾಷ್ಟಾಂಗ ನಮಸ್ಕಾರ ಮಾಡದೇ ಇರಲಾರೆ.

ನನಗೆ ಒಬ್ಬ ಪ್ರೀತಿಯಿಂದ ಹಾರ ಹಾಕಬಹುದು, ಇನ್ನೊಬ್ಬ ಕಲ್ಲಿನಿಂದ ಹೊಡೆಯಬಹುದು, ಮತ್ತೊಬ್ಬ ಅವಾಚ್ಯ ಪದಗಳಿಂದ ದೂಷಿಸಬಹುದು. ಆದರೆ ಅವರೆಲ್ಲರಲ್ಲೂ ನೀನು ನೆಲೆಸಿರುವೆ ಎಂದು ಅರಿತಿರುವ ನಾನು ನಿನಗೆ ಸಾಷ್ಟಾಂಗ ಪ್ರಣಾಮ ಮಾಡದಿರಲಾರೆ. ನನ್ನ ಪ್ರಿಯನೆ! ಈ ಭೂಮಿಯ ಮೇಲಿನ ಪ್ರತಿ ಅಣುರೇಣ ತೃಣಕಾಷ್ಠಗಳಲ್ಲಿ ಪ್ರತಿ ಆಕೃತಿಗಳಲ್ಲಿ ನೀನು ನೆಲೆಸಿರುವುದನ್ನು ತಿಳಿದಿರುವ ನಾನು ನಿನಗೆ ಪ್ರಣಾಮ ಮಾಡದೆ ಇರಲಾರೆ.

ನನಗೆ ಒಬ್ಬ ಪ್ರೀತಿಯಿಂದ ಹಾರ ಹಾಕಬಹುದು, ಇನ್ನೊಬ್ಬ ಕಲ್ಲಿನಿಂದ ಹೊಡೆಯಬಹುದು, ಮತ್ತೊಬ್ಬ ಅವಾಚ್ಯ ಪದಗಳಿಂದ ದೂಷಿಸಬಹುದು. ಆದರೆ ಅವರೆಲ್ಲರಲ್ಲೂ ನೀನು ನೆಲೆಸಿರುವೆ ಎಂದು ಅರಿತಿರುವ ನಾನು ನಿನಗೆ ಸಾಷ್ಟಾಂಗ ಪ್ರಣಾಮ ಮಾಡದಿರಲಾರೆ. ನನ್ನ ಪ್ರಿಯನೆ! ಈ ಭೂಮಿಯ ಮೇಲಿನ ಪ್ರತಿ ಅಣುರೇಣ ತೃಣಕಾಷ್ಠಗಳಲ್ಲಿ ಪ್ರತಿ ಆಕೃತಿಗಳಲ್ಲಿ ನೀನು ನೆಲೆಸಿರುವುದನ್ನು ತಿಳಿದಿರುವ ನಾನು ನಿನಗೆ ಪ್ರಣಾಮ ಮಾಡದೆ ಇರಲಾರೆ.

ವಿಶ್ವದ ನಾನಾ ರೂಪಗಳಲ್ಲೂ ನೀನು ವಾಸವಾಗಿದ್ದು ನನ್ನತ್ತ ಪ್ರೀತಿಯ ನಗು ಚೆಲ್ಲುತ್ತಿರುವಾಗ ನಾನು ಯಾರನ್ನು ಪ್ರೀತಿಸಲಿ, ಯಾರನ್ನು ದ್ವೇಷಿಸಲಿ? ಒಬ್ಬನನ್ನು ಪ್ರೀತಿಯಿಂದ ಇನ್ನೊಬ್ಬನನ್ನು ದ್ವೇಷದಿಂದ ಏಕೆ ಕಾಣಲಿ? ನೀನು ಯಾವ ರೂಪ ಧರಿಸಿ ನನ್ನ ಮುಂದೆ ಬಂದರೂ ನಾನು ನಿನಗೆ ವಂದಿಸದೆ ಇರಲಾರೆ. ಎಲ್ಲಾ ಅಣುಗಳಲ್ಲೂ ಎಲ್ಲಾ ವಿಧ ಆಕಾರಗಳಲ್ಲೂ ಇರುವ ನಿನಗೆ ನಾನು ವಂದಿಸದೆ ಇರಲಾರೆ.

* * * *

೧೧. ಪ್ರೀತಿಗೆ ಮುನ್ನುಡಿ

"ಈ ಏಕಾಂತ ಪ್ರದೇಶದಲ್ಲಿರುವ ನೀನ್ಯಾರು?"

"ನಾನು"

"ನಿನ್ನ ಸ್ಥಾನ, ಹುದ್ದೆ ಏನು ಎಂದು ದಯಮಾಡಿ ತಿಳಿಸು"

"ನೀನೇಕೆ ಅದೆಲ್ಲವನ್ನು ವಿಚಾರಿಸುವೆ?"

"ಏಕೆಂದರೆ ನೀನು ಬಹಳ ಬಡವನಂತೆ, ದರಿದ್ರಾವಸ್ಥೆಯಲ್ಲಿರುವಂತೆ ನಿಸ್ಸಹಾಯಕನಂತೆ ಕಾಣುತ್ತಿರುವೆ."

"ಹೌದು ನಾನು ನಿರ್ಗತಿಕ. ನನಗೆ ನೀನು ಆಶ್ರಯ ಕೊಡುವೆಯಾ?"

"ಖಂಡಿತವಾಗಿ ನಿನಗೆ ನಾನು ಸಹಾಯ ಮಾಡುವೆ."

"ನೀನು ನನಗೆ ಸಹಾಯ ಮಾಡುವುದರಿಂದ ನಿನಗೇನು ಲಾಭ ಎಂದು ನಿನಗೆ ಗೊತ್ತಿರುವುದೇ? ಅಥವಾ ಭಿಕ್ಷೆ ನೀಡುವುದರ ಔಚಿತ್ಯ ಏನು? ನನ್ನ ಬಲಕೈಯಲ್ಲಿ ಅನಂತ ದುಃಖ ಕಷ್ಟಗಳು ತುಂಬಿದ್ದರೆ, ಎಡಕೈಯಲ್ಲಿ ಎದೆಯೊಡೆಯುವ ಅಗಮ್ಯವಾದ ಗಹನವಾದ ಭಯಂಕರ ನೋವು ಇದೆ. ಹಾಗಿದ್ದು ನೀನು ನನ್ನನ್ನು ಸ್ವೀಕರಿಸಲು ಇಚ್ಛಿಸುವೆಯಾ? ನಿನ್ನ ಜೀವನವಿಡೀ ನೀನು ನನ್ನ ಆರಾಧ್ಯ ದೇವತೆಯಾಗಿಯೇ ಪ್ರೀತಿಪಾತ್ರನಾಗಿ ಉಳಿಯುವೆಯಾ?"

"ನಿನಗೆ ಭಿಕ್ಷೆ ನೀಡುವುದರಿಂದ ಸ್ವರ್ಗೀಯ ಸಂತೋಷ ದೊರಕುತ್ತದೆ ಎಂದು ನನಗೆ ಗೊತ್ತು."

"ನೀನು ಹೇಳಿರುವುದು ಸಂಪೂರ್ಣ ಸತ್ಯ. ದಾನಧರ್ಮ ಮಾಡುವುದರಿಂದ ಪರಮಾನಂದ ನಿನಗೆ ಸಿಗುತ್ತದೆ, ಹಾಗಾದರೆ ಬಾ. ನನಗೆ ನನ್ನ ಆಯ್ಕೆಯ ದರ್ಶನವಾಗಲಿ."

"ಆದರೆ ದಯಮಾಡಿ ನಿನ್ನ ಹೆಸರು ಹೇಳು."

"ಹೆಸರು? ಎಲ್ಲರೂ ನನ್ನನ್ನು ಪ್ರೀತಿ ಎಂದು ಕರೆಯುವರು. ನೀನು ನನ್ನನ್ನು ನಿನಗೆ ಇಷ್ಟವಾದ ಹೆಸರಿನಿಂದ ಕರೆಯಬಹುದು."

* * * *

೧೨. ಅಮೃತ

ನಿನ್ನ ಸ್ವರ್ಗೀಯ ಸಂತೋಷವನ್ನೀಯುವ ಗಾನವನ್ನು ಆಲಿಸಲು ಅದು ನನ್ನ ಅದ್ಭುತ ಹೃದಯದ ಆಳಕ್ಕೆ ಇಳಿಯುವುದು. ಅಲ್ಲಿ ನಿನ್ನ ವೀಣೆಯ ಇಂಪಾದ ಮಧುರ ನಿನಾದವು ವ್ಯಾಪಿಸುವುದು. ದೇವರಿಂದಲೂ ಪಡೆದುಕೊಳ್ಳಲು ಅಸಾಧ್ಯವಾದ ನಿನ್ನ ದರ್ಶನವನ್ನು ಪಡೆಯಲು ಅವಿಚ್ಛಿನ್ನವಾಗಿ ಹರಿಯುವ ನನ್ನ ಕಣ್ಣೀರ ಪ್ರವಾಹದೊಳಗೆ ಪ್ರವೇಶಿಸಬೇಕು. ಅಲ್ಲಿ ನೀನು ನಿನ್ನ ಕಮಲದಂತಿರುವ ಮುಖವನ್ನು ಹಗಲೂ ರಾತ್ರಿ ಶುದ್ಧಗೊಳಿಸುತ್ತಿರುವೆ.

ಇದೇ ನಿನ್ನ ವಿಶ್ರಾಂತಿಧಾಮ. ಇದೇ ನಿನ್ನ ಸಿಂಹಾಸನ ನನ್ನ ಹೃದಯ ಸಿಂಹಾಸನ. ಇದೇ ನಿನ್ನ ಶಾಂತಿ ಸಮಾಧಾನದ ಪ್ರಶಾಂತ ಪುಷ್ಕರಣಿ. ಸಾಕಾರಗೊಂಡ ಪ್ರೀತಿ. ಅಂತಹ ಶಾಂತಿಯನ್ನು ನೀನು ನಿನ್ನ ಸ್ವರ್ಗೀಯ ದೈವಿಕ ಮನೆಯಲ್ಲೂ ಪಡೆದಿಲ್ಲ. ಹಾಲಿನ ಕಡಲಿನಲ್ಲಿಯೂ ಪಡೆದಿಲ್ಲ.

ನಾನು ನಿನ್ನ ಪ್ರೀತಿಯಲ್ಲಿ ಒಂದಾಗಿ ಸೇರಿರುವುದರಿಂದ ಎಂದೂ ನಿನ್ನ ಆಗಮನ ಮತ್ತು ನಿರ್ಗಮನದಿಂದ ಕಳವಳಗೊಂಡಿಲ್ಲ. ಆದರೆ ನೀನೊಂದು ಪತಂಗದಂತೆ, ನೀನೆಂದೂ ನನ್ನ ಅಮೃತ ಸದೃಶ ಪ್ರೀತಿಯ ಸ್ವಾದದಿಂದ ಉಪಚರಿಸಿಕೊಂಡಿಲ್ಲ. ನನ್ನ ಹೃದಯ ಕಮಲದಲ್ಲಿ ನೆಲೆಸಿದ್ದರೂ ತ್ರಿಲೋಕದಲ್ಲೂ, ಎಲ್ಲ ಕಾಲದಲ್ಲೂ ನೀನಿರುವೆ. ನೀನು ನನ್ನಲ್ಲಿ ಒಂದಾಗಿರುವುದರಿಂದ ನೀನು ನನ್ನೊಳಗೆ ಇರಲೇಬೇಕು.

ನಾನು ಹೇಗೆ ಪ್ರೀತಿ ವಿನೋದವನ್ನು ವರ್ಣಿಸಲಿ. ನನ್ನದೆಂದು ನನ್ನಲ್ಲಿ ಏನೂ ಇಲ್ಲ. ಆರಂಭದಲ್ಲೇ ನಾನು ಪ್ರೀತಿಯಲ್ಲಿ ಒಂದಾಗಿ ಸೇರಿದ್ದೇನೆ. ಆಮೇಲೆ ನಾನು ಪ್ರೀತಿಯ ಒಡೆಯನಾದೆ. ಈಗ ಕೇವಲ ಪ್ರೀತಿ ಮಾತ್ರ ಉಳಿದಿದೆ. ಇನ್ನೇನೂ ಉಳಿದಿಲ್ಲ. ಪ್ರೀತಿಯ ಬಟ್ಟಲನ್ನು ನಿನ್ನ ತುಟಿಗೆ ಒತ್ತಿದಾಗ, ನಿನ್ನೆದೆಗೆ ಅದನ್ನು ಅಪ್ಪಿಕೊಂಡಾಗ ನೀನು ಉಲ್ಲಾಸದ ಅನುಭವದಲ್ಲಿ ಮುಳುಗಿ ಹೋಗುತ್ತೀ.

ಈ ಅಮೃತವನ್ನು ಸೇವಿಸದೇ ಇದ್ದರೆ ನೀನು ಹೇಗೆ ಈ ವಿಶ್ವ ಸಾಮ್ರಾಜ್ಯವನ್ನು ನೋಡಿಕೊಂಡಿರಲು ಸಾಧ್ಯ? ಅದಿಲ್ಲದಿರುತ್ತಿದ್ದರೆ ನಿನಗೆ ದೇವರಾಗಿ ಉಳಿಯಲು ಅಥವಾ ಒಡೆಯನಾಗಿರಲು ಸಾಧ್ಯವಾಗಿರುತ್ತಿತ್ತೇ?

* * * *

೧೩. ತಳಮಳದ ಕಾರಣ

ಸ್ವರ್ಗೀಯ ಸುವಾಸನೆಯಿಂದ ನಗುತ್ತ ಅರಳಿರುವ ಈ ಪುಷ್ಪಗಳನ್ನು ನೋಡು. ಅವುಗಳನ್ನು ನೋಡಿದ ಕ್ಷಣದಲ್ಲೇ ನೀನು ಪ್ರಿಯ ಭಗವಂತನ ನೆನಪಿನಲ್ಲಿ ಮುಳುಗುವುದಿಲ್ಲವೇ?

ಹೂವಿನಂತಿರುವ ನಿನ್ನ ಬಂಧು ಬಳಗವನ್ನು ತೊರೆದು, ಅರಣ್ಯವನ್ನು ಪ್ರವೇಶಿಸಿ, ಭಗವಂತನನ್ನು ಧ್ಯಾನಿಸಲು ಕಷ್ಟಗಳನ್ನು ಅನುಭವಿಸುವಿಕೆ ಏಕೆ?

ಕೆಂದಾವರೆಯಂತೆ ಕೆನ್ನೆಗಳಿರುವ ಈ ಮಕ್ಕಳನ್ನು ನೋಡು. ನಿನ್ನ ನಲ್ಲೆಯ ಸುಮಧುರ ಮುಖಾರವಿಂದವನ್ನು ನೀನು ಅವರಲ್ಲಿ ಕಾಣುವುದಿಲ್ಲವೇ?

ಆತನ ಪ್ರೀತಿಯ ದೈವಿಕ ಹನಿಯನ್ನು ನಿನ್ನ ಮೃದು ಹೃದಯದಲ್ಲಿ ಗಳಿಸಲು ಸಾಧ್ಯವಿಲ್ಲವೇ?

ಅವರನ್ನೇಕೆ ತುಚ್ಛೀಕರಿಸಿ ಅಥವಾ ಪರಿತ್ಯಜಿಸಿ, ಅರಣ್ಯವನ್ನು ಪ್ರವೇಶಿಸಿ, ದೇವರಿಗಾಗಿ ಪ್ರಲಾಪಿಸಲು ಆರಂಭಿಸುವೆ?

ಮುಂಗಾರಿನ ಆಕಾಶದಲ್ಲಿ ಈ ಮಿನುಗುವ ನಕ್ಷತ್ರಗಳು, ಮಾಲೆಯಂತೆ ಕಾಣುವ ಮೋಡಗಳು! ಇವೆಲ್ಲದರ ಸೃಷ್ಟಿಕರ್ತನ ಲಲಿತ ಮನೋಹರ ಪರಮಶ್ರೇಷ್ಠತೆಯ ಅರಿವಾಗದೆ?

ನಿನ್ನನೇಕೆ ಪರ್ವತಗಳ ಗುಡಿಗಳಲ್ಲಿ ಬಂಧಿಸಿಟ್ಟು, ಪ್ರೀತಿಯನ್ನು ಅರಿಯಲು ಹೆಣಗುತ್ತ ಗಟ್ಟಿಯಾಗಿ ಅಳುತ್ತಿರುವೆ? ಓ ನನ್ನ ಪ್ರಿಯ ಸಾಧಕನೆ, ನಿನಗೆ ಎಲ್ಲವೂ ದೊರಕಿದೆ. ಆದರೆ ಒಂದು ಮುಖ್ಯವಾದ ವಿಷಯವನ್ನು ಮರೆತಿರುವೆ. ಆದುದರಿಂದಲೇ ನೀನು ಹಗಲೂ ರಾತ್ರಿ ಅತ್ಯಾಶೆಯಿಂದ ಅದನ್ನು ಅರಸುತ್ತಿರುವೆ. ಅವನ ಭಾಗವಲ್ಲದ ಒಂದೇ ಒಂದು ಅಣುವನ್ನಾಗಲಿ, ಅವನಿಲ್ಲದ ಒಂದೇ ಒಂದು ಚಿಕ್ಕ ಸ್ಥಳವನ್ನಾಗಲಿ ನನಗೆ ತೋರಿಸುವೆಯಾ? ನಿನಗೆ ಪೂರ್ತಿಯಾಗಿ ಜ್ಞಾನೋದಯವಾಗಿಲ್ಲ. ಅದರ ಪರಿಣಾಮವಾಗಿ ನಿನ್ನ ಏಕಾಂತದ ಜೀವನದಲ್ಲಿ ಘರ್ಷಣೆ ಇದ್ದು ವಿಷ ತುಂಬಿದೆ, ಅತೃಪ್ತಿ ಅಲ್ಲಿ ನೆಲೆ ನಿಂತಿದೆ. ಅಶಾಂತಿಯ ತಳಮಳಕ್ಕೆ ಅದು ಶಾಶ್ವತ ನೆಲೆಯಾಗಿದೆ.

* * * *

೧೪. ನೀನು ಪಂಡಿತನೆಂದು ನಂಬಲಾರೆ

ನೀನು ತುಂಬಾ ತಿಳಿದವನೆಂದು ನಾನು ಭಾವಿಸಿಲ್ಲ. ನಿನ್ನ ಚಹರೆಯಲ್ಲಿ ಖಿನ್ನತೆ ಇದೆ. ನಿನ್ನನ್ನು ತಿಳಿದವನೆಂದು ನಾನು ಭಾವಿಸಲಾರೆ.

ಸೂರ್ಯೋದಯಕ್ಕೆ ಮುನ್ನ, ಉಲ್ಲಾಸಕರ ಮುಂಬೆಳಕಿನ ಮರುಳುಗೊಳಿಸುವ ಸೌಂದರ್ಯದಂತೆ ನಿನ್ನ ಮನಸ್ಸು ಸುಮಧುರ ನಗುವಿನ ಕಾಂತಿ ಮತ್ತು ಅತ್ಯಾನಂದದಲ್ಲೂ ಸುಂದರಗೊಳ್ಳಲಿಲ್ಲ. ನೀನು ತಿಳಿದವನೆಂದು ನಾನು ಭಾವಿಸಲಾರೆ.

ಜಗತ್ತು ದುಃಖದಿಂದ ತುಂಬಿದೆ. ದುಃಖಿಸುತ್ತಿರುವುದರಿಂದ ನೀನು ಅದನ್ನು ಮತ್ತೂ ದುಃಖಮಯವನ್ನಾಗಿ ಮಾಡುತ್ತಿರುವೆ. ನಿನ್ನನ್ನು ನಾನು ವಿದ್ವಾಂಸನೆಂದು ಕರೆಯಲಾರೆ. ಅವಿಚ್ಛಿನ್ನವಾದ ಅವಿನಾಶಿಯಾಗಿರುವ ಅಂತರ್ಗತವಾದ ಸುಖಾನುಭವ ನಿನಗೆ ಒಂದು ರಹಸ್ಯವೇ ಆಗಿದೆ.

ಎಲ್ಲವೂ ಅಂತರ್ಗತವಾಗಿರುವ ಜೀವನ ಎಂಬ ಸುಮಧುರ ಹೊಳೆಯಲ್ಲಿ ಸ್ನಾನ ಮಾಡುವ ಕಲೆಯೇ ನಿನಗೆ ಗೊತ್ತಿಲ್ಲ. ನಿನ್ನಲ್ಲಿ ನಲಿವೂ ಇಲ್ಲ, ಉಲ್ಲಾಸಾನುಭವವೂ ಇಲ್ಲ. ಅಥವಾ ಮಧುರತೆಯನ್ನು ಹೀರಿರುವುದಾಗಲೀ ಅದರ ಸವಿಯಾಗಲೀ ನಿನಗೆ ಗೊತ್ತಿಲ್ಲ. ನಾನು ನಿನ್ನನ್ನು ವೇದಾಂತಿ ಎಂದು ನಂಬಲಾರೆ. ವಿಶ್ವ ಒಂದೇ ಎಂಬ ವಿಶ್ವದ ಐಕ್ಯತೆಯ ಅರಿವಿನಿಂದ ಬರುವ ಅತ್ಯಾನಂದ ಮತ್ತು ಸುಖಾನುಭವದ ಒಂದು ತುಣುಕು ಕೂಡ ನಿನಗೆ ದೊರೆತಿಲ್ಲ.

ಶಿಶುವಿನ ಸರಳತೆ ನಿಷ್ಕಪಟತೆ ಮತ್ತು ಪ್ರಾಮಾಣಿಕತೆ ಇಲ್ಲದೆ ನೀನು ಪ್ರತಿಕ್ಷಣ ಜೀವನದ ಆನಂದವನ್ನು ಅನುಭವಿಸಲಾರೆ. ಈ ಜೀವನ ಮತ್ತು ಜಗತ್ತಿನ ಸುಖಾನುಭವವನ್ನು ನೀನು ಅನುಭವಿಸಲೂ ಸಾಧ್ಯವಿಲ್ಲ. ಇತರರಿಗೆ ತಿಳಿಸಲೂ ಸಾಧ್ಯವಿಲ್ಲ.

ನಾನು ನಿನ್ನನ್ನು ವಿದ್ವಾಂಸನೆಂದು ನಂಬುವುದಿಲ್ಲ. ನಿನ್ನ ಚಹರೆಯಲ್ಲಿ, ಮುಖಭಾವದಲ್ಲಿ ನಿರುತ್ಸಾಹ, ಖಿನ್ನತೆ, ದುಃಖ, ಭಯ ತುಂಬಿಕೊಂಡಿವೆ.

* * * *

೧೫. ಪ್ರೀತಿಯ ಅಂತಿಮ ನಿವಾಸ

ಅಧಿಕಾರ ಮತ್ತು ಪ್ರತಿಷ್ಠೆಯ ತುಟ್ಟತುದಿಯಿಂದ ಕೆಳಗಿಳಿದು, ಹರಿದು ಚಿಂದಿಯಾದ ಬಟ್ಟೆ ತೊಟ್ಟು ನಿನ್ನ ಬಳಿ ಬಂದೆ. ನನ್ನ ಅಹಂಭಾವ ಮತ್ತು ತೋರಿಕೆಯ ಹೃದಯವನ್ನು ಸತತವಾಗಿ ಹರಿಯುವ ಕಣ್ಣೀರ ಧಾರೆಯ ಮೂಲಕ ನಿನ್ನ ಪದತಳಕ್ಕೆ ಪ್ರವಹಿಸಿದೆ. ಆಕಾಶದ ಎತ್ತರಕ್ಕೆ ತಲೆಎತ್ತಿಕೊಂಡೇ ಅಭ್ಯಾಸವಾಗಿದ್ದ ನನ್ನ ಶಿರ ಇದ್ದಕ್ಕಿದ್ದಂತೆ ನಿನ್ನ ಕಮಲದಂಥಾ ಪಾದದ ಧೂಳಿನತ್ತ ಬಾಗಿತು. ನನ್ನ ವಿದ್ವತ್ತೆಲ್ಲಾ ನನ್ನ ಆತ್ಮದ ಯಾತನಕಾರಕ ನಿಟ್ಟುಸಿರು ಮತ್ತು ರೋದನದಿಂದ ಪಸರಿಸುವುದು.

ಇತ್ತೀಚಿನವರೆಗೆ ನಿನ್ನ ಪ್ರೀತಿಯ ಅಮೃತವನ್ನು ಸವಿಯಲು ನನ್ನಿಂದ ಸಾಧ್ಯವಾಗಲಿಲ್ಲ. ಕಾರಣ ನನ್ನ ಹುಡುಕಾಟ ನಿನ್ನ ಜಗತ್ತಿನಲ್ಲಿ ಕೊನೆಗೊಂಡಿತು. ಆದರೆ ಕಟ್ಟಕಡೆಗೆ ನಾನು ನನ್ನನ್ನು ಬಾಹ್ಯ ಶೃಂಗಾರದ ಸಂಕೋಲೆಯ ಬಿಗಿ ಮುಷ್ಟಿಯಿಂದ ಬಿಡಿಸಿಕೊಂಡು ನಿನ್ನ ಪದತಳದ ಪವಿತ್ರ ಧೂಳಿನಲ್ಲಿ ಹೊರಳಾಡುತ್ತಿರುವೆ. ಪ್ರೀತಿಯ ನಿಜವಾದ ತಾನ ಯಾವುದೆಂದು ನನಗೆ ಈಗ ತಿಳಿದಿದೆ.

* * * *

೧೬. ಅನಿರ್ಬಾಧಿತ ಜ್ಞಾನ

ನನ್ನೆಡೆಗೆ ಬಾ. ನಿನಗೆ ಸುಸ್ವಾಗತ. ನನ್ನ ಈ ಪುಟ್ಟ ಪರ್ಣ ಕುಟೀರ ನಿನ್ನ ನೆಚ್ಚಿನ ಸುವಾಸನೆ ಇರುವ ಪಾದಗಳ ಸ್ಪರ್ಶದಿಂದ ಪವಿತ್ರವಾಗುವುದು.

ನಿನಗೊಂದು ಉಡುಗೊರೆ ಕೊಡಲಿಕ್ಕಾಗಿಯೇ ನಾನಿಲ್ಲಿಗೆ ಬಂದಿರುವುದು. ಈ ದಿನ ಎಲ್ಲಾ ಧರ್ಮ ಗ್ರಂಥಗಳನ್ನು ಮತ್ತು ಸಮಗ್ರ ಜ್ಞಾನ ಭಂಡಾರವನ್ನು ನಿನಗೆ ಅರ್ಪಿಸಲಿಕ್ಕಾಗಿಯೇ ನಾನು ಇಲ್ಲಿಗೆ ಬಂದಿರುವುದು. ನನ್ನಿಂದಾಗಿ ಈ ದಿನ ವಿದ್ಯಾದೇವತೆಯು ನಿನ್ನ ದಾಸಿಯಾಗುವಳು.

"ಆದರೆ ಸ್ವಾಮಿ, ನನಗಿದರಿಂದ ಏನು ಪ್ರಯೋಜನ?"

"ನಿನ್ನ ವಿದ್ವತ್ತಿನಿಂದಾಗಿ ನೀನು ಅಪೇಕ್ಷಿಸದ ಕೀರ್ತಿ ನಿನಗೆ ಲಭಿಸುವುದು. ನಿನಗೆ ಅಮರತ್ವ ದೊರೆಯುವುದು. ನೀನೇಕೆ ಅದರ ಉಪಯುಕ್ತತೆಯ ಕುರಿತು ಕೇಳುವೆ?"

"ಇಲ್ಲಿ ನನ್ನೊಡೆಯ ನಾನು ಎಂದೆಂದಿಗೂ ಇಂದಿರುವಂತೆಯೇ ಅನಕ್ಷರಸ್ಥ ನಾಗಿರುವಂತೆ ಮಾಡು. ನನ್ನ ನಮ್ರ ಹೃದಯದಲ್ಲಿ ಧರ್ಮಗ್ರಂಥಗಳು ಹೊಳೆಯಲಿ. ಬುದ್ಧಿವಂತಿಕೆಯಲ್ಲಿ ಒಂದಾಗಿರುವ ಜೀವನವನ್ನು ನಾನು ನಡೆಸುವಂತಾಗಲಿ. ಆ ರೀತಿಯ ಜೀವನದಿಂದ ನನಗೆ ಸಂತೋಷ ಸಿಗಲಿ. ಅದು ಮಾತ್ರ ನನ್ನನ್ನು ಧನ್ಯನನ್ನಾಗಿಸುವುದು. ಇಂತಹ ಹೊರೆಯನ್ನು ನನ್ನ ತಲೆಯಲ್ಲಿ ಹೊತ್ತುಕೊಂಡು ನಾನು ಮತ್ತೇನು ಮಾಡಬಹುದೆಂದು ಭಗವಂತನೇ ತಿಳಿಸು. ಅದರಿಂದ ನನಗೇನು ಲಾಭ.

* * * *

೧೭. ಸಿದ್ಧಿ ಮತ್ತು ಆರಾಧನೆ

ಬೆಳದಿಂಗಳ ರಾತ್ರಿಯಲ್ಲಿ ಆಕೆ ಬಂದು ನನ್ನ ದೇಗುಲದ ದ್ವಾರದ ಬಳಿ ನಿಂತಳು. ಆಕೆಯ ನೂಪುರದ ಸದ್ದಿಗೆ ನಾನು ಎಚ್ಚರಗೊಂಡೆ. ಮನೋಹರವಾದ ಬೆಳದಿಂಗಳು ತುಂಬ ಆಕರ್ಷಕವಾಗಿ ಕಂಡುಬಂತು. ವಿಶ್ವದ ಅಮೃತ ಸರೋವರದಲ್ಲಿ ಕಮಲದ ಹೂಗಳು ಅರಳಿದಂತೆ ಕಾಣುತ್ತಿತ್ತು. ಕೈಯಲ್ಲಿ ಸುಂದರವಾದ ಹೂಮಾಲೆ ಹಿಡಿದುಕೊಂಡು, ತಲೆಗೆ ಹೂ ಮುಡಿದುಕೊಂಡು ಬರುತ್ತಿದ್ದಳು. ಆಕೆಯ ದೇಹದಿಂದ ಸುವಾಸನೆ ಹೊರಹೊಮ್ಮುತ್ತಾ, ಆ ಲಲಿತ ಮನೋಹರ ಬೆಳದಿಂಗಳ ರಾತ್ರಿಯಲ್ಲಿ ಆಕೆ ಬಂದು ನನ್ನ ದೇಗುಲದ ಬಾಗಿಲಲ್ಲಿ ನಿಂತಳು.

ಇನ್ನೊಬ್ಬ ಸುಂದರವಾದ ಹುಡುಗಿ ಆಕೆಯ ಹಿಂದೆ ನಿಂತಿದ್ದಳು. ಆದರೆ ಆಕೆ ಅಳುತ್ತಿದ್ದಳು.

ಆಕೆ ಮೆಲ್ಲನೆ ಪಿಸುಗುಟ್ಟಿದಳು "ನನ್ನ ಹೆಸರು ಸಿದ್ಧಿ. ಮತ್ತು ಈ ಅಳುತ್ತಿರುವ ಹುಡುಗಿಯ ಹೆಸರು ಆರಾಧನೆ."

"ಆದರೆ ಆಕೆ ಅಳುತ್ತಿರುವುದೇಕೆ?" ಎಂದು ಕೇಳಿದೆ.

"ಏಕೆಂದರೆ ನೀನಿಂದು ನನ್ನನ್ನು ಸ್ವೀಕರಿಸಲು ಸಿದ್ಧನಾಗಿರುವೆ. ಆದರೆ ಪ್ರೀತಿಗೆ ಯೋಗ್ಯವಾಗಿರುವ ಈ ಯುವತಿಗೆ ಯಾವಾಗಲೂ ನನ್ನನ್ನು ಸ್ವೀಕರಿಸಿ ಅಪ್ಪಿಕೊಂಡವರಿಂದ ನೋವನ್ನು ಅನುಭವಿಸಿದ್ದಾಳೆ. ಆದುದರಿಂದ ಅಳುತ್ತಿದ್ದಾಳೆ."

"ಇಲ್ಲ ಇಲ್ಲ" ನಾನು ವಿವರಿಸಿದೆ. "ಈ ದುಃಖದ ಕಥೆ ಪುನರಾವರ್ತನ ಗೊಳ್ಳುವುದಿಲ್ಲ. ನೀವಿಬ್ಬರೂ ಇನ್ನು ಮುಂದೆ ನನ್ನ ಜತೆಯಲ್ಲೇ ಸಹೋದರಿಯರಂತೆ ಇರುವಿರಿ."

ತಕ್ಷಣವೇ ಅವರ ಕಮಲದಂಥಾ ಮುಖದಲ್ಲಿ ಆಕರ್ಷಕ ನಗು ಚೆಲ್ಲಿತು. ಇಬ್ಬರೂ ನನಗೆ ಹೂವಿನ ಹಾರವನ್ನು ಹಾಕಿದರು.

* * * *

೧೮. ನಿರ್ಭಯತೆಗೆ ಕಾರಣ

ವಿವೇಚನೆ ಮತ್ತು ನಿರ್ವಿಕಾರ ಎಂಬ ಪಾದರಕ್ಷೆಗಳನ್ನು ಧರಿಸಿ ನಾವು ಈ ವಿಶಾಲ ಜಗತ್ತಿನಲ್ಲಿ ಪ್ರಯಾಣಿಸುತ್ತೇವೆ. ಇದೆಲ್ಲಾ ಸಾಧ್ಯವಾದುದು ಹೇಗೆಂದರೆ ನಮಗೆ ಕಲ್ಲು ಮುಳ್ಳುಗಳ ಭಯವಿಲ್ಲ. ನಾವು ನಡೆಯುವ ದಾರಿ ಏನೂ ನಿರ್ವಿಘ್ನವಾಗಿ, ನಯವಾಗಿ, ಕೋಮಲವಾಗಿ ಇರಬಹುದು. ಆದರೂ ನಮಗೆ ಭಯವೇ ಇಲ್ಲ.

ಸಹನೆ ಎಂಬ ಕತ್ತಿಯನ್ನು ಹಿಡಿದುಕೊಂಡು ನಾವು ಈ ಸುಂದರ ಭೂಮಿಯ ಮೇಲೆಲ್ಲಾ ಅಲೆದಾಡಿದೆವು. ಆದುದರಿಂದಲೇ ದುಃಖದಲ್ಲೂ ನಲಿವು, ಅನಾದಾರದ ಮಧ್ಯದಲ್ಲೂ ಗೌರವ ಇರುವಂತೆ, ಕಳ್ಳಕಾಕರ ಮಧ್ಯದಲ್ಲಿ ನಾವು ನಿರ್ಭೀತರಾಗಿದ್ದೇವೆ.

ಅಮೃತಸದೃಶ ಮತ್ತು ನಿರ್ಬಂಧಿತ ಪ್ರೀತಿ ಎಂಬ ಔಷಧಿಯ ಅಮಲಿನಲ್ಲಿದ್ದು, ನಾವು ಭೂಮಿಯ ಪ್ರದಕ್ಷಿಣೆ ಮಾಡಿದೆವು. ಆದುದರಿಂದ ಮನಸ್ಸು, ದೇಹ, ಹೃದಯದ ಯಾವ ಕಾಯಿಲೆಯೂ ನಮ್ಮನ್ನು ಸೋಂಕುವುದಿಲ್ಲ.

ಓ ನನ್ನ ಪ್ರೀತಿಯ ಬೈರಾಗಿಯೇ! ನಮ್ಮ ದೇಹದ ಕಣ ಕಣದಲ್ಲೂ ಭಗವಂತನ ದಯಾಶಾಂತಿಯು ಪ್ರಕಾಶಿಸುತ್ತಿರುವಾಗ ನಾವು ಈ ವಿಶ್ವವನ್ನೆಲ್ಲಾ ಸುತ್ತಾಡಿದೆವು. ಆದುದರಿಂದ ನಮಗೆ ಆಂತರಿಕ ಅಥವಾ ಬಾಹ್ಯ ಅಂಧಕಾರದಿಂದ ಭಯವಾಗುವುದಿಲ್ಲ. ಕಾಲ ಮತ್ತು ಪರಿಸ್ಥಿತಿಯ ಪರಿವೆ ಇರುವುದಿಲ್ಲ. ಯಾವ ಆಲೋಚನೆ ಇಲ್ಲದೆ ಉಸಿರಾಡುವೆವು.

* * * *

೧೯. ನಾನು ನಿನ್ನನ್ನು ಸಮೀಪಿಸುತ್ತೇನೆ

ನಾನು ಬಹಳಷ್ಟು ಚಿಂತನೆ ಮಾಡಿ ಕಣ್ಣಿವೆ ಮುಚ್ಚದೆ, ನಿನ್ನನ್ನೇ ನೋಡುತ್ತಾ ನಿನ್ನನ್ನು ಸಮೀಪಿಸಿದೆ. ಆದರೆ ನಿನ್ನ ಪವಿತ್ರ ನೋಟ ನನ್ನ ದೃಷ್ಟಿಯನ್ನು ಸಂಧಿಸಿದ ಕ್ಷಣ ನಾನು ಎಲ್ಲವನ್ನು ಕಳೆದುಕೊಂಡೆ. ನನ್ನ ಆತ್ಮದ ಅಮೂಲ್ಯ ಸಂತೃಪ್ತಿ ಎಂದರೆ, ಯಾವ ಶಂಕೆಯೂ ಇಲ್ಲದೆ ನಿನ್ನ ಚರಣಕ್ಕೆ ಶರಣು ಹೋಗುವುದು.

ನನ್ನ ಎಲ್ಲಾ ಶಕ್ತಿ ಸಾಮರ್ಥ್ಯದಿಂದ ನಿನ್ನ ಚರಣಗಳನ್ನು ಮುದ್ದಿಸುವ ಏಕೈಕ ಮನೋಭಾವನೆಯಿಂದ ನಿನ್ನ ಮುಂದೆ ಬಂದಿದ್ದೇನೆ. ಆದರೆ ಅದರ ಮಾದಕ ಸುವಾಸನೆಯಿಂದ ನಾನು ನನ್ನನ್ನು ಮರೆತೆ. ನನ್ನ ಹೃದಯವನ್ನೇ ಅದರ ಮೇಲೆ ಹರಿಯಲು ಮಾತ್ರ ಸಾಧ್ಯ.

ನಿನ್ನೊಡನೆ ಸಂಭಾಷಿಸಲಿಕ್ಕಾಗಿಯೇ ನನ್ನ ಯೋಜನೆ ಇದ್ದು ನಿನ್ನ ಮುಂದೆ ನಿಂತಿದ್ದೇನೆ. ಆದರೆ ನಿನ್ನ ಸದ್ದಿಲ್ಲದ ಸುಮಧುರ ಸಂಗೀತ ಕೇಳಿ, ಅದರಲ್ಲೆ ಮುಳುಗಿ ನನ್ನನ್ನೇ ನಾನು ಮರೆತೆ.

ನಿನ್ನ ಅಂದವನ್ನು ನನ್ನ ಪರಮ ಶ್ರೇಷ್ಠ ಅತಿ ಹೆಚ್ಚಿನ ತೃಪ್ತಿಗಾಗಿ ಮತ್ತು ನಿನ್ನ ಪ್ರೀತಿಯ ಅಮೃತವನ್ನು ನನ್ನ ಹೃದಯ ಬಟ್ಟಲಿನಲ್ಲಿ ಕುಡಿಯುವ ಯೋಚನೆಯಿಂದ ನಾನು ನಿನ್ನನ್ನು ಸಂದರ್ಶಿಸಲು ಬಂದೆ. ಆದರೆ ನಿನ್ನ ಸೌಂದರ್ಯದ ಸವಿಯಿಂದ ಮಿತಿಮೀರಿದ ಆನಂದವನ್ನು ಅನುಭವಿಸಿದೆ. ಹರ್ಷೋನ್ಮಾದ ಅನುಭವ ಹೊಂದಿ ಈಗ ನಾನು ನಿನ್ನಲ್ಲಿ ಐಕ್ಯವಾಗಿದ್ದೇನೆ.

* * * *

೨೦. ನಮ್ರತೆಗಾಗಿ ಪ್ರಾರ್ಥನೆ

ನನ್ನ ಅಹಂಕಾರವು ನಿನ್ನ ಶಕ್ತಿಯುತ ಸುತ್ತಿಗೆಯಂಥಾ ಕೈಗಳ ತೀಕ್ಷ್ಣವಾದ ಹೊಡೆತದಿಂದ ನುಚ್ಚುನೂರಾಗಲಿ. ಪ್ರೀತಿ ಮತ್ತು ಧನ್ಯತಾ ಭಾವಗಳ ಪ್ರತಿರೂಪದಂತೆ ನಾನು ಕೈ ಮುಗಿದುಕೊಂಡು, ಈ ಭೂಮಿ ಮೇಲಿರುವ ಅತ್ಯಂತ ನಿಕೃಷ್ಟ ಜಂತುವಿನ ಮುಂದೆ ನಿಲ್ಲುವ ಭಾಗ್ಯ ದೊರಕಲಿ.

ನಿನ್ನ ಪಾದದ ಪವಿತ್ರ ಧೂಳಿನಿಂದ ನನ್ನ ತಲೆ ಹೊಲಸಾಗಲಿ. ಅಧಿಕಾರ ಮತ್ತು ಕೀರ್ತಿಯ ಮದದಿಂದ ಯಾವಾಗಲೂ ತಲೆ ಎತ್ತಿ ನಿಂತಿದ್ದ ನನ್ನ ಶಿರ ನಿನ್ನ ಪಾದಕ್ಕೆ ಸದಾ ನಮಸ್ಕರಿಸುತ್ತಿರಲಿ.

ತೂಕ ಇಲ್ಲದ ಧೂಳಿನ ಕಣ ಮಾತ್ರ ಆಕಾಶದಲ್ಲಿ ಹಾರುವುದು. ಆವಿಯಾಗಿ ಮಾರ್ಪಟ್ಟ ನೀರು ಮೇಲಕ್ಕೇರುವುದು. ನಿನ್ನಿಂದ ನಾನು ಅದನ್ನು ಕಲಿಯಲು ಬಂದೆ.

* * * *

೨೧. ಪ್ರೀತಿಯ ಪರಿಹಾಸ್ಯ

ಎಂದು ನೀನು ನನ್ನ ಜೀವನದಲ್ಲಿ ಸುಲಭವಾಗಿ ದೊರೆಯುವೆ? ನನ್ನ ಜೀವನದ ಆರಂಭದಲ್ಲಿ ನೀನು ತಾಯಿಯ ರೂಪದಲ್ಲಿ ನನ್ನ ಮುಂದೆ ಬಂದು, ನಿನ್ನ ದೈವಿಕ ಪ್ರೀತಿಯ ಅಮೃತವನ್ನು ಕುಡಿಸಿದೆ. ಆದರೆ ಅದೇ ನೀನೆಂದು ನನಗೆ ಗೊತ್ತಾಗಲೇ ಇಲ್ಲ. ನಿನ್ನನ್ನು ನಾನು ಗುರುತಿಸದಾದೆ. ಆಮೇಲೆಯೂ ಗೆಳೆಯರ ಮತ್ತು ನನ್ನ ಮೆಚ್ಚುವವರ ರೂಪದಲ್ಲಿ, ಕೊನೆಗೆ ಅತ್ಯಂತ ಮೋಹಕ ರೂಪದ ಯುವತಿಯಂತೆ ಬಂದು ನಿನ್ನ ಪ್ರೀತಿಯನ್ನು ಪರಿಚಯಿಸಿದರೂ, ನೀನೇ ಬಳಿ ಬಂದರೂ ಅದು ನೀನೆಂದು ನನಗೆ ತಿಳಿಯಲಿಲ್ಲ. ನಿನ್ನನ್ನು ನಾನು ಗುರುತಿಸಲೇ ಇಲ್ಲ.

ಪ್ರಕೃತಿಯ ಹಲವಾರು ಭೂಷಣ ಅಲಂಕಾರಗಳಿಂದ ನೀನು ನನ್ನ ಮುಂದೆ ಬಂದು ಶಾಶ್ವತ ಐಕ್ಯವನ್ನು ಬಯಸಿದೆ. ಆದರೆ ಅದು ನೀನೆಂದು ನನಗೆ ತಿಳಿದಿರಲಿಲ್ಲ. ನಿನ್ನನ್ನು ನಾನು ಗುರುತಿಸಲೇ ಇಲ್ಲ.

ಕೊನೆಗೆ ಜೀವನದ ಸಂಧ್ಯಾಕಾಲದಲ್ಲಿ ಎಲ್ಲರಿಂದಲೂ ನಿರಾಶೆಗೊಂಡು, ಶಾಶ್ವತ ಸುಖಾನುಭವ ಪಡೆಯಲು ನಾನು ನಿನ್ನ ಕೃಪೆಗಾಗಿ ಪ್ರಯತ್ನಿಸುವೆ ಮತ್ತು ಯಾವಾಗ ನಾನು ನಿನ್ನ ಪ್ರಿಯ ಆರಾಧಕ ಎಂದು ಘೋಷಿಸಿ ಪ್ರಚಾರ ಮಾಡಿದರೆ, ಕರುಣಾಜನಕವಾಗಿ ನಿತ್ಯ 'ಅವಿಚ್ಛಿನ್ನ' ಅವಿಶ್ರಾಂತ ಪ್ರೀತಿಯನ್ನು ಅರಸುತ್ತಿರುವ ನಿನ್ನನ್ನು ನಾನೆಷ್ಟು ಪರಿಹಾಸ ಮಾಡುತ್ತಿರುವೆನೆಂದು ನನಗೇನೇ ಗೊತ್ತಿಲ್ಲ.

* * * *

೨೨. ದೈವೀಕೃಪೆ

ಶ್ರೀಗಂಧವನ್ನು ಹಚ್ಚಿದ ನಿನ್ನ ಪಾದಗಳ ಮೇಲೆ ಹೂವಿನಂತೆ ನಾನು ವಿಶ್ರಮಿಸುತ್ತಿರುವೆ. ಅಲ್ಲೇ ದೇವರ ಕೃಪೆ ಮತ್ತು ಶಾಂತಿ ಇರುವುದು. ನನ್ನನ್ನು ನೀನು ಛಿದ್ರ ಛಿದ್ರ ಮಾಡಿ ಕೆಳಗೆ ಹಾಕಬಹುದು. ಅಥವಾ ನಿನ್ನ ಪವಿತ್ರ ಶಿರವನ್ನು ಆರಾಧಿಸಿರುವುದಕ್ಕಾಗಿ ಅದೃಷ್ಟವಂತನಾಗಿಸಬಹುದು. ನಿನಗೇನು ಬೇಕು ಹಾಗೆ ಮಾಡು. ನಾನು ನಿನ್ನ ಪಾದದ ಮೇಲೆ ಹೂವಿನಂತೆ ವಿಶ್ರಮಿಸುತ್ತಿರುವೆ. ಅಲ್ಲೇ ನನಗೆ ಸಮಾಧಾನ ಸಿಗುವುದು. ಆ ಮೂಲಕ ಶಾಂತಿ ದೊರೆಯುವುದು.

ಪ್ರೀತಿಯಲ್ಲಿ ತಲ್ಲೀನನಾಗಿ ನಿನ್ನ ಸುಂದರ ಕೋಮಲ ಕಣ್ಣುಗಳನ್ನು ದಿಟ್ಟಿಸಿ ನೋಡಿದಾಗ ನಾನು ಅಲ್ಲೇ ಮೌನವಾಗಿ ವಿರಮಿಸುವೆ. ನೀನು ನನ್ನನ್ನು ಅವುಗಳಿಂದ ಚುಚ್ಚಬಹುದು. ಅಥವಾ ಪ್ರೀತಿಯನ್ನು ಚಿಮ್ಮಿಸಬಹುದು. ನಾನು ಮಾತ್ರ ನಿನ್ನ ಕಣ್ಣುಗಳನ್ನು ದಿಟ್ಟಿಸುವೆ. ಅಲ್ಲೇ ಇರುವುದು ನನ್ನ ದೈವಕೃಪೆ, ಆ ಮೂಲಕ ಪಡೆಯುವ ಶಾಂತಿ.

ಸದಾ ತೆರೆದ ಹೃದಯದಲ್ಲಿ ನಿನ್ನ ಸುಂದರ ಪವಿತ್ರ ಹೃದಯದ ಮಹಾದ್ವಾರದ ಬಳಿ ನಾನು ವಿಶ್ರಮಿಸುವೆ. ನೀನು ಬೇಕಾದರೆ ಅದನ್ನು ತಿರಸ್ಕರಿಸು, ಬಲವಾಗಿ ಅಮುಕು ಅಥವಾ ನಿನ್ನ ಪವಿತ್ರ ಗರ್ಭಗುಡಿಯಾಗಿ ಪರಿವರ್ತಿಸು. ನಿನ್ನ ತೆರೆದ ಹೃದಯದಲ್ಲಿ ನಾನು ನಿನ್ನ ಹೃದಯದ ಬಳಿಯೇ ವಿಶ್ರಮಿಸುವೆ. ಅಲ್ಲೇ ಇರುವುದು ನನಗೆ ಸಮಾಧಾನ, ಅಲ್ಲೆ ದೊರೆಯುವುದು ನನಗೆ ಶಾಂತಿ.

ನನಗೆ ನನ್ನ ಕರ್ತವ್ಯ ಮತ್ತು ನನಗೆ ದೈವ ಕೃಪೆ ಇದೆ ಎಂಬ ಅರಿವು ಇರುವುದರಿಂದ, ಇದು ಸಾಧ್ಯವಾಯಿತು. ನೀನು ನನ್ನನ್ನು ಸ್ವಾಗತಿಸಿ ಪ್ರೀತಿಯ ಹಾರವನ್ನು ಹಾಕಿ ಕೃಪೆ ತೋರಬಹುದು ಅಥವಾ ನೀನು ನನ್ನ ಮುಂದೆ ಬಾರದೆಯೂ ಇರಬಹುದು. ಆದರೆ ನನಗೆ ನನ್ನ ಕರ್ತವ್ಯದ ಅರಿವಿದೆ. ಆದುದರಿಂದ ನನಗೆ ನಿನ್ನ ಅನುಗ್ರಹ ಇದೆ. ಮತ್ತು ದೈವೀಕೃಪೆ, ನನ್ನ ಮೇಲೆ ಸದಾ ಇರುತ್ತದೆ.

* * * *

೨೩. ಏಕತೆಯ ಅಪೇಕ್ಷೆ

ಟಿಟ್ಟಿಬ ಪಕ್ಷಿಯಂತೆ ನನ್ನ ಕಣ್ಣುಗಳು ಹೊಳೆಯುತ್ತಾ ಸ್ಥಿರವಾಗಿ ನಿನ್ನ ಚಂದ್ರಕಾಂತಿಯಂಥ ಕೃಪಾವೃಷ್ಟಿಯಲ್ಲಿ ನೆಟ್ಟಿರಲಿ. ನಿನ್ನ ಸ್ವರ್ಗೀಯ ಸೌಂದರ್ಯ ನೋಡಿ ಅವುಗಳು ಉನ್ಮತ್ತಗೊಳ್ಳಲಿ ನನ್ನ ದೇವರೆ! ನನ್ನ ಮನಸ್ಸು ಪತಂಗದಂತೆ ನಿನ್ನ ಮುಖಾರವಿಂದದ ಮೇಲೆ ಸಂಪೂರ್ಣವಾಗಿ ಕೇಂದ್ರೀಕರಿಸಲಿ.

ಕೋಗಿಲೆಯ ವರ್ಣರಂಜಿತ ತುರಾಯಿಯಂತಿರುವ ನನ್ನ ಕಣ್ಣುಗಳು ಮೋಡಗಳಂತಿರುವ ನಿನ್ನ ಮುಖವನ್ನು ಧ್ಯಾನಿಸಲಿ. ನಿನ್ನ ಸ್ವರ್ಗೀಯ ಸೌಂದರ್ಯದಿಂದ ಉನ್ಮತ್ತಗೊಳ್ಳಲಿ. ನಿನ್ನ ಪ್ರೀತಿಯ ಸಾಗರದ ನೀರಿನಲ್ಲಿ ನನ್ನ ಮೀನಿನಂಥ ಮನಸ್ಸು ಸದಾ ತೇಲುತ್ತಿರಲಿ.

ಭಗವಂತನೆ! ನನ್ನ ಆತ್ಮವು ನಿನ್ನ ಪಾದಾರವಿಂದದಲ್ಲಿ ಅರ್ಪಿತವಾಗಿ ಭಕ್ತಿಯನ್ನು ಸ್ವಾಧಿಸುವುದರಲ್ಲೇ ಲೀನವಾಗುವ ವಿವೇಕ ನನಗಿರಲಿ. ನನ್ನ ಮನಸ್ಸಿನ ಹೊಳೆಯು ನಿನ್ನ ಭವ್ಯ ಪ್ರಶಾಂತ ಸಾಗರವನ್ನು ತಬ್ಬಿಕೊಂಡು ಅದರಲ್ಲಿ ಐಕ್ಯವಾಗಲಿ.

ಮಿಡತೆಯಂತಿರುವ ನನ್ನ ಮನಸ್ಸು ನಿನ್ನ ಪಾದದಲ್ಲೇ ಸ್ಥಿರಗೊಳ್ಳಲಿ. ನಿನ್ನ ಅಮೃತದ ರುಚಿಯಿಂದ ಅದಕ್ಕೆ ಅಮಲು ಉಂಟಾಗಲಿ. ವಿಶ್ವದ ಧ್ವನಿಯಲ್ಲಿ ಇತರ ಧ್ವನಿಗಳು ಒಂದಾಗುವಂತೆ ನನ್ನ ಮನಸ್ಸು ನಿನ್ನಲ್ಲಿ ಒಂದಾಗಲಿ. ನಿನ್ನ ರಮ್ಯ ಮಹಾಕಾವ್ಯ ಎಂಬ ಹಾರದಲ್ಲಿ ಒಂದು ಹೂವಿನಂತೆ ಸೇರಿಕೊಳ್ಳಲಿ.

* * * *

೨೪. ಪ್ರೀತಿಯ ಅಖಂಡತೆ

ನೋಡು ಮುಂಜಾನೆಯ ಸಮಯದಲ್ಲಿ ಅರುಣೋದಯದಲ್ಲಿ, ಕೆಲವು ಸುಂದರ ತಾವರೆಗಳು ಬಹಳ ರಮಣೀಯವಾಗಿ ವಿಕಸಿತವಾಗುವಾಗ, ನೀನು ನನ್ನ ಕಣ್ಣಿನಲ್ಲಿ ನಿನ್ನ ಪ್ರೀತಿಯ ಬೆಳಕು ಇಲ್ಲದಿರುವುದನ್ನು ಕಂಡರೆ, ನನ್ನ ಮೇಲೆ ಅಂದವನ್ನು ಬೀರಬೇಡ.

ಮಧ್ಯಾಹ್ನದ ಹೊತ್ತಿನಲ್ಲಿ ಉಗಿ ಯಂತ್ರವು ತಾನೇ ಕುದಿಯುವುದಲ್ಲದೆ, ಇತರರನ್ನು ಕುದಿಸುವಷ್ಟು ಭಯಂಕರ ಮಧ್ಯಾಹ್ನದಲ್ಲಿ ನೀನು, ನನ್ನ ದೇಹವು ನಿನ್ನ ಭಕ್ತಿಗೆ ಅರ್ಪಿತವಾಗಿರುವುದನ್ನು ಕಾಣದಿದ್ದಲ್ಲಿ ದಯಮಾಡಿ ನಿನ್ನ ದರ್ಶನದಿಂದ ನನ್ನನ್ನು ಧನ್ಯನನ್ನಾಗಿ ಮಾಡಬೇಡ.

ಮುಸ್ಸಂಜೆಯ ಬೆಳಕಿನಲ್ಲೂ ನನ್ನನ್ನು ನೋಡು. ಅತ್ಯಂತ ಮನೋಹರವಾದ ಮುಸ್ಸಂಜೆಯ ಬೆಳಕು ನಳನಳಿಸುತ್ತಾ ಅಲಂಕರಿಸಿಕೊಂಡು ಸ್ವರ್ಗಾರೋಹಣಕ್ಕೆ ಸಿದ್ಧವಾಗುತ್ತಿರುವ ಸಮಯದಲ್ಲಿ ನಿನಗಾಗಿ ಹಾತೊರೆಯುವ ಜೀವವನ್ನು ನನ್ನಲ್ಲಿ ಕಾಣದಿದ್ದಲ್ಲಿ, ನೀನು ನನ್ನ ಮೇಲೆ ಅಂದವನ್ನು ಬೀರಬೇಡ.

ರಾತ್ರಿಯಲ್ಲೂ ನನ್ನತ್ತ ನೋಡು. ಈ ಮನೋಹರ ರಾತ್ರಿ ಸೌಂದರ್ಯವನ್ನೇ ಧರಿಸಿದ ಮಹಾರಾಣಿಯಂತೆ ಕಾಯುತ್ತಿರುವಾಗ, ನನ್ನ ಕಣ್ಣುಗಳು ಪ್ರೀತಿಯ ಪ್ರವಾಹವನ್ನು ಹರಿಸದಿದ್ದರೆ ಮತ್ತು ನಿನ್ನನ್ನೇ ಅಪೇಕ್ಷಿಸದಿದ್ದರೆ ನಿನ್ನ ದರ್ಶನದಿಂದ ನನ್ನನ್ನು ಧನ್ಯನನ್ನಾಗಿಸಬೇಡ.

ಮೌನವಾಗಿರುವ ಸುಂದರ ಮಧ್ಯರಾತ್ರಿಯ ಪುಣ್ಯಕಾಲದಲ್ಲೂ ನನ್ನನ್ನು ಗಮನಿಸು. ಪ್ರೀತಿಯು ಹರಿಯುತ್ತಿರುವುದನ್ನು ಮಿತಿಮೀರಿದ ಸಂತೋಷವನ್ನು ಸೂಸುವ ನನ್ನ ಕಣ್ಣ ರೆಪ್ಪೆಗಳಲ್ಲಿ ಕಾಣದಿದ್ದರೆ ನಿನ್ನ ದರ್ಶನ ಭಾಗ್ಯ ನನಗಿರದಿರಲಿ.

ಎಲ್ಲೇ ಆದರೂ, ಯಾವ ಕಾಲದಲ್ಲೇ ಆದರೂ, ಯಾವ ರೀತಿಯಲ್ಲಿ ಇದ್ದರೂ ನನ್ನನ್ನು ಗಮನಿಸು. ಕೇಳಲು ಸಾಧ್ಯವೇ ಇಲ್ಲದ ಮೆಲುನುಡಿಯ ಮಾತುಗಳನ್ನು ಮತ್ತು ನನ್ನ ಹೃದಯ ಹಾಗೂ ನನ್ನ ದೇಹದ ಪ್ರತಿ ಕಣದಲ್ಲಿ ನಿನ್ನ ಪವಿತ್ರ ವ್ಯಕ್ತಿತ್ವದ ನರ್ತನವು ನನಗೆ ಕೇಳದಿದ್ದಲ್ಲಿ ನನಗೆ ನಿನ್ನ ದರ್ಶನವು ದೊರೆಯದಿರಲಿ.

* * * *

೨೫. ಹೃದಯದ ಸ್ಥಿತಿ

ನನ್ನ ಗುಣಗಾನ ಮಾಡುತ್ತಿರುವ ಗಾಯಕನೇ! ಅನುಮಾನವಿಲ್ಲದೆ ನನ್ನಲ್ಲಿ ನಂಬಿಕೆ ಇಡು. ನನ್ನ ಹೃದಯ ವೀಣೆ ಅನೇಕಾನೇಕ ಸುಶ್ರಾವ್ಯ ಶ್ರುತಿಗಳಿಂದ ತುಂಬಿದೆ. ಅದು ಸಂಗೀತದ ಅಗಣಿತ ಶ್ರುತಿಗಳಿಗೆ ಶ್ರುತಿ ಮೇಳವಿಸಿದೆ. ಪ್ರತಿ ತಂತಿಯಲ್ಲೂ, ಧ್ವನಿಯಲ್ಲೂ, ಲಯದಲ್ಲೂ, ತಾಳದಲ್ಲೂ, ಪ್ರತಿಕ್ಷಣದ ಭಕ್ತಿಯುತ ತಪಶ್ಚರ್ಯದಿಂದ ತುಂಬಿದೆ.

ಇಷ್ಟರವರೆಗಿದ್ದ ಒಂದೇ ಮಾದರಿಯ ಸಂಗೀತದ ಸ್ವರ ಲಕ್ಷಣವನ್ನು ತ್ಯಜಿಸು ಗಾಯಕನೆ. ಹೊಸತನ್ನು ಹುಡುಕುವುದರಲ್ಲಿ ನನ್ನ ಕಣ್ಣುಗಳಿಗೆ ಅಭ್ಯಾಸವಾಗಿದೆ. ನವನವೀನವೂ ಸುಂದರವೂ ಆಗಿರುವುದನ್ನೇ ನಾನು ಯಾವಾಗಲೂ ಪೂಜಾ ಪುಷ್ಪಗಳಿಂದ ಸ್ವಾಗತಿಸುತ್ತಿದ್ದೆ. ಹಿಂದೆ ಹಾಡಿದ ಹಾಡುಗಳ ನೆರಳು ಇದೆ ಮತ್ತು ಹಿರಿಯ ಪೂಜ್ಯ ವ್ಯಕ್ತಿಗಳ ವೈಭವ ನನ್ನ ಹಾಡಿನಲ್ಲಿದೆ ಎಂದು ಸಂಶಯ ಪಡಬೇಡ. ಆ ಸಂಶಯ ಇದ್ದರೆ ಇದು ನನ್ನ ವಿವರಣೆ.

ನೀನು ನನ್ನನ್ನು ಉದಾರ ಹೃದಯದ ನಿಸ್ವಾರ್ಥಿ ಘನತೆವೆತ್ತ ಸಂತ, ಅಥವಾ ಅತಿ ಮಾನವ ಎಂದೆಲ್ಲಾ ಕರೆಯಬಹುದು. ನನ್ನ ಸ್ಥಾನ ಅದಕ್ಕಿಂತಲೂ ಎತ್ತರವಾಗಿ ಓ ನನ್ನ ಪ್ರಿಯ ಘನವೆತ್ತ ಗಾಯಕನೇ! ಇದು ನನ್ನ ಹೃದಯದ ಸಾವಿರದಲ್ಲೊಂದು ಭಾಗದ ಪ್ರತಿ ಬಿಂಬವೂ ಅಲ್ಲ ಎಂಬುದನ್ನು ಹೇಗೆ ವಿವರಿಸಲಿ?

ಓ ನನ್ನ ಶ್ರೇಷ್ಠ ಕವಿಯೇ! ಅತ್ಯುತ್ತಮ ಹಾಗು ಅದ್ಭುತವಾದ ಶ್ರುತಿ ಇರುವ ಸಂಗೀತವನ್ನು ಹೊರಹೊಮ್ಮಿಸಿದ ಹೃದಯದ ಅಂತಸ್ತನ್ನು ನಾನು ಯೋಚಿಸುತ್ತಿದ್ದೇನೆ.

ಓ ನನ್ನ ಪ್ರಿಯ ಸಂಗೀತಗಾರನೇ! ಅದು ನನ್ನ ಸಂಗೀತದ ವಸ್ತು ಆಗಲಾರದು. ಅದನ್ನು ಎಂದೆಂದಿಗೂ ಲಯ ತಾಳಗಳಲ್ಲಿ ಪ್ರದರ್ಶಿಸಲು ಸಾಧ್ಯವಿಲ್ಲ.

* * * *

೨೬. ಮನಮೋಹಕ ಮದುಮಗ

ಇಂದಿನವರೆಗೆ ನಾನು ನನ್ನ ಹೃದಯವನ್ನು ತೆರೆದಿಟ್ಟಿದ್ದೆ. ಗಲಿಬಿಲಿಗೊಂಡು ಪೊದೆಯಂತಿದ್ದ ನನ್ನ ಇಂದ್ರಿಯ ಜ್ಞಾನದಲ್ಲಿ ನಾನು ಯೋಗ್ಯನಾದ ವರನನ್ನು ಹುಡುಕಿದೆ. ಆದರೆ ನನಗ್ಯಾರೂ ದೊರೆಯಲಿಲ್ಲ.

ಅಸಂಖ್ಯಾತ ಪ್ರಾಪಂಚಿಕ ಅನುಭೋಗದ ಮಧ್ಯದಲ್ಲೂ ನಾನು ನನ್ನ ಅತ್ಯಂತ ಹೆಚ್ಚಿನ ಪ್ರಿಯನಿಗಾಗಿ ಹುಡುಕುತ್ತಾ ಹೋದುದು ವ್ಯರ್ಥವಾಯಿತು.

ಬಹುಬೆಲೆಯ ಭೋಗ ವಸ್ತುಗಳ ನಿಧಿಗಳಲ್ಲಿ ಶೋಧಿಸಿದರೂ ಅನುರೂಪ ಅಕ್ಕರೆಯ ವ್ಯಕ್ತಿ ಸಿಗಲಿಲ್ಲ.

ಖ್ಯಾತಿ ಪ್ರಶಂಸೆಯ ಬಾಗಿಲಲ್ಲಿ ನಿಂತಿದ್ದರೂ ನನಗೆ ಹತಾಶೆ ತಪ್ಪಲಿಲ್ಲ. ಕಟ್ಟಕಡೆಗೆ ಆತನನ್ನು ಪತ್ತೆಹಚ್ಚಿದೆ. ಆತನ ಅಣುಗಳಲ್ಲಿ ಇಡಿ ವಿಶ್ವವೇ ಚಲಿಸುತ್ತಿದೆ. ಆ ಸೊಬಗಿನಲ್ಲಿ ನಾನು ಅಕ್ಕರೆಯ ಮನಮೋಹಕ ಪ್ರೀತಿಯ ಮೋಡಿಗಾರನಕಂಡೆ.

ಇಲ್ಲಿಯವರೆಗೆ ನನ್ನ ಮನಸ್ಸು ನಿರಾಂತಕವಾಗಿತ್ತು. ಆದರೆ ಈಗ ನನಗೆ ಅದರ ಅನುರೂಪಿ ಪ್ರೇಮದ ವ್ಯಕ್ತಿ ದೊರೆತಿದ್ದಾನೆ.

ನಿನ್ನ ಪ್ರಿಯಕರನ ಸಂತೋಷಕ್ಕಾಗಿ ನೀನು ಮುಂಜಾನೆಯ ಮಧುರವಾದ ಹೊಳಪಿನಂತೆ ನವನವೀನವಾಗಿ ಕಾಣುವಂತಹ ಉಡುಪನ್ನು ಧರಿಸು.

ನೀನು ಎಲ್ಲಾ ಸೊಬಗನ್ನು ಧರಿಸಿ ಬೆಳದಿಂಗಳ ರಾತ್ರಿಯಂತೆ ನಯನ ಮನೋಹರವಾಗಿ ಆಕರ್ಷಕವಾಗಿರಬೇಕು. ಆಗ ನಿನ್ನ ಪ್ರಿಯತಮ ಬಹಳ ಸಂತೋಷಗೊಂಡು ಸುಲಭವಾಗಿ ತನ್ನ ಹೃದಯವನ್ನು ನಿನಗರ್ಪಿಸುವೆನು.

ಹೇಗೆ ಅಸಂಖ್ಯಾತ ಪುಷ್ಪಗಳು ವಸಂತ ಋತುವನ್ನು ಸುಂದರಗೊಳಿಸುತ್ತವೆಯೋ, ಹಾಗೆ ದೇಹ ಮತ್ತು ಆತ್ಮವನ್ನು ಅಂತಹ ಹಲವಾರು ವಸಂತ ಋತುಗಳಿಂದ ಸುಂದರಗೊಳಿಸು. ನಿನ್ನ ನಲ್ಲನನ್ನು ಮರುಳುಗೊಳಿಸಲು ಸರೋವರದಲ್ಲಿರುವ ಸುಂದರ ಕಮಲದಂತೆ ನೀನು ಅವನ ಪ್ರೀತಿಯ ಸರೋವರದಲ್ಲಿ ಮುಳುಗಿ ಆತನನ್ನು ಹೊರತು ಇನ್ನೆಲ್ಲವನ್ನು ಮರೆತುಬಿಡು.

ಓ ನನ್ನ ಹರ್ಷಿತ ಮನವೆ! ಎಂದೆಂದಿಗೂ ಬೇರ್ಪಡದ ಆಲಿಂಗನದಲ್ಲಿ ಆತ ನಿನ್ನನ್ನು ಬಂಧಿಸುವಂತೆ ನೀನು ಆತ ದೇಗುಲದ ದ್ವಾರವನ್ನು ಪ್ರವೇಶಿಸು.

* * * *

೨೭. ಅಪರಿಪೂರ್ಣತೆಗೆ ಕಾರಣ

ತೀಕ್ಷ್ಣವಾದ ತಪಸ್ಸು ಮತ್ತು ಪಶ್ಚಾತ್ತಾಪದಿಂದ ದಣಿವಾಗಿದ್ದರೂ, ನೀನು ಆಧ್ಯಾತ್ಮಿಕ ತೀರ್ಥಯಾತ್ರೆಯ ಗುರಿಯನ್ನು ತಲುಪಿಲ್ಲ. ಇದಕ್ಕೆ ಕಾರಣವೇನು?

ನಿನ್ನನ್ನು ಗಂಗಾತೀರದ ಹಿಮಾಲಯದ ಗವಿಯಲ್ಲಿ ಬಂಧಿಯಾಗಿಟ್ಟುಕೊಂಡು, ಹಲವಾರು ವರ್ಷಗಳ ಕಾಲ ಪ್ರಜ್ಞಾಪೂರ್ವಕ ಸ್ಥಿತಿಯಲ್ಲಿದ್ದು ಆಂತರಿಕ ಶಾಂತಿಯ ನೆಲೆಯನ್ನು ಪಡೆಯದಿರಲು ಕಾರಣವೇನು?

ಸಂತರ ಸಹವಾಸದಲ್ಲಿದ್ದು ಪ್ರತಿ ಯಾತ್ರಾ ಸ್ಥಳಗಳನ್ನು ಸಂದರ್ಶಿಸಿದೆ. ಆದರೂ ಆತ್ಮದ ಮಂಗಳಕಾರಕ ಮಧುರ ನಿನಾದವು ಕೇಳಿಬರಲಿಲ್ಲ. ಇದಕ್ಕೆ ಕಾರಣವೇನು?

ಜಪಮಾಲೆಯ ಮಣಿಗಳನ್ನು ಲೆಕ್ಕ ಮಾಡಿ ಸೋತಿರಬಹುದು. ಸ್ತೋತ್ರಗಳನ್ನು ಮಂತ್ರಗಳನ್ನು ದೇವತಾ ಪ್ರಾರ್ಥನೆಗಳನ್ನು ಮಾಡಿ ದಣಿದಿದ್ದರೂ, ಮೋಕ್ಷಸಾಗರದ ದಡ ಕಾಣಲಿಲ್ಲ. ಇದಕ್ಕೆ ಕಾರಣವೇನು?

ಇದಕ್ಕೆ ಮುಖ್ಯ ಕಾರಣ ಇದು. ಸಂಪೂರ್ಣವಾಗಿ ನಿನ್ನನ್ನು ನೀನು ಗುರುಗಳ ಚರಣಗಳಿಗೆ ಅರ್ಪಿಸಿಕೊಳ್ಳಲಿಲ್ಲ. ಆತನೇ ನಿಜವಾದ ಗುರು, ಬೋಧಕ, ನಿಜವಾದ ರಕ್ಷಕ. ಆತನ ಪಾದದಡಿಯಲ್ಲಿದೆ ಸಕಲ ಪವಿತ್ರ ಶಾಸ್ತ್ರಗಳು, ವೇದಗಳು, ಧರ್ಮ ಗ್ರಂಥಗಳು ಮತ್ತು ಜಗತ್ತಿನ ಎಲ್ಲ ಸ್ಥಳಗಳು. ಆತನ ಮಹಿಮೆಯುಳ್ಳ ದಿವ್ಯ ನೋಟ ಮೋಕ್ಷ ದೊರೆಯಲು ಸಾಕು. ಇದೇ ನಿಜವಾದ ಕಾರಣ.

* * * *

೨೮. ದೇವಿಯ ಚೆಲುವು

ಆಕೆಯ ಕಣ್ಣುಗಳು ಅತ್ಯಂತ ಮನಮೋಹಕ, ಚಂದ್ರನಿಗಿಂತಲೂ ಹೆಚ್ಚು ಮಧುಸ್ವಾದಕ, ಮಮತೆಯನ್ನು ಹೀರಿದಂತೆ. ಆಕೆಯ ಮುಖ ವರ್ಚಸ್ಸಿನಿಂದ ಕೂಡಿದ ಮೃಚ್ಛಕುಂಭದಂತೆ. ಸುತ್ತಲೂ ಇರುವ ಮಣ್ಣು ಸರೋವರದಂತೆ ಮತ್ತು ಆಕೆ ಅದರಲ್ಲಿ ಕಮಲ ಹೂವಿನಂತೆ ಸುಂದರ, ಸುಗಂಧಿತ ಮತ್ತು ಮಂದಸ್ಮಿತ. ಭಾವ ಮತ್ತು ಭಕ್ತಿ, ಅಂದ ಮತ್ತು ಪವಿತ್ರತೆಗಳು, ಗಂಗಾ ಮತ್ತು ಯಮುನೆಯರ ಜಲದಂತೆ ಆಕೆಯ ಅಂಗಗಳಿಂದ ಹರಿಯುತ್ತಿವೆ.

ಈ ವಿಶ್ವದ ಕವಿಶ್ರೇಷ್ಠ ಕವಿ ಬರೆದ ಮೊದಲ ಕವಿತೆಯಂತೆ ಆಕೆ ನವನವೀನ ಮತ್ತು ಹರ್ಷದಾಯಕ.

ಆಕೆಯ ಪಾದಗಳನ್ನು ಸ್ಪರ್ಶಿಸುತ್ತಿತ್ತು ಅವಳ ಕೇಶರಾಶಿ. ಆಕೆಯ ತುಟಿಗಳನ್ನು ಅಲಂಕರಿಸಿತ್ತು. ಮೃದುವಾದ ನಸುನಗೆ ಆಕೆ ಧರಿಸಿದ ಶುಭ್ರವಾದ ಆಕರ್ಷಕ ಉಡುಪು– ಇದರಿಂದಾಗಿ ಈ ಪೃಥ್ವಿಯು ನಿಜವಾಗಿ ಸಮೃದ್ಧಿಗೊಂಡಿದೆ.

ಆಕೆ ಮಾಲತಿ ಲತಾಕುಂಜದಲ್ಲಿ ವಿಶ್ರಮಿಸುತ್ತಾಳೆ. ಕುಸುಮಗಳೇ ತಯಾರಿಸಿದ ಪಲ್ಲಂಗ. ಮರುತನು ಎಡೆಬಿಡದೆ ಆಕೆಗೆ ಗಾಳಿ ಬೀಸುತ್ತಿರುವನು.

ಸೂರ್ಯೋದಯದ ಹೊನ್ನ ವೇಳೆಯಲ್ಲಿ ನಮ್ಮ ಕಣ್ಣುಗಳು ಸಂಧಿಸಿದುವು. ಆಕೆಯ ನೇತ್ರಗಳು ಏಕೆ ಭಾವೋದ್ರೇಕದಿಂದ ತುಂಬಿ ತುಳುಕುತ್ತಾ ಪ್ರೀತಿಯ ಕಿರಣಗಳನ್ನು ಚೆಲ್ಲುತ್ತಿತ್ತು ಎಂದು ನನಗೆ ತಿಳಿಯಲು ಸಾಧ್ಯವಾಗಲಿಲ್ಲ.

ಆ ಕೋಮಲ ಸೊಬಗಿನ ನಯನ ದ್ವಯಗಳು ನನ್ನನ್ನು ಕೇಳಿದವು. "ನನ್ನನ್ನು ವಿವಾಹವಾಗುವೆಯಾ? ನಾನು ಪ್ರೀತಿಯ ಪ್ರವಾದಿ, ಮಾನವ ಮತ್ತು ಮಾನವನ ಮಧ್ಯದ ಪ್ರೀತಿ, ಮಾನವ ಮತ್ತು ಪ್ರಕೃತಿ, ಮಾನವ ಮತ್ತು ಒಡೆಯ. ಎಲ್ಲ ರೀತಿಯ ಪ್ರೀತಿಯ ತಾಯಿಯೂ ನಾನೇ ಆಗಿದ್ದೇನೆ. ನಿನ್ನ ವಿಶಾಲ ಉದಾರ ಹೃದಯದ ಒಂದು ಮೂಲೆಯನ್ನು ನನಗಾಗಿ ಕೊಡುವೆಯಾ?"

"ಆದರೆ ನನ್ನ ಪುಟ್ಟ ಹೃದಯದಲ್ಲಿ ಕುಳಿತು ನೀನೇನು ಸಾಧಿಸಲು ಇಚ್ಛಿಸುತ್ತಿರುವೆ?"

"ಅದಕ್ಕಾಗಿ ನೀನು ಚಿಂತಿಸಬೇಡ. ನೀನೇ ನನಗೆ ಸರಿಯಾದ ವ್ಯಕ್ತಿ. ನಿನ್ನ ವಿನೀತ ಹೃದಯದಲ್ಲಿ ನಾನಿದ್ದರೆ, ನನ್ನ ಜೀವನದ ಧ್ಯೇಯ ನೆರವೇರುವುದು. ನಿನಗೆ ಒಪ್ಪಿಗೆ ಇದೆಯೇ?

ಆಕಾಶದಲ್ಲಿ ಕಾಣುವ ಕಾಮನಬಿಲ್ಲಿನಂತೆ ನನ್ನ ತುಟಿಯ ಮೇಲೆ ಮಂದಹಾಸ ಮೂಡಿತು. ಆಕೆಯ ಸೌಂದರ್ಯ ನಿಶ್ಚಯವಾಗಿಯೂ ಅಸದೃಶ. ಆಕೆಯ ಮಾತುಗಳು ಅದ್ವಿತೀಯ, ಅದ್ಭುತ ಮತ್ತು ಮಧುರ, ಮೋಹಕ. "ಆಮೇಲೆ ನನಗೇನು ದೊರೆಯುತ್ತದೆ? ನಾನೇನು ಸಾಧಿಸುವೆ" ನಾನು ಮಾತು ಮುಂದುವರಿಸಿ ಕೇಳಿದೆ.

"ಶಾಂತಿ, ಸಂತೋಷ ಮತ್ತು ಅಪರಿಮಿತ ನೋವು" ಉತ್ತರ ಬಂತು.

"ಆ ನೋವು, ಅಶಾಂತಿ, ತಳಮಳ ಅಥವಾ ಅಗಲಿಕೆಯ ತೀವ್ರ ವೇದನೆಯು ನಿನ್ನನ್ನು ವಿಮೋಚನೆಯ ಪುಣ್ಯದ ದೇಗುಲದತ್ತ ಕೊಂಡೊಯ್ಯುವುದು ಮತ್ತು ಮಾನವರಿಗೆ ಸಹಾಯವಾಗುವಂತಹ ಅಗಣಿತ ಕೆಲಸ ಕಾರ್ಯಗಳನ್ನು ನಿನ್ನಿಂದ ಮಾಡಿಸುವುದು."

"ಸರಿ ನನ್ನ ದೇವತೆ, ನಾನು ನಿನ್ನನ್ನು ನನ್ನ ಹೃದಯದಲ್ಲಿ ಪ್ರತಿಷ್ಠಾಪಿಸುತ್ತೇನೆ. ನನ್ನ ಕವನದಲ್ಲಿ ನಿನ್ನ ಕೀರ್ತಿಯನ್ನು ಹೊಗಳುತ್ತೇನೆ. ನಮ್ಮ ಈಗಿನ ಮಹತ್ವದ ಭೇಟಿಯ ನೆನಪು ಸದಾ ಹಸಿರಾಗಿರುವಂತೆ ಎಂದಿಗೂ ಬಾಡಿ ಹೋಗದ ಸುಗಂಧ ಭರಿತ ಕವನಗಳ ಮಾಲೆಯನ್ನು ನಾನು ರಚಿಸುತ್ತೇನೆ."

ತೃಪ್ತಿಯ ನಗುಬೀರಿ ಆಕೆ ಅಲ್ಲಿಂದ ಮಾಯವಾದಳು. "ನೀನೆಂಬ ಸಣ್ಣತನದಿಂದ ನನ್ನ ಉಸಿರು ಕಟ್ಟಿಸಬೇಡ. ನೀನೆಂಬ ಸೊಬಗಿನ ಧಾರೆಯಿಂದ ನಾನು ಉಲ್ಲಾಸಕರ ಹೊಸತನ ಪಡೆದೆ. ನಿನ್ನ ಸುಂದರ ಜೀವನದಲ್ಲಿ ನಾನು ನನ್ನನ್ನು ಅನೇಕ ಬಾರಿ ಸ್ಪಷ್ಟವಾಗಿ ತೋರಿಸಿಕೊಳ್ಳುವೆ" ಎಂಬ ಅವಳ ಕೊನೆಯ ಮಾತುಗಳಾಗಿದ್ದವು.

* * * *

೨೯. ಕವಿಯ ಸ್ಥಿತಿ

ನನ್ನ ಹೃದಯ ನಿನಗಾಗಿ ಒಡೆದು ಛಿದ್ರಛಿದ್ರವಾಗಿರುವುದು. ಆಕಾಶದಲ್ಲಿ ಮಿನುಗುತ್ತಿರುವ ತಾರೆಗಳಿಗೆ ಖಂಡಿತ ಗೊತ್ತಿದೆ ಎನ್ನುವುದರಲ್ಲಿ ಪ್ರತಿವಾದವಿಲ್ಲ. ಹಲವಾರು ಅಶ್ರು ಪ್ರವಾಹಗಳು ಆಕೆಯ ಆತ್ಮವನ್ನು ಜತೆಜತೆಯಲ್ಲಿ ತೊಳೆಯುತ್ತಿತ್ತು ಎಂಬುವುದು ನಿಶ್ಶಬ್ಧವಾದ ಧ್ಯಾನದಲ್ಲಿರುವ ಭೂಮಿಗೂ ತಿಳಿದಿತ್ತು.

ಶ್ರದ್ಧಾ ಭಕ್ತಿ ತುಂಬಿಕೊಂಡ ಪ್ರೀತಿಯು ಪ್ರಕಾಶಮಾನವಾಗಿ ಹೊರ ಹೊಮ್ಮುತ್ತಿರುವ ನನ್ನ ಆತ್ಮ ಏಕಾಂಗಿಯಾಗಿದೆ. ಮತ್ತು ಆ ವಿಶಾಲ ಜಗತ್ತಿನಲ್ಲಿ ನಾನು ಅದರೊಡನೆ ಸಂಚರಿಸಬೇಕಾಗಿದೆ. ನನ್ನ ಹಾಡುಗಳೆಲ್ಲ ಅದರ ಪ್ರತಿಧ್ವನಿಯಲ್ಲಿದೆ. ಮತ್ತೇನೂ ಅಲ್ಲ. ಈ ಪಶ್ಚಾತ್ತಾಪ, ದೇಹದಂಡನೆಯ ಎಳೆ ಎಳೆಯು ನನ್ನ ಆತ್ಮವು ವ್ಯಾಕುಲತೆ ಮತ್ತು ಕಾರುಣ್ಯದಿಂದ ತುಂಬಿದ್ದರೂ ಹೇಗೆ ಉತ್ಸಾಹದಿಂದಿದೆ ಎಂಬುದನ್ನು ತಿಳಿದುಕೊಂಡಿದೆ.

ಇನ್ನೊಬ್ಬರನ್ನೇ ಸುಡುವುದರಿಂದ ಕೆಲವರಿಗೆ ಸಂತೋಷವಾಗುವುದಾದರೆ ಮತ್ತೊಬ್ಬರ ವಿಷದಿಂದ ಅಮೃತ ಪಡೆಯುವುದಾದರೆ, ಮಗದೊಬ್ಬರ ಕಣ್ಣೀರಿನಿಂದ ಹರ್ಷ ಸಿಗುವುದಾದರೆ, ಇದೆಲ್ಲ ಇರಲಿ, ಆತನ ವಿಧಿ ಅಗಮ್ಯ. ಆದರೆ ಪ್ರೀತಿಯ ಅಮಲೇರಿದ ದೇವರೇ ನನ್ನ ಸ್ವರ್ಗೀಯ ಸಂಗೀತವನ್ನು ಮರೆಯದಿರು. ಅದಕ್ಕೆ ಹೃದಯವನ್ನು ಅಮೃತದಂತೆ ಮಾಡುವ ಶಕ್ತಿ ಇದೆ. ವ್ಯಾಕುಲತೆಯ ಪ್ರಶಾಂತ ಹೊಳೆಯು ನನ್ನ ಸ್ಥಿರವಾದ ಸುಖಾನುಭವದಲ್ಲಿ ಮೌನವಾಗಿ ಹಾಡುತ್ತಿದೆ.

* * * *

೩೦. ಪ್ರೀತಿಯ ಧನ್ಯತೆ

ಆಕೆಗೆ ತನ್ನ ಸೌಂದರ್ಯದ ಬಗ್ಗೆ ನೈಜ ಹೆಮ್ಮೆಯಿದೆ. ಅದನ್ನೇ ಆಕೆ ಜನರಲ್ಲಿ ಘೋಷಿಸಿದಳು. ನಿನ್ನ ಪದತಳದಲ್ಲಿ ಆಕೆ ದಾಸ್ಯವನ್ನು ಎಂದೂ ಸ್ವೀಕರಿಸಲಾರಳು. ಆ ಕಣ್ಣುಗಳು ಆಕೆಯ ಸೌಂದರ್ಯವನ್ನು ತನ್ನಲ್ಲಿ ತುಂಬಿಕೊಳ್ಳಲು ಕಾತರಗೊಂಡಿವೆ. ಆದರೆ ಸೌಂದರ್ಯ ಮತ್ತು ಅಹಂಕಾರದ ಆಕೆಯ ಹೃದಯ ಕಲ್ಲಿನಂತೆ ಕಠಿಣವಾಗಿತ್ತು. ನಿನ್ನ ಮೇಲೆ ಒಂದು ಕುಡಿನೋಟ ಬೀರಲು ಆಕೆಗೆ ಸಮಯವಿಲ್ಲ.

ನಿನ್ನ ಚಹರೆ ಮತ್ತು ತುಟಿಗಳು ತಾವರೆಯ ದಳಗಳನ್ನು ಹೋಲುತ್ತವೆ. ಅವು ತುಂಬ ಭಾವೋದ್ರೇಕದಿಂದ ಆಕೆಯ ತುಟಿಗಳಲ್ಲಿ ಐಕ್ಯವಾಗಿ ದುಂಬಿಯಂತೆ ಅದರ ಅಮೃತವನ್ನು ಹೀರಲು ಹಾತೊರೆಯುತ್ತವೆ. ಆದರೆ ಆ ಸುಂದರಿಯ ಹೃದಯ ಕಬ್ಬಿಣಕ್ಕಿಂತಲೂ ಕಠಿಣ. ಹಂಬಲಿಸುತ್ತಿರುವ ನಿನ್ನ ಮುಖದತ್ತ ದೃಷ್ಟಿ ಹಾಯಿಸಲು ಆಕೆಯ ಸಮಯ ಸಿಗುವುದೇ ಕಷ್ಟ. ಆಕೆಗೆ ಸ್ವಲ್ಪವೂ ಬಿಡುವು ಇಲ್ಲ.

ಮಹಾಸಾಗರದಂತಿರುವ ನಿನ್ನ ಹೃದಯ ಎಡೆಬಿಡದೆ ಸುರಿದ ಕಣ್ಣೀರು ಆಕೆಯ ಹೃದಯವನ್ನು ಮುಳುಗಿಸಿತು. ಆದರೆ ಆ ಹಟಮಾರಿ ಹೆಂಗಸಿನ ಹೃದಯ ಕಲ್ಲಿನಿಂದ ಮಾಡಲ್ಪಟ್ಟಿದೆ. ಅದು ನಿನ್ನ ಹೃದಯ ತುಡಿತಕ್ಕೂ ಅಥವಾ ದುಃಖಕ್ಕೂ ಕರಗುವುದೂ ಇಲ್ಲ. ಆತಂಕವೂ ಇಲ್ಲ.

ಅವುಗಳ ಘೋಷಣೆಯ ಅಭಿಪ್ರಾಯವು ಇದೇ ಆಗಿದೆ. ನಾನು ಅಸಹಾಯಕನಾದರೂ ಸಂಪೂರ್ಣವಾಗಿ ನನ್ನೆಲ್ಲವನ್ನೂ ಆಕೆಗೆ ಅರ್ಪಿಸಿ ಶರಣಾಗಿದ್ದೇನೆ. ಆಕೆಯ ಹೃದಯ ತಂತಿ ಎಂದೆಂದಿಗೂ ಝೇಂಕಾರ ಮಾಡದಿರಬಹುದು. ನನ್ನ ಪ್ರೀತಿಯ ತಂತಿ ಮಾತ್ರ ಎಂದಿಗೂ ತುಂಡಾಗದು. ಆಕೆಯ ಪ್ರೀತಿ ಸಾಗರದ ಒಂದು ಹನಿ, ಮಳೆ ಬರಿಸದು. ನನ್ನ ಕಣ್ಣೀರಧಾರೆ ಮಾತ್ರ ಎಂದಿಗೂ ನಿಲ್ಲದು. ಅದು ನಿರಂತರ.

ಅವಳ ದೈವಿಕ ಪ್ರೀತಿಯ ರೂಪದಲ್ಲಿ ಅವಳನ್ನು ಪಡೆಯುವುದೇ ನನ್ನ ಆತ್ಮದ ಪರಮಾನಂದ.

* * * *

೩೧. ನನ್ನ ವ್ಯಕ್ತಿತ್ವಾರೋಪಣೆ

ಮಳೆಗಾಲದ ಒಂದು ಸುಂದರ ರಾತ್ರಿ. ಮಳೆ ನಿಂತಿತ್ತು. ಯಾರದೋ ದಾರಿಯನ್ನು, ನಕ್ಷತ್ರಗಳು ಹೊಳೆಯುವ ಹಣತೆಗಳಂತೆ ಬೆಳಗುತ್ತಿತ್ತು. ಮತ್ತು ನಾಚಿಕೊಂಡು ಸ್ತ್ರೀಯೊಬ್ಬಳು ತನ್ನ ಮುಖದ ಮೇಲಿನ ಪರದೆಯನ್ನು ಸರಿಸಿ ತನ್ನ ಸುಂದರ ಮುಖವನ್ನು ತೋರಿಸುವಂತೆ, ದೂರದ ಪರ್ವತದಾಚೆಯಿಂದ ಚಂದ್ರನು ಮೋಡಗಳ ಪರದೆಯನ್ನು ಸರಿಸಿ ಹೊರಬಂದು ಹೊಳೆಯಲಾರಂಭಿಸಿದನು.

ಅರಣ್ಯವನ್ನು ಮೌನ ಆವರಿಸಿತು. ಸಣ್ಣ ತೊರೆಯೊಂದು ಮಾತ್ರ ಭಕ್ತಿಯಿಂದ ಸಂಪ್ರೋಕ್ಷಣೆ ಮಾಡುತ್ತ ಸುಮಧುರ ನಾದದೊಡನೆ ಹರಿಯುತ್ತಿತ್ತು. ಪರ್ವತ ಶ್ರೇಣಿಯಲ್ಲಿ ಅಲೆದಾಡುತ್ತಿದ್ದ ಮಿಂಚು ಹುಳಗಳು ವನ ದೇವತೆಯೊಡನೆ ಹಾಡುತ್ತಿದ್ದವು. ಇದೆಲ್ಲ ಹೊರನೋಟಕ್ಕೆ ಕಾಣುವ ದೃಶ್ಯಗಳು, ನನ್ನ ಕುಟೀರದೊಳಗೆ ಧಾರಾಳವಾಗಿ ಶಾಂತಿ ನೆಲೆಸಿತ್ತು. ನನ್ನ ಕೋಣೆಯ ಏಕಾಂತದಲ್ಲಿ ನಿಶೆಯು ತನ್ನ ಪೂರ್ಣ ಕತ್ತಲಿನೊಡನೆ ಆಟ ಆಡಲು ನೆಲೆಸಿದ್ದಳು.

ದೂರದಲ್ಲಿರುವ ಕೋಗಿಲೆಯ ಕೂಗು ಕೇಳಿ ನನ್ನ ಹೃದಯ ನಡುಗಿತು. ಓ, ಅದೊಂದು ಕತ್ತಲಿನ ರಾತ್ರಿಯ ಏಕಾಂತತೆ. ಪ್ರೇಮಿಗಳಿಗೆ ವರ ಇದ್ದಂತೆ, ಅದೆಲ್ಲ ಯಾವಾಗ ಆಯಿತೆಂದು ನಾನರಿಯೆ. ಆ ಪ್ರವಾಹದಲ್ಲಿ ನನ್ನ ಪ್ರಜ್ಞೆ ಕಳೆದು ಹೋಗಿತ್ತು.

ಇದ್ದಕ್ಕಿದ್ದಂತೆ ಗುಡುಗಿನ ಸದ್ದು ಕೇಳಿಸಿತು. ನನ್ನ ಹೃದಯ ನಡುಗಲಾರಂಭಿಸಿತು. ಸ್ವರ್ಗದ ಯಾವುದೋ ಅಪ್ಸರೆಯಂತೆ ಮಿಂಚು ಯಾರದೋ ಹಿಂದೆ ಸರಿಯಿತು. ಹೊರಗೆ ಬಾಗಿಲಿಗೆ ಬಂದಾಗ ನಾನು ಬಾಹ್ಯ ಸೌಂದರ್ಯವನ್ನು ಕಂಡೆ. ನೋಡು! ಆಕೆ ಇದ್ದಕ್ಕಿದ್ದಂತೆ ಬಂದಳು. ಮತ್ತು ಬಹಳ ಪ್ರೀತಿಯಿಂದ ತನ್ನತ್ತ ನೋಡಿದಳು. ಅಮೃತದ ಚಿಲುಮೆಯಿಂದ ಆಕೆಯ ಕಣ್ಣುಗಳು ತುಂಬಿತ್ತು. ಸೊಗಸಾದ ಬಟ್ಟೆಯಿಂದ ಆಕೆಯ ದೇಹ ಅಲಂಕರಿಸಲ್ಪಟ್ಟಿತ್ತು. ಆಕೆಯ ಕೈಯಲ್ಲಿ ಹೊಸ ಹೂಗಳ ಹಾರ ಇತ್ತು. ಆಕೆ ವರದೇವತೆ ಆಗಿರಬಹುದೇ?

"ನಾನು ಪ್ರೀತಿ ದೇವತೆ. ನನ್ನ ಪ್ರಿಯತಮನನ್ನು ಕಾಣಲು ಇಚ್ಛಿಸುತ್ತೇನೆ" ಎಂದು ಆಕೆ ತನ್ನ ಆಕರ್ಷಣೆಯ ಸುಮಧುರ ಕಂಠದಿಂದ ಮುಗುಳು ನಗೆಯೊಡನೆ ಹೇಳಿ ಮಾತು ಮುಂದುವರೆಸುತ್ತ" ಎಂದಿನಂತೆ ವಿಹರಿಸುತ್ತಾ ಬಂದೆ. ಇಂದು

ನಿನ್ನ ದೇಗುಲದ ಬಾಗಿಲಿಗೆ ಬಂದು ತಲುಪಿದ್ದೇನೆ. "ನನಗಾಗಿ ನೀನು ಬಂದೆಯಾ?" ಆಕೆಯ ಸೌಂದರ್ಯವನ್ನು ಸೇವಿಸಿದ ನನ್ನ ಕಣ್ಣುಗಳು ಹೊಳೆಯತೊಡಗಿದವು. ತಕ್ಷಣ ಆಕೆ ಉತ್ತರಿಸಿದಳು. "ಹೌದು, ಎಲ್ಲವನ್ನು ನನಗಾಗಿ ತೊರೆದು ಬಂದವನ, ನನ್ನ ನೆನಪಿನಲ್ಲೆ ಬದುಕುವವನನ್ನು, ನನಗಾಗಿ ಬದುಕುತ್ತಿರುವ ನನ್ನ ಬಾಗಿಲಿಗೆ ಬಾರದಿರಲು ನನ್ನಿಂದ ಸಾಧ್ಯವಾಗಲಿಲ್ಲ. ಇಂದಿನವರೆಗೆ ನಾನು ಏಕಾಂಗಿ ಮತ್ತು ದಿಕ್ಕಿಲ್ಲದಂತಿದ್ದೆ."

ಆಕೆ ನನ್ನ ಬಳಿ ಹಾಸಿಗೆಯ ಮೇಲೆ ಕುಳಿತಳು. ಕಮಲ ದಳದಂತೆ ಕೋಮಲವಾದ ಆಕೆಯ ಬೆರಳುಗಳಿಂದ ನನ್ನ ಬೆರಳುಗಳನ್ನು ಹೆಣೆಯುತ್ತ "ಇದು ನನ್ನ ಪ್ರೀತಿಗೆ ದೊರೆತ ಅನುಗ್ರಹ ಮತ್ತು ನನಗೆ ಚಿತ್ತೈಕಾಗ್ರತೆ. ಹೇಗೋ ನನ್ನ ಹೃದಯದ ಕೃತಜ್ಞತೆಯನ್ನು ಹೇಳಲು ನನ್ನಲ್ಲಿ ಪದಗಳಿಲ್ಲ. ಆದರೆ ಇದು ಒಂದು ಅದರ ಸಣ್ಣ ಪ್ರತಿಬಿಂಬ. ಗುಣ ಗ್ರಹಣದ ಪ್ರತಿಧ್ವನಿ.

ಒಂದೇ ಕ್ಷಣದಲ್ಲಿ ಆಕೆ ನನಗೆ ಹಾರವನ್ನು ಹಾಕಿದಳು. ಮತ್ತು ಪಾದಧೂಳನ್ನು ಆಕೆಯ ತಲೆಗೆ ಹಚ್ಚಿ ಹೀಗೆಂದಳು. "ಒಡೆಯ! ಅನಾದಿಕಾಲದಿಂದಲೂ ನಿನ್ನ ಸೇವಕಿಯಾಗಿದ್ದ ನಾನು ಮುಂದೆ ಎಂದೆಂದಿಗೂ ಹೀಗೆಯೇ ಇರುವೆನೆಂಬುದನ್ನು ನಂಬು. ನನ್ನ ದೇಹ ಮನಸ್ಸುಗಳೆರಡು ನಿನ್ನವೆ. ಇಂದಿನಿಂದ ನಾನು ನಿನ್ನ ಸೇವಕಿ."

ಆಮೇಲೆ ನನ್ನನ್ನಪ್ಪಿಕೊಂಡು ಆಕೆ ಹೇಳಿದಳು: "ನಾನು ನನ್ನನ್ನು ನಿನಗೆ ಅರ್ಪಿಸಿದ್ದೇನೆ. ನಿನ್ನ ಪ್ರಜ್ಞೆಯ ಒಳಗೆ ಸುಲಭವಾಗಿ ಪ್ರವೇಶಿಸಿದ್ದೇನೆ" ಎಂದಳು.

"ದಯಮಾಡಿ ನಿನ್ನ ಹೆಸರನ್ನು ಹೇಳು" ಎಂದು ನಾನು ತಕ್ಷಣ ಕೇಳಿದೆ.

ಗುಲಾಬಿವರ್ಣದ ಕೆನ್ನೆಯ ಮೇಲೆ ನಲಿದಾಡುತ್ತಿದ್ದ ಆಕೆಯ ಕೂದಲನ್ನು ಸರಿಪಡಿಸುತ್ತ ಆಕೆ ಹೇಳಿದಳು: "ಓ ನನ್ನ ಶ್ರೇಷ್ಠ ಕವಿವರ್ಯನೆ! ನಿನಗಿನ್ನೂ ನಾನ್ಯಾರೆಂಬ ಅರಿವಿಲ್ಲ. ನಾನು ನಿನ್ನಿಂದಲೇ ಹುಟ್ಟಿ ಬಂದವಳು.

ನಿಜವಾಗಿಯೂ ನನ್ನ ಜೀವನದಲ್ಲಿ ಆ ಮಳೆಗಾಲದ ಮೊದಲ ತಿಂಗಳ ರಾತ್ರಿಯು ಅಳಿಸಲಾರದಾಯಿತು. ಮರೆಯಲಸಾಧ್ಯವಾಯಿತು.

* * * *

೩೨. ನೀನು ನನ್ನ ಜೀವನವನ್ನು ಪ್ರವೇಶಿಸಿದಾಗ

ಪ್ರೀತಿಯ ಹೊಳೆ ಹರಿಸಲು ನೀನು ನನ್ನ ಜೀವನವನ್ನು ಪ್ರವೇಶಿಸಿದಾಗ ಸಾಮಾನ್ಯ ರೀತಿಯಲ್ಲಿ, ಲೌಕಿಕ ರೂಪದಲ್ಲಿದ್ದರೂ ನಾನು ನಿನ್ನನ್ನು ತಿರಸ್ಕಾರದಿಂದ ನೋಡುವುದಿಲ್ಲ. ಪರಿಹಾಸ್ಯ ಮಾಡುವುದಿಲ್ಲ. ಬದಲು ನಿನ್ನನ್ನು ಹಾಗೆಯೇ ಸ್ವೀಕರಿಸಿ ಪ್ರೀತಿಸುವೆ. ನನ್ನ ಜೀವದ ಮಧುವೇ, ನಾನು ನಿನ್ನನ್ನು ಖಂಡಿತ ಪ್ರೀತಿಸುತ್ತೇನೆ.

ಪ್ರೀತಿಯನ್ನು ಹರಿಸಲು ನೀನು ನನ್ನ ಜೀವನವನ್ನು ಪ್ರವೇಶಿಸಿದಾಗ ನಿನ್ನಲ್ಲಿ ಮುಕ್ತಿಗಾಗಿ ಉತ್ಸಾಹ ತುಂಬಿದ ಅಪೇಕ್ಷೆ ಮತ್ತು ಸ್ವರ್ಗದ ಸಂತೋಷ, ಬಂಧನ ಮತ್ತು ಅವನತಿಯ ಭಯ, ನರಕದ ದುಃಖ ಎಲ್ಲಾ ತುಂಬಿತ್ತು. ಆದರೆ ನಾನು ನಿನ್ನ ಮೇಲೆ ಉಪೇಕ್ಷೆ ತೋರಿ ಅರಣ್ಯಕ್ಕೆ ಹೋಗುವುದಿಲ್ಲ. ಅದರ ಬದಲು ನಿನ್ನ ಮರಳುಗೊಳಿಸುವ ಸೌಂದರ್ಯವನ್ನು ಸಂತೋಷದಿಂದ ಸವಿಯುತ್ತಾ ಸ್ವರ್ಗದ ಅಮೃತ ಸಮಾನ ನಿನ್ನ ಪ್ರೀತಿಯಲ್ಲಿ ಮುಳುಗಿ ಉಸಿರಾಡಿದೆ. ಓ ನನ್ನ ಪ್ರೀತಿಯ ಮಧು! ನಾನೀಗ ಉಲ್ಲಾಸದಿಂದ ಉಸಿರಾಡುವೆ.

ನೀನು ನಿನ್ನ ಅತ್ಯಾವಶ್ಯಕವಾದ ತನ್ನತನವನ್ನು ಮರೆಮಾಡುವೆ ಎಂದು ನನಗೆ ಖಂಡಿತವಾಗಿ ನಂಬಿಕೆ ಇದೆ. ಆದರೆ ನಾನು ಅದನ್ನು ಗುರುತಿಸುವುದರಲ್ಲಿ ತಪ್ಪು ಮಾಡುವುದಿಲ್ಲ. ನಿನ್ನ ಅಂದದ ಮುದಗೊಳಿಸುವ, ಉಷಾಕಾಲದ ತೇಜೋಮಯ ಸ್ವಯಂಪ್ರಕಾಶದಂತಿರುವ ಮತ್ತು ಉದ್ರೇಕದಿಂದ ಕಂಪಿಸುವ ಸ್ವರೂಪ ಯಾವ ಸ್ಥಳದಲ್ಲೇ ಆಗಲಿ, ಯಾವ ವೇಷಭೂಷಣದಲ್ಲೇ ಇರಲಿ, ನೀನು ನಿನ್ನ ಪ್ರೀತಿಯನ್ನು ನನಗರ್ಪಿಸಿದಾಗ, ನಿನ್ನತನವನ್ನು ನೀನು ಅದರಲ್ಲಿ ಮುಚ್ಚಿದ್ದರೂ, ನಾನು ನಿನ್ನನ್ನು ಗುರುತಿಸುವೆ. ನಾನು ನಿನ್ನನ್ನು ಪ್ರೀತಿಸುವೆ. ದೇವಮಂದಿರಗಳಲ್ಲಿ, ನರ್ತಕಿಯರಲ್ಲಿ ಅಥವಾ ಎಲ್ಲೆಲ್ಲೋ ಅಲೆದಾಡುತ್ತಿರುವ ಭಿಕ್ಷುಕಿಯರಲ್ಲಿ, ನಾನು ನಿನ್ನನ್ನು ಗಮನಿಸುವೆ. ನಾನು ನಿನ್ನನ್ನು ಪ್ರೀತಿಸುವೆ. ಓ ನನ್ನ ಜೀವನಾಮೃತವೇ! ನಾನು ನಿಜವಾಗಿಯೂ ನಿನ್ನನ್ನು ಪ್ರೀತಿಸುವೆ.

* * * *

೩೩. ನಿನಗೆ ಮಾತ್ರ ಪ್ರಾಧಾನ್ಯ

ಈ ವಿಶ್ವದ ಮೇಲೆ ಸಂಚಯಿಸಿದ ಸಕಲೈಶ್ವರ್ಯವೂ ನಿನ್ನ ಪ್ರೀತಿಯ ಬಿಂದುವಿನ ಮುಂದೆ ಛಿದ್ರಛಿದ್ರವಾದರೂ, ನಾನು ನಿನ್ನ ಅತ್ಯಂತ ಚಿಕ್ಕದಾದ ಹನಿಗೆ ಪ್ರಾಮುಖ್ಯತೆ ಕೊಡುತ್ತೇನೆ.

ಒಂದು ಬದಿಯಲ್ಲಿ ಇಡೀ ವಿಶ್ವದ ಸೌಂದರ್ಯವನ್ನೆಲ್ಲ ಕಲೆ ಹಾಕಿದ್ದರೆ ಇನ್ನೊಂದು ಬದಿಯಲ್ಲಿ ನಿನ್ನ ಪವಿತ್ರ ಇರುವಿಕೆಯ ನೆರಳಿದ್ದರೆ, ನಾನು ನಿನ್ನ ಸುಂದರ ಪವಿತ್ರ ಆಕೃತಿಯಿಂದ ಉಂಟಾದ ನೆರಳನ್ನೇ ಆರಿಸುವೆ.

ಒಂದು ಮೂಲೆಯಲ್ಲಿ ಈ ಭವ್ಯ ಜಗತ್ತಿನ ವೈಭವಗಳೆಲ್ಲಾ ಕಲೆಹಾಕಲ್ಪಟ್ಟಿದ್ದು, ಇನ್ನೊಂದರಲ್ಲಿ ನಿನ್ನ ಸುವಾಸನೆಯುಕ್ತ ಪಾದಧೂಳಿಯನ್ನು ಪ್ರದರ್ಶಿಸಿದ್ದರೆ, ನಾನು ಖಂಡಿತವಾಗಿಯೂ ಆ ಧೂಳನ್ನೇ ಆರಿಸುವೆ.

ಸೌಂದರ್ಯ, ಐಶ್ವರ್ಯ, ವೈಭವ ಮತ್ತು ಅಧಿಕಾರಗಳೆಲ್ಲ ನಿಷ್ಪ್ರಯೋಜಕ ಮತ್ತು ನಿನ್ನ ಒಂದು ಅಂಶ ಮಾತ್ರ ಸತ್ಯ. ನಾನು ಅದನ್ನು ಆರಿಸಿಕೊಳ್ಳುವೆ.

ಓ ನನ್ನ ಆತ್ಮವೇ! ಎಲ್ಲ ಕಾಲದಲ್ಲಿ ಎಲ್ಲ ಸಂದರ್ಭಗಳಲ್ಲಿ ಎಲ್ಲಾ ಪರಿಸ್ಥಿತಿಯಲ್ಲಿ, ಜೀವನದ ದುಃಖ ಮತ್ತು ಸಂತೋಷಗಳ ವಿವಿಧ ಹಂತಗಳಲ್ಲಿ ನಾನು ನಿನಗೆ ಮಾತ್ರ ಪ್ರಾಮುಖ್ಯತೆ ಕೊಡುವೆ.

* * * *

೩೪. ನನ್ನ ಭಕ್ತಿಯ ಹೊಳೆ

ನನ್ನ ಭಕ್ತಿಯ ಹೊಳೆಯು ಕಷ್ಟಗಳ ಪ್ರವಾಹದ ಮೂಲಕ ಹರಿಯಲಿಲ್ಲ. ಆಕೆ ಸರಳತೆ, ಸ್ಥೈರ್ಯ, ಸೌಲಭ್ಯ ಮತ್ತು ಶಾಂತಿಯಿಂದ ತುಂಬಿದ ಜೀವನದ ಮೂಲಕ ಮುಂದಕ್ಕೆ ಹರಿದಳು. ನನ್ನ ಉಪಾಸನೆಯ ನದಿಯು ಕಷ್ಟಗಳ ಪ್ರವಾಹದ ಮೂಲಕ ಹರಿಯಲಿಲ್ಲ.

ಮುರಿಯಲಸಾಧ್ಯವಾದ ನಿಯಮಗಳ ಗೋಡೆಯಿಂದ ಅಥವಾ ಕಠಿಣವಾದ ಆಳವಿಲ್ಲದ ನಿರ್ಬಂಧದ ಸಮುದ್ರದಲ್ಲೂ ಆಕೆ ತನ್ನ ಸ್ವಾತಂತ್ರ್ಯ ಕಳೆದುಕೊಂಡಿಲ್ಲ. ಆಕೆ ಯಾವಾಗಲೂ ಉತ್ಸಾಹಿತ ಮಗುವಿನಂತೆ ಆಡುತ್ತಿದ್ದಳು. ಮನ ಬಂದಂತೆ ಓಡಾಡುತ್ತಿದ್ದಳು. ನನ್ನ ಭಕ್ತಿಯ ಹೊಳೆಯು ಸದಾ ಆಕೆಯ ಸ್ವಾತಂತ್ರ್ಯವನ್ನು ರಕ್ಷಿಸುತ್ತಿತ್ತು.

ಆಕೆ ಎಂದೂ ಪ್ರೀತಿ ಮತ್ತು ಸೌಂದರ್ಯವನ್ನು ತಿರಸ್ಕರಿಸಿಲ್ಲ. ಅಥವಾ ನಿನ್ನ ಮೂಲಭೂತ ರೂಪವನ್ನು ಸಂದೇಹಿಸಲಿಲ್ಲ.

ಹೌದು ಆಕೆ ಒಬ್ಬ ಸನ್ಯಾಸಿನಿ. ಆರಂಭದಿಂದಲೂ ತಪಸ್ಸಿನ ತೋಪಿನಲ್ಲಿದ್ದು ಕೊಂಡು ಉಸಿರಾಡುತ್ತಿದ್ದಳು. ಆದರೂ ಆಕೆಯ ಪ್ರತಿ ಭಾಗದಿಂದಲೂ ವಿಶ್ವದ ಸೌಂದರ್ಯವು, ಚಂದ್ರನಿಂದ ಬೆಳಕು ಸೋಸುವಂತೆ ಸ್ರವಿಸುತ್ತಿತ್ತು.

ಆಕೆಯ ಅಂಗಾಂಗಳಲ್ಲಿ ವಿವಿಧ ಪುಷ್ಪಗಳ ಸುಗಂಧ ಸೇರಿಕೊಂಡಿತ್ತು. ಆಕೆಯ ಹೃದಯ ಅಮಿತ ಪ್ರೀತಿ, ಅನುಕಂಪ ಮತ್ತು ಪರಿಶುದ್ಧತೆಯ ತ್ರಿವೇಣಿ ಸಂಗಮವಾಗಿದೆ.

* * * *

೩೫. ಜೀವನ ಮತ್ತು ನಿನ್ನ ಪ್ರೀತಿ

ನಿನ್ನ ಪ್ರೀತಿಗೆ ಯೋಗ್ಯವಾಗಿರುವ ಅದೃಷ್ಟ ಇಲ್ಲದಿದ್ದರೆ, ನನ್ನ ಜೀವನವು ಕಹಿಯಾದ ವಿಷ ಗುಟುಕಿನಂತಿರುತ್ತಿತ್ತು.

ಅದು ನಿನ್ನ ಪ್ರೀತಿಯ ಅಮೃತದ ಬಟ್ಟಲಿಗೆ ಬದಲಾಗಿದೆ.

ನಿನ್ನ ಪ್ರೀತಿಯ ಜೀವನಕ್ಕೆ ಯೋಗ್ಯವಾಗಿರುವ ಅದೃಷ್ಟ ಇಲ್ಲದಿದ್ದರೆ. ಮುರುಭೂಮಿಯಂತೆ ಬರಡಾಗಿ ಎಲ್ಲಾ ಅಂದವನ್ನು ಕಳೆದುಕೊಳ್ಳುತ್ತಿತ್ತು. ಅದರ ಉರಿಯುತ್ತಿರುವ ಕೆಂಡದಿಂದ ನನ್ನ ದೇಹ ಅದರ ಮೇಲೆ ಬೀಸುವ ಬಿಸಿಗಾಳಿ ಸುಡುತ್ತಿತ್ತು. ನನ್ನನ್ನು ತಳಮಳಿಸುವಂತೆ ಮಾಡುತ್ತಿತ್ತು. ನಿನ್ನ ಪ್ರೀತಿಯಿಂದಾಗಿ ಅದು ಈಗ ಮರಳುಗಾಡಿನ ಓಯಸಿಸ್‌ನಂತೆ ಬದಲಾಗಿದೆ.

ನಿನ್ನ ಪ್ರೀತಿಗೆ ಯೋಗ್ಯವಾಗಿರುವ ಅದೃಷ್ಟ ಇಲ್ಲದಿರುತ್ತಿದ್ದರೆ ನನ್ನ ಜೀವನವು ನನಗೆ ಸಾವಿನ ಆವೃತ್ತಿಯಾಗುತ್ತಿತ್ತು.

ನಿನ್ನ ಪ್ರೀತಿಯ ಸಹಾಯದಿಂದ ಪೋಷಿಸಲ್ಪಟ್ಟು ಈಗ ಅದು ಅಮರತ್ವದ ಸಂತೋಷವನ್ನು ಪಡೆಯಿತು.

* * * *

೩೬. ಪ್ರೀತಿಯ ಮೂಲ

ನಿನ್ನ ಸೌಂದರ್ಯವನ್ನು ಚಿಂತಿಸಿ, ಯೋಚಿಸಿ ನಾನು ನಿನ್ನತ್ತ ಆಕರ್ಷಿತ ನಾಗಲಿಲ್ಲ. ನನ್ನ ದೃಷ್ಟಿಯಲ್ಲಿ ಬಾಹ್ಯ ಸೌಂದರ್ಯವು ಗೌಣ. ನಿನ್ನ ಸೌಂದರ್ಯವನ್ನು ನೋಡಿ ನಾನೇನು ನಿನ್ನತ್ತ ಆಕರ್ಷಿತನಾಗಲಿಲ್ಲ.

ನಿನ್ನ ಯೋಗ್ಯತೆಯ ಘನತೆ, ನಿನ್ನ ಗಾಂಭೀರ್ಯದ ಭವ್ಯತೆ ಮತ್ತು ಕೀರ್ತಿ, ವೈಭವ ಯಾವುದೂ ನನ್ನನ್ನು ಪ್ರೀತಿಸಲು ಉತ್ತೇಜಿಸಲಿಲ್ಲ. ಇವು ಯಾವುದೂ ನನ್ನ ದೃಷ್ಟಿಯಲ್ಲಿ ಅಮೂಲ್ಯವಾದವುಗಳಲ್ಲ. ನಿನ್ನ ಒಳ್ಳೆಯತನದ ಭವ್ಯತೆ ಮತ್ತು ಘನತೆ ಗಾಂಭೀರ್ಯಕ್ಕಾಗಲೀ ನಾನು ನಿನ್ನನ್ನು ಪ್ರೀತಿಸಲಿಲ್ಲ.

ಬರೀ ಪ್ರೀತಿಗಾಗಿ ನಾನು ನಿನ್ನನ್ನು ಪ್ರೀತಿಸಿದೆ. ಪ್ರೀತಿ ಇಲ್ಲದಿದ್ದರೆ ಜೀವನಕ್ಕೆ ಅರ್ಥವೇ ಇಲ್ಲ. ಜೀವನವು ಸೌಂದರ್ಯಕ್ಕಿಂತ, ಅದಕ್ಕಿಂತ ಯೋಗ್ಯತೆಗಿಂತಲೂ ಹೆಚ್ಚು ಸೊಬಗು ಉಳ್ಳದ್ದು. ಆದುದರಿಂದ ಪ್ರೀತಿಯ ಸಾಗರವೇ ಪ್ರೀತಿ ಎಂಬ ಕಣ್ಣ ಕಪ್ಪು ಹಚ್ಚಿಕೊಂಡ ಕಣ್ಣಿನಿಂದ ನಿನ್ನ ಪಾದಗಳನ್ನು ದಿಟ್ಟಿಸಿ ನೋಡುತ್ತೇನೆ. ನಾನು ನಿನ್ನ ಅನುಗ್ರಹ ಮತ್ತು ರಮ್ಯತೆಯಿಂದ ಸಫಲಗೊಳಿಸಲು ಆಶಿಸುತ್ತೇನೆ.

ರೂಪ ಅಥವಾ ಐಶ್ವರ್ಯ ಅಲ್ಲ, ಕೇವಲ ಪ್ರೀತಿಯೇ ನಮ್ಮ ಪ್ರೀತಿಗೆ ಮೂಲ. ಇತರ ವಸ್ತುಗಳಂತೆ ಅವೆರಡೂ ಪ್ರೀತಿ ಇದ್ದಲ್ಲಿ ಇರುತ್ತವೆ.

* * * *

೩೭. ಬದಲಿಸಲಾಗದ ಪ್ರೀತಿ

ನಮ್ಮ ಈ ಅಸ್ಥಿರ ಜಗತ್ತಿನಲ್ಲಿ ಪ್ರತಿಯೊಂದಕ್ಕೂ ಬದಲಾವಣೆ ಇದೆ. ದುಂಬಿಗಳು ಗುಲಾಬಿ ಮತ್ತು ಮಲ್ಲಿಗೆಯ ಮೇಲೆ ಹಾಡುತ್ತಾ ನರ್ತಿಸುತ್ತವೆ. ಅದೇ ರೀತಿಯ ಪ್ರೀತಿಯನ್ನು ಅವುಗಳು ಕದಂಬ ಪುಷ್ಪದ ಮೇಲೂ ತೋರಿಸುತ್ತವೆ.

ಚಂದ್ರ ಕಿರಣಗಳು ಸಾಗರವನ್ನು ಅಪ್ಪಿಕೊಂಡ ತಕ್ಷಣ ಅದು ಕುಣಿದು ಕುಪ್ಪಳಿಸಿ ತನ್ನನ್ನೇ ಮರೆಯುವುದು. ಹಾಗೆಯೇ ಯಾವ ಸಂಕೋಚವೂ ಇಲ್ಲದ ಈ ನದಿಯನ್ನು ಅಷ್ಟೇ ಪ್ರೀತಿಯಿಂದ ಅಪ್ಪಿಕೊಂಡು ತನ್ನ ನೋವನ್ನು ಸುಲಭದಲ್ಲಿ ಮರೆಯುವುದು.

ನಿನ್ನ ಸಂತೋಷಕ್ಕಾಗಿ ಇಲ್ಲಿವರೆಗೆ ನನ್ನನ್ನು ನಿನ್ನ ಪ್ರಿಯಕರನನ್ನಾಗಿ ಮಾಡಿದ್ದರೂ, ನೀನು ಬೇರೊಬ್ಬರ ಸಮಗ್ರ ಶೋಧನೆಯಲ್ಲಿದ್ದೆ. ಆದರೆ ನಾನು ಅದಕ್ಕಾಗಿ ದುಃಖಿಸುವುದಿಲ್ಲ. ಗೋಳಾಡುವುದಿಲ್ಲ ಅಥವಾ ದೂರುವುದೂ ಇಲ್ಲ. ನೀನು ನನ್ನನ್ನು ಎಂದೆಂದಿಗೂ ಪ್ರೀತಿಸಬೇಕು. ಇತರರನ್ನು ಬಿಟ್ಟು ನನ್ನನ್ನು ಮಾತ್ರ ರಕ್ಷಿಸಬೇಕು ಎಂದು ಶಾಶ್ವತ ಪ್ರಿಯಕರನಾದ ನಿನ್ನನ್ನು ಕೇಳುವ ಯಾವ ಅಧಿಕಾರ ನನಗಿದೆ?

ಹೌದು, ನಾನು ನನ್ನ ಕರ್ತವ್ಯ ನಿರ್ವಹಿಸಲು ಮುಂದುವರಿಯುವೆ. ಕ್ರೌಂಚ ಪಕ್ಷಿ ತನ್ನ ಪ್ರೀತಿಯನ್ನು ಜೀವಮಾನ ಎಲ್ಲ ಇಟ್ಟುಕೊಂಡು ಆನಂತರವೂ ತಾನು ಯಾರಿಗೆ ಹೃದಯ ಒಪ್ಪಿಸಿತ್ತೋ ಅದಕ್ಕೆ ನಿಷ್ಠೆಯಿಂದ ಇರುವಂತೆ ನನ್ನ ರೀತಿ ಕೂಡ.

ಕರ್ತವ್ಯ ಪರಿಪಾಲಿಸಿರುವುದರಿಂದ ದೊರೆತ ಸಂತೋಷಕ್ಕೆ ಸಾಟಿಯಿಲ್ಲ. ನಿನ್ನ ರೂಪಾಂತರದ ವೃತ್ತಾಂತ ಎಂದಾದರೂ ಸತ್ಯವಾದರೆ ನಾನೇನು ರೋದಿಸುವುದಿಲ್ಲ.

ಪ್ರೀತಿಯಿಂದ ಪರಿಶುದ್ಧವಾದ ಪವಿತ್ರ ಪದಗಳನ್ನು ಕೇಳಿದಾಗ ಆತನ ಕೆನ್ನೆಯ ಮೇಲೆ ಕಣ್ಣೀರು ಹರಿಯಿತು. ಆತ ಕೇಳಿದ "ನಿನ್ನನ್ನು ಎಂದಾದರೂ ಮರೆಯಲು ಸಾಧ್ಯವೇ? ನೀನೇ ನನ್ನ ಜೀವ, ನನ್ನ ಆತ್ಮ ಎಲ್ಲವೂ. ನಿನ್ನನ್ನು ತ್ಯಜಿಸಿ ಬೇರೆಯವರನ್ನು ಪ್ರೀತಿಸಲು ಸಾಧ್ಯವೇ? ಓ ನನ್ನ ಪ್ರೀತಿಯೇ! ನಾನು ನಿನ್ನ ಸಾಗರವಾಗಿದ್ದರೂ ಪ್ರಕೃತಿಯ ಅದ್ಭುತ ನಿಯಮಗಳನ್ನು ಮುರಿಯಲು ಸಮರ್ಥನೇ? ಚಂದ್ರನ ದರ್ಶನವಾದಾಗ ಕುಣಿಯುವ ತೆರೆಗಳು, ನದಿಯ ತೆಕ್ಕೆಯೊಳಗೆ ಸೇರಿ ಪ್ರೀತಿಯನ್ನು ಕಳಕೊಳ್ಳುವುದು. ಗುಲಾಬಿ ಮೇಲಿನ ದುಂಬಿಗೆ ಕದಂಬ ಪುಷ್ಪದ ಮೇಲಿನ ದುಂಬಿಯ ಸಂತೋಷ ಇರುವುದಿಲ್ಲ. ಇದನ್ನು ನೀನು ಮರೆಯಬೇಡ.

* * * *

೩೮. ಆತನ ಧ್ವನಿ

ದೂರದ ಪರ್ವತ ಶಿಖರಗಳ ಆಚೆಯಿಂದ ಹೊರಬಂದ ಧ್ವನಿ ಸತತವಾಗಿ ನನ್ನ ಆತ್ಮಸಾಕ್ಷಿಯನ್ನು ತಟ್ಟುವುದು. ನೀನು ಏನನ್ನು ಪಿಸು ನುಡಿಯುತ್ತಿದ್ದಿ ಎಂದು ನನಗೆ ತಿಳಿದಿದೆ. "ಬಾ ಓ ನನ್ನ ಪ್ರೀತಿಯೆ! ನಿನ್ನನ್ನು ಸರಪಳಿಯ ಬಂಧನದಿಂದ ಬಂಧಮುಕ್ತಗೊಳಿಸಿ ನನ್ನನ್ನು ನೋಡಲು ಬಾ."

ನನ್ನ ಮನಸ್ಸಿನ ಕಣ್ಣಮುಂದೆ ಹಿಮಾಚ್ಛಾದಿತ ಹಿಮಾಲಯದ ಶಿಖರಗಳು ಅದರ ವೈಭವದೊಡನೆ ಕಂಡು ಬಂದವು. ಅಷ್ಟು ದೂರದಿಂದ ಒಂದು ಸಂದೇಶ ಬಂದು, ನಿನ್ನ ಆತ್ಮಸಾಕ್ಷಿಯನ್ನು ತಟ್ಟಿತು. ನೀನೇನು ಪಿಸುನುಡಿದೆ ಎಂದು ನನಗೆ ಗೊತ್ತು. "ಓ ನನ್ನ ಪ್ರಿಯೆ! ನಿನ್ನನ್ನು ಬಂಧನದಿಂದ ಮುಕ್ತಿಗೊಳಿಸಿ ನನ್ನ ದರ್ಶನಕ್ಕೆ ಬಾ!"

ಆಕಾಶದಲ್ಲಿ ಕಲೆಹಾಕಿದ್ದ ಮೋಡಗಳನ್ನೇರಿ ನೀನು ಅವಿರತ ಪ್ರೀತಿಯ ಮಳೆಯ ಮೂಲಕ ಸಂದೇಶ ಕಳುಹಿಸಿದೆ. ನಿನ್ನನ್ನು ಕಾಣುವ ಆರಂಭದ ಸಿದ್ಧತೆಯಲ್ಲಿ ಮುಳುಗಿದ್ದು ಈಗ ನನಗೆ ಸ್ವಲ್ಪ ಧೈರ್ಯ ಬಂದಿದೆ.

ನಿನ್ನ ಪ್ರೀತಿಯು ಎಂತಹ ಅದ್ಭುತ ಪ್ರವಾಹವೆಂದರೆ, ನಿನ್ನ ಸಂದೇಶ ಅಂತ್ಯವಾಗಲೇ ಇಲ್ಲ. ಖಂಡಿತವಾಗಿ ನಮ್ಮ ಮಿಲನದ ಅದೃಷ್ಟದ ಹೊನ್ನ ದಿನವೊಂದು ಉದಯಿಸಿ ನಿನ್ನ ಏಕಾಗ್ರತೆ ಮತ್ತು ಸಂಯೋಗಕ್ಕೆ ನಿನ್ನ ಮುಂದೆ ನಾನು ನಿಲ್ಲುವೆ.

ನಿನ್ನ ಧ್ವನಿ ಸ್ವರ್ಗದಾಚೆಗೆ ಮತ್ತು ಪಾತಾಳವನ್ನು ದಾಟಿ ಭೂಮಿ, ವಾಯುಮಂಡಲ, ಜಲಮಂಡಲ ಮತ್ತು ಅಗ್ನಿಯನ್ನು ದಾಟಿ ಮೇಲಕ್ಕೇರುತ್ತಿರಲು ನನ್ನ ಮನಸ್ಸಾಕ್ಷಿಯನ್ನು ಎಡೆಬಿಡದೆ ಹೊಡೆದೆಬ್ಬಿಸುತ್ತಿದೆ. ನಿನ್ನ ಪಿಸುಮಾತು ನನಗರ್ಥವಾಯಿತು. "ನನ್ನ ಪ್ರಿಯ ಬಾ, ನಿನ್ನನ್ನು ಬಂಧಿಸಿದ ಶೃಂಖಲೆಯನ್ನು ಎಸೆದು ನನ್ನನ್ನು ಕಾಣಲು ಬಾ"

* * * *

೩೯. ಆರಾಧನೆ

ಎತ್ತರದಲ್ಲಿ, ಅತಿ ಎತ್ತರದಲ್ಲಿ ಸೂರ್ಯನ ಹೊಂಗಿರಣಗಳಿಂದ ಹೊಳೆಯುತ್ತಿರುವ ಹಿಮಚ್ಛಾದಿತ ಪರ್ವತಗಳ ಮೇಲೆ ಇರುವ ನಿನ್ನ ಮಂದಿರ. ನಾನು ಮೆಲ್ಲಮೆಲ್ಲನೆ ನನ್ನ ಮೊದಲ ಹೆಜ್ಜೆಯನ್ನು ಪರ್ವತಗಳ ಕಾಲುದಾರಿಯಲ್ಲಿಟ್ಟು ನಿನಗಾಗಿ ಸ್ವಲ್ಪ ಹೊತ್ತು ಕಾಯುತ್ತಿರುವೆ.

ಪಕ್ಷಿಗಳು ನನಗೆ ಸುದ್ದಿ ತಿಳಿಸುತ್ತವೆ. ಮತ್ತು ಪ್ರೀತಿಯಿಂದ ಗಾಳಿಯನ್ನು ಸ್ವಾಗತಿಸುತ್ತವೆ. ಕಾಲ್ನಡಿಗೆಯಲ್ಲಿ ಬಹಳ ದೂರ ಸಾಗಿದ ಯಾತ್ರಿಕರು ನನ್ನತ್ತ ಕನಿಕರದಿಂದ ನೋಡುವರು. ಆದರೆ ನನಗದರ ಗೊಡವೆ ಇಲ್ಲ.

ಜಡತ್ವ ಮತ್ತು ಪರಾವಲಂಬನೆ ತ್ಯಜಿಸಿ ನಿನ್ನ ಪವಿತ್ರ ಮಂದಿರಕ್ಕೆ ಹೋಗುವ ಕಾಲುದಾರಿಯನ್ನು ಏರಬೇಕು ಎಂದು ನಿರ್ಣಯಕ್ಕೆ ಬಂದಿದ್ದೇನೆ.

ನಾನೇ ದೇಗುಲವಾಗಿ ಮಾರ್ಪಟ್ಟಿರುವುದರಿಂದ ಅದನ್ನು ಸಂದರ್ಶಿಸುವ ಉದ್ದೇಶವನ್ನು ತ್ಯಜಿಸಿರುವೆ. ನನ್ನ ಆಕರ್ಷಕ ದೇಗುಲದಲ್ಲಿರುವ ನಿನ್ನ ಹೊಳೆಯುವ ಮೂರ್ತಿಯ ಮುಂದೆ ನಿತ್ಯವೂ, ಪ್ರೀತಿಯ ನಿರಂತರ ಆರಾಧನೆಯು ನಡೆಯುತ್ತಿದೆ. ಒಂದೇ ಒಂದು ಹೂ ಆಗಲಿ, ಗಂಧ ಚಂದನವಾಗಲಿ ಪೂಜೆಗೆ ದೊರೆಯದು. ಧೂಪ ಹಾಕಲೂ ಏನೂ ಸಿಗದು. ಫಲಪುಷ್ಪಗಳಿಲ್ಲದ ಗಂಧ ಚಂದನಗಳಿಲ್ಲದ ಧೂಪ ದೀಪಗಳಿಲ್ಲದ ನಿನ್ನ ಸುಗಂಧಿತ ಪಾದಗಳನ್ನು ತೊಳೆಯಲು ಎಲ್ಲಿಂದ ನೀರನ್ನು ತರಲಿ? ನಿನ್ನನ್ನು ಪ್ರಾರ್ಥಿಸಲು ಅಥವಾ ಮಂತ್ರ ಜಪಿಸಲು ನನ್ನಲ್ಲಿ ಬುದ್ಧಿಶಕ್ತಿಯೇ ಇಲ್ಲ. ನಿನ್ನನ್ನು ಹೇಗೆ ಆರಾಧಿಸಲಿ?

ಆ ಹೊತ್ತಿಗೆ ಸರಿಯಾಗಿ ಶಕ್ತಿಯುತ ಪ್ರೀತಿಯಿಂದ ಪ್ರೇರಣೆಗೊಂಡು, ಪರ್ವತ ಶ್ರೇಣಿಯ ಮೇಲೆ, ಪ್ರತಿಮೆಯ ಒಳಗಿನಿಂದ ನೀನು ಗಟ್ಟಿಯಾಗಿ ಉದ್ಘೋಷಿಸಿದೆ. "ನನ್ನನ್ನು ಭ್ರಮೆಯಿಂದ, ಮೋಸದ ಧರ್ಮಾಚರಣೆ ಮತ್ತು ಶಾಸ್ತ್ರೋಕ್ತ ಕರ್ಮಗಳಿಂದ ಬಂಧಿಸಬೇಡ. ನಿನ್ನತನವನ್ನು ಇಟ್ಟುಕೊಂಡು, ಎಲ್ಲಿ ನೀನಿದ್ದೀಯೋ, ಅಲ್ಲೇ ನನ್ನ ಪಾದಕ್ಕೆರಗು. ಅಲ್ಲಿಗೆ ನಿನ್ನ ಪೂಜೆ ಮುಗಿಯುತ್ತದೆ. ನನ್ನ ಅನುಗ್ರಹವೂ ಸುರಕ್ಷಿತ.

* * * *

೪೦. ಅನುಕಂಪದ ಸ್ಥಿತಿ

ನೀನು ಸುಗಂಧಯುಕ್ತ ಸುಂದರ ಹೂದೋಟದಲ್ಲಿ ವಾಸ್ತವ್ಯ ಹೂಡಿದ್ದರೂ, ಪುಷ್ಪಗಳ ಸುಗಂಧಕ್ಕಾಗಿ ವ್ಯರ್ಥ ಪ್ರಯತ್ನ ಮಾಡುವೆ. ನಿಜವಾಗಿಯೂ ನಿನ್ನ ಸ್ಥಿತಿ ಚಿಂತಾಜನಕ.

ನಿನ್ನ ಬಳಿ ನಿಂತಿದ್ದ ನನ್ನ ನಲ್ಲೆ, ಮಾದಕ ದ್ರವ್ಯದ ಮನಮೋಹಕ ಬಟ್ಟಲನ್ನು ನಿನ್ನ ಕೆಳ ತುಟಿಗೆ ಹಿಡಿದು ನಿಂತಿದ್ದಾಳೆ. ಆದರೆ ನೀನು ಅದಕ್ಕಾಗಿ ಗೊಂದಲಗೊಂಡಿರುವೆ. ನಿಜವಾಗಿಯೂ ನಿನ್ನ ಸ್ಥಿತಿ ಚಿಂತಾಜನಕ.

ನೀನು ಸುಮಧುರ ಪ್ರಶಾಂತ ಸಂಗೀತದ ಶ್ರುತಿಗಳ ಮಧ್ಯೆ ವಾಸಿಸುತ್ತಿರುವೆ. ಆದರೆ ಶಾಂತಿಗಾಗಿ, ಪ್ರಶಾಂತತೆಗಾಗಿ ಚಡಪಡಿಸುತ್ತಿರುವೆ. ನಿಜವಾಗಿಯೂ ನಿನ್ನ ಸ್ಥಿತಿ ಚಿಂತಾಜನಕ.

ನೀರಿನಲ್ಲಿದ್ದರೂ ಮೀನಿಗೆ ಯಾವಾಗಲೂ ದಾಹವಾಗಿರುತ್ತದೆ. ದುಂಬಿಗಳು ತಾವರೆಯ ಲೋಕದಲ್ಲಿದ್ದರೂ ಸವಿಯಿಂದ ವಂಚಿತವಾಗಿರುತ್ತವೆ. ಅದಕ್ಕಾಗಿಯೇ ನನಗೆ ಆಶ್ಚರ್ಯವಾಗುತ್ತದೆ. ನಿಜವಾಗಿಯೂ ಇದು ದುರದೃಷ್ಟಕರ.

* * * *

೪೧. ಪ್ರೀತಿಯ ಗೆಲುವು

ಆ ದಿನ ನಾನು ನನ್ನ ಮಹಲಿನ ಕಿಟಕಿಯ ಬಳಿ ಕುಳಿತಿದ್ದಾಗ, ನಿನ್ನ ಗಮನ ಸೆಳೆಯಲು ಯತ್ನಿಸಿದೆ. ಆದರೆ ನೀನು ನನ್ನತ್ತ ಒಂದು ಕುಡಿನೋಟ ಬೀರುವ ತೊಂದರೆಯನ್ನು ತೆಗೆದುಕೊಳ್ಳಲಿಲ್ಲ.

ನೀನು ಬಂದು ಹೋಗುವ ಹಾದಿಯ ಮೇಲೆ ನಾನು ಬಂಗಾರದಂತೆ ಅಮೂಲ್ಯವಾದ ಸುಗಂಧಿತ ಪ್ರೇಮ ಪತ್ರಗಳನ್ನು ಚೆಲ್ಲಿದೆ. ಆದರೆ ನೀನು ಅವುಗಳನ್ನು ಧಿಕ್ಕರಿಸಿ ಮುಂದೆ ನಡೆದೆ.

ನನ್ನ ಅನುರಾಗದ ಹೃದಯವನ್ನು ಮತ್ತು ನನ್ನ ದೇಹದ ಪ್ರತಿ ಕಣ ಕಣಗಳನ್ನು ವರ್ಣರಂಜಿತ ಹಾರವನ್ನಾಗಿ ಪೋಣಿಸಿದೆ. ನಿನ್ನ ಅರಮನೆಗೆ ಹೋಗುವ ನೀ ನಡೆದ ಪವಿತ್ರ ದಾರಿಯಲ್ಲಿ ಅದನ್ನು ಹರಡಿದೆ. ಕೆಲವೊಮ್ಮೆ ಕೃಪಣನಂತೆ, ನಿನ್ನ ಕೃಪೆಯನ್ನು ಆಶಿಸುತ್ತೇನೆ. ಆದರೆ ಎಂದೂ ನಿನ್ನ ಹೆಜ್ಜೆಯ ಗುರುತು ಅದರ ಮೇಲೆ ಬೀಳಲಿಲ್ಲ.

ನನ್ನ ಕನಸುಗಳನ್ನು ಸಂಗೀತದ ಮಧುರ ಶ್ರುತಿಗಳಂತೆ ಕವನಗಳಾಗಿ ಪರಿವರ್ತಿಸಿದಾಗ, ನೀನು ಅದನ್ನು ಕೇಳಬೇಕೆಂಬ ಪ್ರಯತ್ನ ಮಾಡುತ್ತಿದ್ದೆ. ಆದರೆ ನನ್ನ ಸಂಗೀತದ ಮಾರ್ದನಿ ಕೂಡ ನಿನ್ನ ಹೃದಯಕ್ಕೆ ಅನುಭವ ಆಗಲಿಲ್ಲ.

"ನೀನು ಮನ್ಮಥನ ಮಡದಿಗಿಂತಲೂ ಸುಂದರವಾಗಿ, ಮುದ್ದಾಗಿರುವೆ. ಆದರೆ ಅಹಂಕಾರ, ಜಂಭ, ಪ್ರತಿಷ್ಠೆಯ ಪರ್ವತವೇ ಆಗಿರುವೆ."

ನಾನು ನನ್ನ ಮುಂಜಾನೆ ಮತ್ತು ಮುಸ್ಸಂಜೆಯನ್ನು ನಿನ್ನ ಬರುವಿಕೆಯನ್ನು ಕಾದುಕೊಂಡೇ ಕಳೆಯುತ್ತಿರುವೆ. ಆದರೆ ನಿನಗೆ ಯಾವಾಗಲೂ ಅದರ ಮೇಲೆ ಅನಾದರ.

ಆ ಶುಭ ದಿನದಂದು ನನ್ನ ಸೌಧದ ಕಿಟಕಿ ಬಳಿ ಕುಳಿತುಕೊಳ್ಳುವುದನ್ನು ನಿಧಾನಿಸಿದೆ. ನನ್ನ ಕೈಯಲ್ಲಿ ಹೃದಯದ ಭಿಕ್ಷಾಪಾತ್ರೆಯನ್ನು ಹಿಡಿದುಕೊಂಡು ಭಿಕ್ಷೆ ಬೇಡಲು ಹೋದೆ. ನೀನು ಯಾವಾಗ, ಹೇಗೆ ಸದ್ದಿಲ್ಲದೆ ಬಂದೆ ಎಂದು ನಾನರಿಯೆ. ಮತ್ತು ಕಣ್ಣೀರಧಾರೆ ನನ್ನ ಪಾದಗಳ ಮೇಲೆ ಬಿತ್ತು. ನನಗೆ ಇದೇನೆಂದು ಅರ್ಥವಾಗದಿದ್ದರೂ, ನನ್ನ ರಾಜ ವೈಭವದ ಶೃಂಗಾರವನ್ನು ಕಳಚಿ, ನನ್ನ ಶರೀರವು ನಿರ್ಲಿಪ್ತತೆಯ ಭಸ್ಮದಿಂದ ಲೇಪಿಸಲ್ಪಟ್ಟಿರುವುದು ಸತ್ಯ.

* * * *

೪೨. ರಹಸ್ಯ

ನನ್ನ ಆತ್ಮವು ಕೊಳಲು ವಾದಕನ ಗೂಢವಾದ ರಾಗದಲ್ಲಿ ಸಂಪೂರ್ಣವಾಗಿ ಐಕ್ಯಗೊಂಡು ನೆಲೆಸಿತು. ಅದರ ಸಂಗೀತವು ಸ್ವಯಂ ಪ್ರಜ್ಞೆ ಇಲ್ಲದೆ ತನ್ನಿಂದ ತಾನೇ ನಿಂತಿತು. ಇದೇ ನನ್ನ ಮೌನದ ಗುಟ್ಟು.

ನನ್ನ ಹೃದಯದ ದುಂಬಿ, ಸೃಷ್ಟಿಯ ತಾವರೆಯ ಮೇಲೆ ಕುಳಿತು ಮಧು ಹೀರುತ್ತಿರುವಾಗ ಪೂರ್ಣವಾಗಿ ಈ ಜಗತ್ತನ್ನು, ತನ್ನನ್ನೂ ಮರೆತಿದೆ. ಇದೇ ನನ್ನ ಸ್ಥಿರ, ನಿಶ್ಚಲ, ಪ್ರಶಾಂತ ಮನಸ್ಥಿತಿಯ ಗುಟ್ಟು.

ಈ ಭೂಮಿಯ ವಿಶಾಲ ಪರಮಶ್ರೇಷ್ಠ ಸಾಗರದಲ್ಲಿ ನನ್ನ ಆತ್ಮವು ಹಿಮದ ತುಣುಕಿನಂತೆ ಈಜುತ್ತಿದೆ. ಕೆಲವೊಮ್ಮೆ ಅದು ಮುಳುಗುತ್ತದೆ. ಮತ್ತೆ ಕೆಲವೊಮ್ಮೆ ನಿಶ್ಚಲವಾಗಿರುತ್ತದೆ. ಇದೇ ನನ್ನ ಪ್ರಸನ್ನ ಚಿತ್ತದ ಗುಟ್ಟಿಗೆ ಕಾರಣ.

ಪ್ರಾಯಶಃ ನನ್ನ ಮುಖದ ಸೊಬಗು ಮತ್ತು ದೈವಿಕ ಕಳೆಯನ್ನು ಗಮನಿಸಿ ನಿನಗೆ ದಿಗ್ಭ್ರಮೆ ಆಗಬಹುದು. ಓ ನನ್ನ ಪ್ರೀತಿಯ ನಿಸ್ಸಂಗಿಯೇ! ಈ ಸ್ವರ್ಗೀಯ ಸಂತೋಷದ ರುಚಿಯು ನಾಲಗೆಯನ್ನು ಕತ್ತರಿಸಿ ಅದನ್ನು ಬಾಯಿಯ ಅಂಗಳಕ್ಕೆ ಸಿಕ್ಕಿಸಿ ದೊರೆತಿರುವುದಲ್ಲ ಎಂದು ನಿನಗೆ ಗೊತ್ತಿಲ್ಲ. ನನ್ನ ಪ್ರಿಯಳ ಸುಂದರ ಬಟ್ಟಲನ್ನು ಮನಪೂರ್ವಕವಾಗಿ ಕುಡಿಯಬೇಕು. ಇದೇ ನನ್ನ ಮಧುರವಾದ ಆಹ್ಲಾದಕರವಾದ ಸ್ಥಿತಿಯ ಗುಟ್ಟು.

* * * *

೪೩. ಪ್ರಶ್ನೆಗಳು

ಎಷ್ಟೊಂದು ಕಾರಂಜಿಗಳು, ಎಷ್ಟೊಂದು ನದಿಗಳು ಅವುಗಳು ನೀರ ಸಮೃದ್ಧಿಯೊಡನೆ ಸಾಗರದಾಳದೊಳಗೆ ಸೇರಿ ಮಾಯವಾದರೂ, ಸಾಗರವು ಅದರ ಮಿತಿಯನ್ನು ಮೀರದು. ನೀನೆಂದು ಆ ರೀತಿಯ ಶಾಂತಿ ಸಮಾಧಾನ, ವಿನಯಶೀಲತೆ ಗಾಂಭೀರ್ಯ ಪಡೆಯುವೆ?

ಮಣ್ಣಿನ ಹಣತೆಯ ದೀಪ, ಗಾಳಿ ಇಲ್ಲದ ಸ್ಥಳದಲ್ಲಿ ಕುಣಿಯುವುದಿಲ್ಲ. ಆಮೆ ತನ್ನ ಕೈಕಾಲುಗಳನ್ನು ಒಳಗೆಳೆದುಕೊಂಡು, ಎಷ್ಟು ಹೊಡೆತಗಳು ಬಿದ್ದರೂ, ಅಲುಗಾಡದೆ ಹಾಗೆಯೇ ಇರುವುದು. ನೀನೆಂದು ಅಂತಹ ಮೇಲ್ಮಟ್ಟದ ಮಾನಸಿಕ ಸ್ಥಿರತೆ ಮತ್ತು ನಿರ್ಲಿಪ್ತತೆ ಪಡೆಯುವೆ?

ಸೃಷ್ಟಿಯ ಮೇಲೆ ಸೃಷ್ಟಿಗಳು ವೃದ್ಧಿಸಿ ಸಾವಿನ ದವಡೆಯನ್ನು ಪ್ರವೇಶಿಸುವುದು. ಹೂಗಳಿಗಿಂತಲೂ ಕೋಮಲವಾದ ಮಕ್ಕಳು ಮತ್ತು ಯುವಕರು, ಹಲವಾರು ಸಜೀವ ಮತ್ತು ನಿರ್ಜೀವ ವರ್ಗಕ್ಕೆ ಸೇರಿದವುಗಳು. ಸ್ಪಷ್ಟವಾಗಿ ಭೂಮಿಯ ಮೇಲೆ ಹುಟ್ಟಿ, ಅರಳಿ ಮಾಯವಾಗುತ್ತಾರೆ. ಆದರೆ ಈ ಪೃಥ್ವಿ ಶಾಂತಿಯುತ ಧ್ಯಾನದಲ್ಲಿದ್ದು, ಎಲ್ಲವನ್ನು ನೋಡಿದರೂ ವಿಚಲಿತವಾಗುವುದಿಲ್ಲ. ಆಕಾಶವೂ ಕೂಡ ಈ ನಶ್ವರತೆಯನ್ನು ಕಂಡು ಸ್ವಲ್ಪ ನಕ್ಕು, ಎಂದಿನಂತೆ ಹೊಳೆಯುವುದು. ನಿನ್ನಲ್ಲಿ ನಾನು ತನ್ಮಯಗೊಂಡು ಆ ರೀತಿಯ ಪರಮಾನಂದ ಪಡೆಯುವ ದೈವೀಕೃಪೆಯನ್ನು ಪಡೆಯಲು ಎಂದು ಸಾಧ್ಯವಾಗುವುದು?

ಈ ಕಣಜವನ್ನು ನೋಡು ಆ ತಾವರೆಯ ದಳಗಳನ್ನು ಅವು ಚುಂಬಿಸುತ್ತವೆ. ಅದರಲ್ಲಿ ಗುಂಯ್‌ಗುಟ್ಟುವ ಸದ್ದು ಅಡಗಿದೆ ಮತ್ತು ಅದರ ಜ್ಞಾನೇಂದ್ರಿಯಗಳು ಸ್ತಬ್ಧಗೊಂಡಿವೆ. ಜೊತೆಗೆ ಈ ಮಗುವಿನತ್ತ ದೃಷ್ಟಿ ಹರಿಸು. ಅದರ ಭಾವನೆಗಳು ಮತ್ತು ಚಂಚಲತೆ, ತನ್ನ ತಾಯಿಯ ಎದೆ ಹಾಲನ್ನು ಕುಡಿಯುತ್ತಿರುವಾಗ ತಟಸ್ಥವಾಗಿದೆ. ನೀನೆಂದು ಅಂತಹ ಏಕೀಭಾವ ಪಡೆಯುವೆ? ನಿನ್ನೊಳಗೆ ನೀನು ಮುಳುಗಿದ್ದು ಈ ಜಗತ್ತಿನಲ್ಲಿ ಎಂದೆಂದಿಗೂ ಬದುಕುವೆಯೇನು?

* * * *

೪೪. ವ್ಯಕ್ತಪಡಿಸದ ಪ್ರೀತಿ

ಹೃದಯ ಸೆಳೆಯಲ್ಪಟ್ಟಿದೆ. ಯಾರೋ ಅಸಂಖ್ಯಾತ ಹಗ್ಗಗಳಿಂದ ಎಳೆಯುತ್ತಿದ್ದಾರೆ. ಅದರ ನೋವು ಎಷ್ಟು ಭಯಂಕರವಾಗಿದೆ ಎಂದರೆ ಸಹಸ್ರಾರು ಮುಳ್ಳುಗಳು ಚುಚ್ಚಿದಂತಿದೆ. ಆದರೆ ಹೃದಯ ಆಕರ್ಷಿಸಲ್ಪಟ್ಟಿದೆ ಎನ್ನುವುದನ್ನು ಅಲ್ಲಗಳೆಯುವುದರಿಂದ ಪ್ರಯೋಜನವಿಲ್ಲ.

ಕೆನ್ನೆಯ ಮೇಲಿಂದ ಕಣ್ಣೀರು ಎಡೆಬಿಡದೆ ಹರಿಯುತ್ತಿದೆ. ನಿದ್ರೆ ಇಲ್ಲದೆ ಕಳೆದ ರಾತ್ರಿಗಳು, ಚಡಪಡಿಸುವ ಅಸ್ವಸ್ಥ ಮನಸ್ಸು ತನ್ನ ಕರ್ತವ್ಯ ಮಾಡುವುದರಲ್ಲಿ ಉತ್ಸಾಹ ತೋರಿಸುವುದಿಲ್ಲ. ಎಲ್ಲೆಲ್ಲೂ ಗೋಚರಿಸುವ ಅವಳ ಮನಮೋಹಕ ಮುಗುಳ್ನಗುವನ್ನು ನೆನಪಿಸಿಕೊಳ್ಳುವುದರಿಂದ ಉಲ್ಲಾಸವಾಗುವುದು. ಆದರೆ ನೋವು ಬಹಳ ಯಾತನೆ ಕೊಡುತ್ತದೆ ಎಂದು ಅರ್ಥಮಾಡಿಕೊಳ್ಳುವುದು ಬಹಳ ಕಷ್ಟ.

ಈ ಹಾಡು ತುಂಬ ವ್ಯಾಕುಲತೆಯಿಂದ ತುಂಬಿದೆ. ಅದರ ನಿಶ್ಶಬ್ದ ಪರಿಣಾಮ ಆತ್ಮವನ್ನು ಸೀಳುತ್ತದೆ. ಆದರೂ ಅಂತಹ ಹೃದಯವೇದನೆ, ಪ್ರೀತಿಸುವುದರ ನೋವು ಎಂದು ಹೇಳಲು ಸಾಧ್ಯವಿಲ್ಲ.

ನಾವು ಸಂಧಿಸುತ್ತೇವೆ ಮತ್ತು ಬೀಳ್ಕೊಡುತ್ತೇವೆ. ಆಕೆಯ ಹೃದಯ ಪೀಠದಲ್ಲೂ ಅಂತಹ ಪ್ರೀತಿಯ ಸೊಗಸಾದ ನಾಟಕ ಆಡುತ್ತಿದೆ ಎಂದು ಗ್ರಹಿಸಬಹುದು. ಆದರೆ ಆತ್ಮಕ್ಕೆ ಪ್ರೀತಿಯ ವಿರಹ ವೇದನೆ ಇದೆ ಎಂದು ಹೇಳಲು ಸಾಧ್ಯವಿಲ್ಲ. ಸಂಭ್ರಮದ ಆನಂದೋತ್ಸವ ಇರುವುದು ಅಲ್ಲಿಯೇ. ಪ್ರೀತಿಯೆಂಬುದು ಒಂದು ಅವ್ಯಕ್ತ ದೇವತೆ. ಅದರ ದಿವ್ಯದರ್ಶನವಾಗಲು ಪದಗಳ ಸಹಾಯದ ಅಗತ್ಯವಿಲ್ಲ.

* * * *

೪೫. ಜೀವನದ ಧನ್ಯತೆ

ನಿನ್ನ ನೆನಪುಗಳು ಧಾರಾಳವಾಗಿದ್ದಾಗ ನಿನ್ನ ಸ್ಮರಣೆಯು ಅತಿಯಾಗಿ ತೀವ್ರಗೊಂಡು ನಾನು ನಿಶ್ಚಲನಾದೆ ಮತ್ತು ಮೂಕನಾದೆ. ನಿನ್ನ ಪ್ರೀತಿಯ ಸಾಕ್ಷಿಯಾಗಿ ನನ್ನ ಹೃದಯ ಮಾತ್ರ ಕಣ್ಣುಗಳ ಮೂಲಕ ಹರಿದುಬಂತು.

ಬಹಳ ಆಶ್ಚರ್ಯದಿಂದ ಪ್ರೇಕ್ಷಕರು ನನ್ನನ್ನು ನೋಡುತ್ತಿದ್ದರು. ಆದರೆ ಪರಿಹಾರ ಏನು? ನಿನ್ನ ಚಿತ್ತಾಕರ್ಷಕ ಮನಮೋಹಕ ರೂಪವನ್ನು ಕಣ್ಣಿನಲ್ಲಿ ಹಿಡಿದಿಟ್ಟುಕೊಳ್ಳದಷ್ಟು ನಾನು ಕುರುಡನಲ್ಲ. ನಿನ್ನ ಸಂಗೀತದ ಸ್ವರ್ಗೀಯ ಮಧುರ ಧ್ವನಿ, ಶರೀರದ ಕಣಕಣಗಳಲ್ಲೂ ಸ್ಪಂದಿಸದಿರುವಷ್ಟು ನನ್ನ ಹೃದಯವೂ ಕೂಡ ನಿಶ್ಶಕ್ತವಲ್ಲ. ನಿನ್ನ ನೆನಪಿನಿಂದ ನಾನು ಮೂಕನಾದೆ.

ನಿನ್ನ ಸಾಮಿಪ್ಯವನ್ನು ನಾನು ಬಯಸಲಿಲ್ಲ. ನಿನ್ನ ಸಹವಾಸಕ್ಕಾಗಿಯೂ ನಾನು ಹಂಬಲಿಸುವುದಿಲ್ಲ. ನಿನ್ನ ನೆನಪಿನಲ್ಲಿ ನಾನು ಸ್ವರ್ಗೀಯ ಸುಖವನ್ನು, ಪ್ರೀತಿಯ ಅತ್ಯಂತ ಹೆಚ್ಚಿನ ಹೀರುವಿಕೆಯನ್ನು ಅನುಭವಿಸುತ್ತೇನೆ. ಅತ್ಯಲ್ಪ ಜ್ಞಾನ ನನ್ನದಾಗಿದ್ದರೂ, ಕಣ್ಣೀರಿನಲ್ಲಿ ನಾನು ನಿನ್ನ ಕೃಪೆಯನ್ನು ಕಾಣುತ್ತೇನೆ. ಕೆಲವು ಕಣ್ಣೀರ ಹನಿಗಳು ಕೆನ್ನೆಯ ಮೇಲೆ ಉರುಳಿದಾಗ ಮತ್ತು ನಿನ್ನ ಪುಣ್ಯದ ನೆನಪು ಬಂದಾಗಲೆಲ್ಲ ತಕ್ಷಣ ಕಣ್ಣಿನಿಂದ ನೀರು ಹನಿಹನಿಯಾಗಿ ಸ್ರವಿಸುವುದು.

* * * *

೪೬. ಸರ್ವವ್ಯಾಪಿ ಭಗವಂತ

ನೀನು ಈ ಪರ್ವತವನ್ನು ಏರುತ್ತಿರುವಾಗ ನಾನು ನನ್ನ ತಲೆಯನ್ನು ಹಸುರು ಹುಲ್ಲುಗಳ ಎಡೆಯಿಂದ ಹೊಯ್ದಾಡಿಸುತ್ತಾ ಹೊರತಂದು ನಿನ್ನನ್ನು ಸ್ವಾಗತಿಸುತ್ತೇನೆ. ನಿನಗೆ ಅದರ ಅರಿವಾಗಲಿಲ್ಲವೇ?

ತಾಯಿಯು ಮಮತೆಯನ್ನು ತನ್ನ ಶಿಶುವಿನ ಮೇಲೆ ತೋರಿಸುವಂತೆ, ಹಿತವಾದ ಮಾರುತನ ರೂಪದಲ್ಲಿ ಎಲ್ಲೆಲ್ಲೂ ವ್ಯಾಪಿಸಿದ್ದು, ನಾನು ನಿನ್ನ ಮೇಲಿನ ಪ್ರೀತಿಯನ್ನು ವ್ಯಕ್ತಪಡಿಸುತ್ತೇನೆ. ನಿನ್ನ ಅರಿವಿಗೆ ಇದು ಬರಲಿಲ್ಲವೇ?

ನಿರ್ಜನ ಕಾಡಿನ ಬದಿಯಲ್ಲಿ ಮೌನವಾಗಿ ಮಲಗಿರುವ ಸಣ್ಣ ಹೊಳೆಯಂತೆ, ಮುಂಜಾನೆ ಮತ್ತು ಮುಸ್ಸಂಜೆಯ ಸುಂದರ ಬಣ್ಣಗಳ ಮೂಲಕ ನನ್ನ ಹೃದಯವನ್ನು ತೆರೆದು ನಮ್ಮ ಪ್ರೀತಿಯ ಮುನ್ನುಡಿಯನ್ನು ತಿಳಿಸುವೆ.

ಇಡೀ ಜಗತ್ತು ಗಾಢನಿದ್ರೆಯಲ್ಲಿರುವಾಗ, ನಿಶೆಯ ಸೊಂಟದಲ್ಲಿ ಕುಳಿತ ಮಕ್ಕಳಂತೆ ಮಿನುಗುತ್ತಿರುವ ನಕ್ಷತ್ರಗಳ ಮಧ್ಯೆ ನನ್ನ ದೂತನಂತೆ ನಿಧಾನವಾಗಿ ಮಂದ ಮಾರುತ ಬೀಸುವುದು. ನಾವು ಒಂದೇ ಎಂಬ ಸಂದೇಶವನ್ನು ನಾನು ಹೇಳಿಕಳುಹಿಸುತ್ತೇನೆ. ನಿನಗಿದು ಅರ್ಥವಾಗಲಿಲ್ಲವೇ?

ಇಲ್ಲದಿದ್ದರೆ ಅದರ ಮದವೇರಿದ ಸ್ಥಿತಿಯಲ್ಲಿ ನೀನು ಶಾಂತಿ, ಸಮಾಧಾನ ಸಂತೋಷ ಮತ್ತು ಮಮತೆ ತುಂಬಿಕೊಂಡು ಇರಲು ಸಾಧ್ಯವಿಲ್ಲ. ಪರ್ವತದ ತಪ್ಪಲಿನ ಹಸಿರು ಹುಲ್ಲಿನ ಮೇಲೆ ನನ್ನ ಮಡಿಲಲ್ಲಿ ಕುಳಿತು ನನ್ನ ಸಮಾಧಾನ ಮತ್ತು ನೋಟಕ್ಕೆ ವ್ಯರ್ಥ ಪ್ರಯತ್ನ ಮಾಡುತ್ತಿರಲಿಲ್ಲ. ನಕ್ಷತ್ರಗಳಾಚೆ ನನ್ನನ್ನು ನೋಡುವ ಬದಲು ನನ್ನ ನಾಮವನ್ನು ಗಟ್ಟಿಯಾಗಿ ಜಪಿಸುತ್ತಾ ರಾತ್ರಿಯ ಮೌನವನ್ನು ಭೇದಿಸುವ ಪ್ರಯತ್ನ ಮಾಡುತ್ತಿರಲಿಲ್ಲ.

ನಿನಗೆ ದೈವಕೃಪೆ ದೊರೆಯುತ್ತಿತ್ತು. ಮತ್ತು ಮುಕ್ತಿಗಾಗಿ ನೀನು ಬೇರೆ ಲೋಕವನ್ನು ಪ್ರವೇಶಿಸುತ್ತಿರಲಿಲ್ಲ. ಸೂರ್ಯೋದಯದಲ್ಲಿ ನೀನು ಉಸಿರನ್ನು ನಿಗ್ರಹಿಸುವ ಸಾಹಸ ಮಾಡುತ್ತಿರಲಿಲ್ಲ. ಗಂಗೆಯ ತೀರದಲ್ಲಿ ಕುಳಿತು ನಿನ್ನ ಕಣ್ಣುಗಳನ್ನು ಮುಚ್ಚಿಕೊಂಡಿರುವ ತಪ್ಪನ್ನು ಎಂದಾದರೂ ಮಾಡಿರುವೆಯಾ?

* * * *

೪೭. ಪರಮಾನಂದಕ್ಕೆ ದಾರಿ

ನಿನ್ನ ಕಣ್ಣುಗಳು ಅಮೃತವನ್ನು ಚಂದ್ರನಿಗೆ ಒದಗಿಸಿ, ಹೃದಯಕ್ಕೆ ಶಾಂತಿಯನ್ನು ಕೊಡುತ್ತದೆ ಎಂದು ಅವರು ಹೇಳುತ್ತಾರೆ. ಆದರೆ ನಾನೆಂದೂ ಆ ಕಣ್ಣುಗಳನ್ನು ಸಂಧಿಸುವ ಉದ್ಧಟತನ ತೋರಿಸಲಿಲ್ಲ. ಆ ಯೋಚನೆ ನನಗೆ ಬರಲೇ ಇಲ್ಲ.

ನಿನ್ನ ಕೆಳತುಟಿಯು ಅಮೃತದ ನೆಲೆಯಂತಿದೆ ಮತ್ತು ಸ್ವರ್ಗದ ಮಹಾದ್ವಾರ ಎಂದು ಅವರು ಹೇಳುತ್ತಾರೆ. ಆದರೆ ನಾನು ಮಾತ್ರ ಅಹಂಕಾರದಿಂದ ಅದರ ಮೇಲೆ ನನ್ನ ತುಟಿಗಳನ್ನಿಡಲು ಪ್ರಯತ್ನಿಸಲಿಲ್ಲ. ಆ ಆಲೋಚನೆಯೇ ನನಗೆ ಹೊಳೆಯಲಿಲ್ಲ.

ನಿನ್ನ ಹೃದಯವು ಸಂಗೀತ ದೇವತೆಯ ಸ್ವರ್ಗೀಯ ದೇಗುಲ ಮತ್ತು ವಿಶ್ವವು ಅದರಿಂದ ವ್ಯಕ್ತವಾಗುತ್ತದೆ ಎಂದು ಅವರು ಹೇಳುತ್ತರೆ. ಆದರೆ ನಾನು ಮಾತ್ರ ಅಹಂಕಾರದಿಂದ ನನ್ನ ಹೃದಯವು ಅದನ್ನು ಸಂಧಿಸುವುದಕ್ಕೆ ಪ್ರಯತ್ನಿಸಲಿಲ್ಲ. ಆ ಯೋಚನೆ ನನಗೆ ಹೊಳೆಯಲೇ ಇಲ್ಲ.

ನಿನ್ನ ವಕ್ಷಸ್ಥಳವು ದಣಿದ ವಿವೇಚನಾ ಶಕ್ತಿಗೆ ಶಾಂತಿ, ನೆಮ್ಮದಿಯ ತಾಣ. ಮತ್ತು ಅತೀಂದ್ರಿಯವಾದ ಸ್ವ ಅರಿವಿನ ಮಾನಸಿಕ ಸ್ಥಿತಿಯನ್ನು ಪ್ರವೇಶಿಸಲು ಸಾಧ್ಯ ಮಾಡುವುದು. ಆದರೆ ಮನಸ್ಸಿನ ಶಾಂತತೆಗಾಗಿ ನಾನು ಎಂದೂ ಉದ್ಧಟತನ ತೋರಿಸಿಲ್ಲ. ಆ ಕಲ್ಪನೆ ಕೂಡ ನನಗೆ ಹೊಳೆದಿರಲಿಲ್ಲ.

ಅವರೆಲ್ಲ ಆಶ್ಚರ್ಯಚಕಿತರಾಗಿದ್ದಾರೆ. ಆದರೆ ನನ್ನ ಆರಾಧನೆ ಮೂಲ ಭೂತವಾಗಿ ಅನನ್ಯ. ನಿನ್ನಲ್ಲಿ ನಾನು ಜಗನ್ಮಾತೆಯನ್ನು ಕಂಡು ಧನ್ಯನಾದೆ. ನನ್ನ ಕಣ್ಣುಗಳು, ನಿನ್ನ ದೇಹದ ಯೋಚನೆಯನ್ನು ಮೀರಿ ಮೇಲೇರಿದೆ ಮತ್ತು ಬಳ್ಳಿಯಂತಿರುವ ನನ್ನ ದೇಹ ನಿನ್ನ ಪಾದಕಮಲಗಳನ್ನು ಸುತ್ತಿಕೊಂಡಿದೆ. ಎಂದಾದರೂ ಹಿಂದೆ, ನನಗೆ ಇಂತಹ ಶಾಂತಿ ಮತ್ತು ಪರಮಸುಖದ ಅನುಭವದ ಅದೃಷ್ಟ ಸಿಕ್ಕಲು ಸಾಧ್ಯವಿತ್ತೇ?

* * * *

೪೮. ಸೇವೆ ಮಾಡಲು ಅರ್ಹತೆ

"ನಿನ್ನ ಸಂಗಾತಿ ಯಾರು?"

"ನಾನೇ ನನ್ನ ಗುರುವೇ" ಎಂದು ಚಿಂದಿ ಬಟ್ಟೆ ತೊಟ್ಟವನು ಉತ್ತರಿಸಿದ.

"ನೀನು ನನ್ನ ಸಂಗಾತಿಯೇ? ಓ ನನ್ನ ಬಡ ನಿರ್ಗತಿಕ ಪ್ರಿಯೆ"

"ಹೌದು ನನ್ನೊಡೆಯ. ನಾನು ನಿಸ್ಸಂಶಯವಾಗಿ ಪ್ರಭುವಿನ ಬಳಿ ಇರುವೆ. ನಿನಗಾಗಿ ಉಸಿರಾಡಿ, ನಿನಗಾಗಿ ಸಾಯುತ್ತೇನೆಂಬ ನಂಬಿಕೆ ಮತ್ತು ದೃಢ ಸಂಕಲ್ಪ ನನ್ನಲ್ಲಿದೆ."

"ಹಾಗಾದರೆ ನನ್ನ ಜೀವನದ ಧ್ಯೇಯ..."

"ಹೌದು ನನ್ನ ರಕ್ಷಕ! ನಿನಗಾಗಿ ದುಡಿಯುವಾಗ ನಾನು ನನ್ನ ದೇಹ ನಾಶವಾಗುತ್ತದೆಂಬ ಭಯದಿಂದ ಹಿಂಜರಿಯುವುದಿಲ್ಲ. ರಕ್ತವನ್ನು ನೀರನ್ನಾಗಿ ಮಾಡುತ್ತೇನೆ."

"ನಿನಗೆ ಅವಮಾನವಾಗಿ, ನಿನ್ನನ್ನು ತಿರಸ್ಕಾರದಿಂದ ನೋಡಬಹುದೆಂದು ನಿನಗೆ ಗೊತ್ತಿಲ್ಲ. ನಿನ್ನನ್ನು ಕ್ರಿಸ್ತ, ಸೊಕ್ರೆಟಿಸ್ ಮತ್ತು ಮನ್ಸೂರರಂತೆ ಕಾಣುವ ಸಾಧ್ಯತೆ ಇದೆ."

"ಅಂತಹ ಎಲ್ಲ ಸಂದರ್ಭಗಳಲ್ಲಿ, ನನ್ನೊಡೆಯ! ನಿನ್ನ ಪ್ರೀತಿಯೇ ನನಗೆ ಆಶೀರ್ವಾದ. ಅದಕ್ಕಾಗಿಯೇ ನಾನು ಕಾಯುತ್ತಿರುವೆ."

"ಹಾಗಾದರೆ ಖಂಡಿತವಾಗಿ ನಿನ್ನನ್ನು ಸ್ವೀಕರಿಸಲಾಗುವುದು. ನೀನು ಖಂಡಿತವಾಗಿ ನನ್ನವನು ಎಂಬುದರಲ್ಲಿ ಸಂಶಯವಿಲ್ಲ.

* * * *

೪೯. ಪ್ರೀತಿಯ ಸಂತೃಪ್ತಿ

ಎಂದಿನಂತೆಯೇ ಇಂದು ಬೆಳಗಾಯಿತು. ದೇವಸ್ಥಾನದ ಬಾಗಿಲು ತೆರೆಯಲ್ಪಟ್ಟಿತು. ಪೂಜೆ ಮುಗಿದಿತ್ತು. ಮತ್ತು ದೇವರು ತನ್ನ ಭಕ್ತರ ಮೇಲೆ ವಿಶೇಷ ಕೃಪೆ ಹರಿಸಿದ. ನಾನು ನನ್ನ ಮೆಚ್ಚಿನ ಹಾಡನ್ನು ಹಾಡಿದೆ. ಎಲ್ಲರೂ ದೇವರ ದರ್ಶನ ಪಡೆದವರಂತೆ ಅದೃಷ್ಟಶಾಲಿಗಳು. ಭಕ್ತಾದಿಗಳು ಆತನ ವೈಭವವನ್ನು ಮುಚ್ಚಲು ಆರಂಭಿಸಿದರು. ಕೆಲವರು ಹಾರಗಳನ್ನು ಆತನಿಗೆ ಹಾಕಿದರು. ಕೆಲವರು ಆತನ ಸೊಂಟದ ಸುತ್ತ ಕೈ ಬಳಸಿ ಸಂತೋಷಪಟ್ಟರು. ಉಳಿದವರು "ನನ್ನೊಡೆಯ ನನ್ನ ಪ್ರಿಯ" ಎಂದು ಉದ್ಘೋಷಿಸುತ್ತಾ ತಮ್ಮ ಪ್ರಭುತ್ವವನ್ನು ತೋರಿಸುತ್ತಿದ್ದರು.

ಕೊನೆಗೊಮ್ಮೆ ಪ್ರಭು ತನ್ನ ಅಮೃತದ ಸೀಸೆಯಂತಿರುವ ಮನಮೋಹಕ ಕಣ್ಣುಗಳಿಂದ ನನ್ನನ್ನು ಗಮನಿಸಿದ. ಪ್ರೀತಿಯ ಮಳೆ ಸುರಿಸಿ ನನ್ನನ್ನು ನೆನೆಯಿಸಿತು. ಮತ್ತು ಆತ ಹೇಳಿದ "ಓ ನನ್ನ ಪ್ರೀತಿಯ ಗಾಯಕನೆ! ನಿನ್ನಲ್ಲಿ ವಾತ್ಸಲ್ಯ ಇಲ್ಲವೆ? ನೀನು ನನ್ನ ಅಚ್ಚುಮೆಚ್ಚಿನವನಾಗಿ, ಮತ್ತು ನನ್ನ ಶಿಕ್ಷಕನಾಗಿ ಇರುವ ಇಚ್ಛೆ ಇಲ್ಲವೇ?" "ಇಲ್ಲ ನನ್ನ ಸ್ವಾಮಿ. ಆಕರ್ಷಕವಾದ ನಿನ್ನ ಕಣ್ಣುಗಳು ನನ್ನ ಕಣ್ಣುಗಳಲ್ಲಿ ಕೇಂದ್ರೀಕರಿಸಲಿ. ನಿನ್ನ ಪ್ರೀತಿಯ ಸುಂದರ ಹೊಳೆಯಲ್ಲಿ ನಾನು ಮೀಯುವಂತಾಗಲಿ, ನಿನ್ನ ಪ್ರೀತಿ ಸಾಗರದ ಒಂದು ಬಿಂದು ನನಗೆ ಸಾಕು. ನನ್ನ ಈ ಉದಾತ್ತ ಕೆಲಸವನ್ನು ಶಾಂತಿಯಿಂದ ಯಾವ ಗೊಣಗಾಟವೂ ಇಲ್ಲದೆ ಮುಗಿಸುವಂತಾಗಲಿ."

ದೇವರು ಆಮೇಲೆ ತನ್ನ ಪಾದಗಳತ್ತ ಕಣ್ಣು ಹಾಯಿಸಿದ. ನಾನು ಆ ಪಾದಗಳನ್ನು ಚುಂಬಿಸಿ ಧನ್ಯನಾದೆ. ಅದೇ ಸ್ವರ್ಗೀಯ ಸಂಗೀತದಿಂದ ಕೂಡಿದ ಪ್ರಾರ್ಥನೆಯೊಡನೆ ನಾನು ಆ ದೇಗುಲದ ಮಹಾದ್ವಾರದಿಂದ ಹೊರಬಂದೆ.

ಆ ಸಂದರ್ಭದಲ್ಲಿ ನನ್ನ ಹಾಡಿನ ಕೊನೆಯ ಸಾಲುಗಳು ಇಂತಿವೆ. "ಓ ಪ್ರೀತಿ! ಓ ನನ್ನೊಲವಿನ ಸ್ವಾಮಿ! ನಾನೆಂದೂ ನಿನ್ನ ಗುರು ಆಗಲು ಆಶಿಸಲಿಲ್ಲ. ಕನಸು ಕಾಣಲೂ ಇಲ್ಲ. ಅಥವಾ ಗುಲಾಮನಂತೆ ಬದುಕುವುದನ್ನು ನಾನು ಒಪ್ಪುವುದಿಲ್ಲ. ನನ್ನ ಸಂಗೀತದ ಮೂಲಕ ನೀನು ವಿಗ್ರಹದಲ್ಲಿ ಸ್ಪಷ್ಟವಾಗಿ ಕಂಡುಬರುವೆ. ನನ್ನ ಪ್ರೀತಿಯು ನಿನ್ನನ್ನು ಪರಮಾನಂದ ಹೊಂದಿದವನ್ನಾಗಿ ಮತ್ತು ಉಲ್ಲಸಿತನನ್ನಾಗಿ ಮಾಡುತ್ತದೆ. ಅಷ್ಟು ಕೃತಜ್ಞತೆ ಖಂಡಿತವಾಗಿಯೂ ನನಗೆ ಸಾಕು.

* * * *

೫೦. ನೀನೇ ನನ್ನ ಸರ್ವಸ್ವ

ನಿನ್ನ ಕಣ್ಣಲ್ಲಿ ಗಂಗೆಯು ನಿರಂತರವಾಗಿ, ಅವಿಚ್ಛಿನ್ನವಾಗಿ ಹರಿಯುತ್ತಿರುವಾಗ ನನ್ನ ಮನಸ್ಸಿನ ಕೊಳೆಯನ್ನು ಕಳೆಯಲು ಬೇರೆಡೆಗೆ ನಾನ್ಯಾಕೆ ಹೋಗಬೇಕು?

ನೀನು ಮಮತೆಯ ಪ್ರವಾದಿ. ಹಾಗಿರುವಾಗ ನಾನೇಕೆ ಮಮತೆಯ ದಾಹವನ್ನು ತಣಿಸಲು ಅಲೆದಾಡಬೇಕು?

ನಿನ್ನಲ್ಲಿ ವಿಶ್ವವೇ ಉಸಿರಾಡುತ್ತಿದೆ. ಅಂತೆಯೇ ನೀನು ವಿಶ್ವದಲ್ಲಿ ಉಸಿರಾಡುತ್ತಿ. ಹೀಗಿರುವಾಗ ನಾನು ನಿನಗಾಗಿ ವಿಶ್ವದಲ್ಲಿ ಅಲ್ಲದೆ ಮತ್ತೆಲ್ಲಿಗೆ ಹೋಗಲಿ?

ನೀನು ಒಂದು ಪ್ರೀತಿಯ ಬಟ್ಟಲು, ಒಬ್ಬ ಶಾಂತಿ ದೇವತೆಯನ್ನು ನಿನ್ನಲ್ಲಿ ಅಲ್ಲದೆ ಮತ್ತೆಲ್ಲಿ ನಾನು ಪ್ರೀತಿ ಮತ್ತು ಶಾಂತಿಯನ್ನು ಹುಡುಕಲಿ?

ನಿನ್ನನ್ನು ಸೇವಿಸಿದ ಬಳಿಕ ಎಲ್ಲರೂ ಹುಟ್ಟು ಸಾವಿನ ಗಡಿಯನ್ನು ದಾಟಿ ಮೇಲಕ್ಕೇರುತ್ತಾರೆ. ಅಂತಹ ದೈವತ್ವದ ಬಟ್ಟಲು ನೀನು.

ಅಷ್ಟೊಂದು ಧಾರಾಳವಾಗಿ ಪ್ರೀತಿ, ಮಮತೆ, ಏಕೆ ಉದ್ಭವಿಸುತ್ತವೆ? ಇಂತಹ ಪ್ರಶ್ನೆಗಳು ಅನುಚಿತ. ಸರಿಯಲ್ಲ, ಅಂತಹ ಪ್ರಶ್ನೆಗಳನ್ನು ನಾನು ಕೇಳಲೇ ಬಾರದು.

ನದಿಯು ಸಮುದ್ರದತ್ತ ಹರಿಯುವಂತೆ ನಾನು ನಿನ್ನ ಸಾಮಿಪ್ಯಕ್ಕೆ ಬಂದೇ ಬರುತ್ತೇನೆ. ಆದರೂ ಕೂಡ ನಾನದನ್ನು ಒಪ್ಪಿಕೊಂಡೆ.

ನಿನ್ನ ಪ್ರೀತಿಯ ಹೊಳೆಯು, ಹೃದಯದ ಮಲಿನತೆಯನ್ನು ನಾಶ ಮಾಡುತ್ತದೆ. ಕ್ಷುಲ್ಲಕ, ಕೆಟ್ಟ ಹೆಬ್ಬಯಕೆ ಅಥವಾ ಯೋಚನೆಗಳನ್ನು ಹೋಲಾಡಿಸಿ ಪವಿತ್ರ ನೀರಿನಿಂದ ಪರಿಶುದ್ಧನನ್ನಾಗಿ ಮಾಡುತ್ತದೆ.

ಉಸಿರಾಟದ ಮೇಲೆ ನಿರ್ಬಂಧ ಮಾಡಿ, ನಿನ್ನ ಪವಿತ್ರ ನಾಮವನ್ನು ಜಪಿಸಿ ಮತ್ತು ಕಣ್ಣು ಮುಚ್ಚಿಕೊಂಡು ಚಿತ್ತೈಕಾಗ್ರತೆಗಾಗಿ ಪ್ರಯತ್ನ ಏತಕ್ಕಾಗಿ ಮಾಡಲಿ? ನನ್ನ ಕಣ್ಣ ನೀರಲ್ಲಿ ನಿನ್ನ ಕೃಪಾದೃಷ್ಟಿ ಮಂದಹಾಸ ಬೀರುತ್ತದೆ. ನಾನು ಅದರ ರಮಣೀಯ ಸೌಂದರ್ಯವನ್ನು ಅನುಭವಿಸುತ್ತೇನೆ. ಅಷ್ಟರ ಮಟ್ಟಿನ ಸಿದ್ಧಿ ನನಗೆ ಸಾಕು.

ನೀನೇ ನನ್ನ ಸಿದ್ಧಿ. ಮತ್ತೆಲ್ಲಿ ನಾನದಕ್ಕೆ ಪ್ರಯತ್ನಿಸಲಿ? ಮೋಕ್ಷ ಪಡೆಯಲು ಮತ್ತು ಸಿದ್ಧಿಗಳಿಸಲು ಮತ್ತೆಲ್ಲಿ ನಾನು ಹೋಗಲಿ? ನಾನು ನಿನ್ನಲ್ಲಿಗಲ್ಲದೆ, ಮತ್ತೆಲ್ಲೂ ಹೋಗುವುದಿಲ್ಲ. ನೀನೇ ನನ್ನ ಮುಕ್ತಿ. ನೀನೇ ನನ್ನ ಸಿದ್ಧಿ.

* * * *